ರುಜುವಾತು

ಸಂ: ಯು. ಆರ್. ಅನಂತಮೂರ್ತಿ

ಸಂಚಿಕೆ : 37, ಅಕ್ಟೋಬರ್ 1994

37

ಸೃಜನಶೀಲ ಹೊಸ ಪ್ರಯೋಗಗಳಿಗಾಗಿ,
ಹೊಸ ದಿಕ್ಕುಗಳ ಹುಡುಕಾಟಕ್ಕಾಗಿ,
ನಮ್ಮ ಸಾಮಾಜಿಕ ಸಂದರ್ಭದ ಶೋಧಕ್ಕಾಗಿ,
ತ್ರೈಮಾಸಿಕ ಪತ್ರಿಕೆ...... ಋಜುವಾತು

ಋಜುವಾತು -37

ಅಕ್ಟೋಬರ್ ೧೯೯೪

ಕವಿ - ಕಾವ್ಯ
ಹೆಗ್ಗೋಡು - ೫೭೭ ೪೧೭
ಶಿವಮೊಗ್ಗ, ಕರ್ನಾಟಕ

ಸಂಪಾದಕ
ಯು. ಆರ್. ಅನಂತಮೂರ್ತಿ

ವ್ಯವಸ್ಥಾಪಕ ಸಂಪಾದಕ
ಪ್ರಸನ್ನ

ಛಾಯಾ ಚಿತ್ರಗ್ರಾಹಕ
ಕೆ. ಜಿ. ಸೋಮಶೇಖರ್

ಸಹ ಸಂಪಾದಕ
ವಿಲಿಯಂ

ಸಂಪಾದನ ಸಹಾಯ
ಬಂದಗದ್ದೆ ರಾಧಾಕೃಷ್ಣ
ಪ್ರಭಾಕರ ಸಾಂಶಿ

ವಿತರಣೆ
ಗಂಗಾಧರ ಎನ್. ಸಿ
ಗೋಪಾಲಕೃಷ್ಣ. ಎಚ್. ಎಸ್

ಅಕ್ಷರ ಜೋಡಣೆ
ಶ್ರೀಲಕ್ಷ್ಮಿ. ಎಸ್. ಭಟ್
ಸವಿತಾ ಕಾಕಾಲ್
ಪ್ರಮಥ. ಹೆಚ್. ಎನ್

ಚಂದಾವಿವರ

ಬಿಡಿಪ್ರತಿ	: ೧೬ /-
ವಾರ್ಷಿಕ	: ೪೦ /-
(ಸಾಂಸ್ಥಿಕ)	: ೫೦ /-
ಠೇವಣಿ ಯೋಜನೆ	: ೫೦೦ /-

ಚಂದಾಹಣವನ್ನ ಮನಿಆರ್ಡರ್ ಅಥವಾ ಡ್ರಾಫ್ಟ್ ಮೂಲಕ ಕಳುಹಿಸಬೇಕು. ಚೆಕ್ ಅಥವಾ ಡ್ರಾಫ್ಟ್ ಮೂಲಕ ಕಳುಹಿಸುವವರು ೭/- ಬ್ಯಾಂಕ್ ಕಮಿಷನ್ ಸೇರಿಸಿ ಕಳುಹಿಸಬೇಕು

ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಕಟಣೆಗಳು

(ಇತ್ತೀಚಿನ ಕನ್ನಡ ಪ್ರಕಟಣೆಗಳು)

ಬಾಸ . **ವಿ. ವೆಂಕಟಾಚಲಂ** ಅನು :ಕೆ. ಕೃಷ್ಣಮೂರ್ತಿ 45-00

ಕತ್ತಲೆಯಿಂದ ಕಗ್ಗತ್ತಲೆಗೆ . (ಪಂಜಾಬಿ ಕಾದಂಬರಿ)
ನರೇಂದ್ರ ಪಾಲ್ ಸಿಂಗ್ : ಅನು :ಪಿ. ಶಶಿಕಲಾ 40-00

ಜಾನಪದ ಗೀತಾಂಜಲಿ . (ಕನ್ನಡ ಜಾನಪದ ಗೀತೆ) ಡಿ. ಜವರೇಗೌಡ 25-00

ಕೆಂಪು ಮೀನು . (ಮಲೆಯಾಳಂ ಕಾದಂಬರಿ)ತಕಝಿ ಶಿವಶಂಕರ ಪಿಳ್ಳೈ.
ಅನು:ಎನ್. ಕಸ್ತೂರಿ 30-00

ಜಾನಪದ ಮತ್ತು ಗಿರಿಜನರ ಕಥೆಗಳು . ಎಲ್. ಆರ್. ಹೆಗಡೆ

ಯುಗಾಂತ . (ಮರಾಠಿ ಉದ್ಗ್ರಂಥ) ಡಾ. ಐರಾವತಿ ಕರ್ವೆ.
ಅನು:ಸರಸ್ವತಿ ಗಜಾನನ ರಿಷ್‌ಬುದ್ 30-00

ಭಾರತೀಯ ಸಾಹಿತ್ಯ ಮಾಲೆ. ಬಿಡಿ ಪ್ರತಿ 15- 00

ಪ್ರೇಮ್‌ಚಂದ್. ಪ್ರಕಾಶ್‌ಚಂದ್ರಗುಪ್ತ ಅನು:ಎಸ್. ಕೆ. ದೇಸಾಯಿ. **ಈಶ್ವರ್‌ಚಂದ್ರ ವಿದ್ಯಾಸಾಗರ**. ಹಿರಿನ್ಮಯ ಬ್ಯಾನರ್ಜಿ ಅನು: ಪಿ. ನರೇಗಲ್. **ಗಾಲಿಬ್. ಎಮ್. ಮುಜೀಬ್**, ಅನು:ಪಂಚಾಕ್ಷರಿ ಹಿರೇಮಠ್. **ತಾರಾಶಂಕರ ಬಂದ್ಯೋಪಾಧ್ಯಾಯ**. ಮಹಾಶ್ವೇತ ದೇವಿ, ಅನು: ವಿಜಯ. **ಕಲ್ಹಣ**. ಸೋಮನಾಥದರ್, ಅನು:ಬನ್ನಂಜೆ ಗೋವಿಂದಾಚಾರ್ಯ. **ಬುದ್ಧದೇವ ಬೋಸ್**. ಅಲೋಕೆರಂಜನ ದಾಸಗುಪ್ತ, ಅನು: ರಾಮಚಂದ್ರ ಶರ್ಮ. **ಶ್ರೀರಂಗ**. ಎನ್. ಕೆ. ಕುಲಕರ್ಣಿ. **ತಿರುವಳ್ಳುವರ್**. ಎಸ್. ಮಹಾರಾಜನ್, ಅನು:ಶ್ರೀನಿವಾಸ. **ಹೆಚ್. ಎನ್. ಆಪ್ಟೆ**. ಆರ್. ಬಿ. ಜೋಷಿ, ಅನು:ಎನ್. ಎಸ್. ಗದಗಕರ. **ರಾಧಾನಾಥ ರಾಯ್**. ಗೋಪಿನಾಥ ಮೊಹಂತಿ, ಅನು: ಎಸ್. ನಾಡಿಗ. **ರಾಜಾರಾಮಮೋಹನ ರಾಯ್**. ಸೌಮೇಂದ್ರನಾಥ ಟಗೋರ್, ಅನು:ಎಮ್. ರಾಮರಾವ್. **ರಾಹುಲ್ ಸಾಂಕೃತ್ಯಾಯನ** ಪ್ರಭಾಕರ ಮಾಚ್ವೆ, ಅನು: ಲಕ್ಷ್ಮೀನಾರಾಯಣ ಅರೋರ. **ವಲ್ಲತ್ತೋಳ್ ನಾರಾಯಣ ಮೆನನ್** ಬಿ. ಹೃದಯಕುಮಾರಿ, ಅನು : ಕೆ.ವಿ. ನಾರಾಯಣ. **ನಾಮದೇವ ಎಂ. ಜಿ.** ದೇಶಮುಖ, ಅನು: ಜಯತೀರ್ಥರಾಜಪುರೋಹಿತ ಮತ್ತು ಎಸ್. ಪಿ. ಪಾಟೀಲ. **ಜಯಶಂಕರ ಪ್ರಸಾದ್** ರಮೇಶ್ ಚಂದ್ರ ಶಹ, ಅನು: ಎಸ್. ಪಟ್ಟಣಶೆಟ್ಟಿ. **ಫಣೀಶ್ವರ ನಾಥ** ರೇಣು ಸುರೇಂದ್ರ ಚೌಧುರಿ, ಅನು: ಹೆಚ್. ಎಸ್. ಪಾರ್ವತಿ. **ನಾಮಕ್ಕಳ್ ರಾಮಲಿಂಗಮ್ ಪಿಳ್ಳೈ**, ಕೆ. ಆರ್. ಹನುಮಂತನ್. **ಯಶಪಾಲ್** ಕಮಲಪ್ರಸಾದ್. **ಶಿಶುನಾಳ ಶರೀಫ್ ಸಾಹೇಬರು** ಶಿವಾನಂದ ಗುಬ್ಬಣ್ಣವರ್. **ಬಾಬಾ ಫರೀದ್** ಬಲವಂತ ಸಿಂಗ್ ಅನಂದ್. **ಪಮ್ಮಲ್ ಸಂಪಂದ ಮುದುಲಿಯಾರ್**, ಎ. ಎನ್. ಪೆರುಮಾಳ್

ಪ್ರತಿಗಳಿಗಾಗಿ ಸಂಪರ್ಕಿಸಿ : ಸಾಹಿತ್ಯ ಅಕಾಡೆಮಿ ಪ್ರಾಂತೀಯ ಕಛೇರಿ,
109 ಜೆ. ಸಿ. ರಸ್ತೆ ಬೆಂಗಳೂರು- 560 002
ಫೋನ್: 221412

ಈ ಸಂಚಿಕೆಯಲ್ಲಿ

೭	ಸಂಪಾದಕನ ಟಿಪ್ಪಣಿಗಳು	ಯು. ಆರ್. ಅನಂತಮೂರ್ತಿ
೧೦	ಬೇತಾಳದ ಕತೆ	ಪ್ರಸನ್ನ
೧೪	ಧರ್ಮ ನಿರಪೇಕ್ಷತೆ : ಒಂದು ಮರು ಚಿಂತನೆ	ಜೋಸೆಫ್ ತಾರಮಂಗಲಮ್
೨೩	ನನ್ನ ರಸಯಾತ್ರೆ	ಮಲ್ಲಿಕಾರ್ಜುನ ಮನ್ಸೂರ್.
೩೪	ಅನಂತ ಜೀವನವೂ, ಅನಂತ ಸಂಗೀತವು	ಅಶೋಕ ವಾಜಪೇಯಿ
೩೭	ನಾಟಕಕಾರ ಗಿರೀಶ್ ಕಾರ್ನಾಡ್: ಸಾಹಿತ್ಯ ಚರ್ಚೆ	ಶೈಲೇಂದ್ರ ಬಂದಗದ್ದೆ
೩೯	ಅತಿಥಿ ಕವಿ ಅಂಕಣ	ಒರಿಯಾ ಕವಿ, ಶುಭೇಂದು ಮುಂಡ್
೬೪	ಕನ್ನಡ ಕಾವ್ಯ	ಜಿ. ಎಸ್. ಸಿದ್ದಲಿಂಗಯ್ಯ ಪ್ರತಿಭಾ ನಂದಕುಮಾರ್ ಎಸ್. ಮಂಜುನಾಥ್
೭೪	ಆರೋಗ್ಯಕರ ದೃಷ್ಟಿಯ ಹೊಸ ಹೊಳವುಗಳು	ನಾ. ಡಿಸೋಜ
೭೭	ಹಿತ್ತಲ ಗಿಡ ಮದ್ದಲ್ಲವೇ ?	ಪ್ರಸನ್ನ
೮೦	ಪುಸ್ತಕ ಪರಿಚಯ	ವಿಲಿಯಂ

ಈ ಸಂಚಿಕೆಯ ಲೇಖಕರು

ಜೋಸೆಫ್ ತಾರಮಂಗಲಮ್, ಬಿ. ೧೨, ಶಾಂತಿ ಕಿರಣ್ ಅಪಾರ್ಟ್‌ಮೆಂಟ್ಸ್, ೫೨, ನಂದಿದುರ್ಗ ರಸ್ತೆ, ಬೆಂಗಳೂರು - ೫೬೦ ೦೪೬

ಎಸ್. ಸಿ ಸದಾಶಿವ, ಇಂಗ್ಲಿಷ್ ವಿಭಾಗ, ಎಲ್. ಮತ್ತು ಎಸ್. ಬಿ. ಎಸ್. ಕಾಲೇಜು, ಸಾಗರ, ೫೭೭೪೦೧

ಅಶೋಕ್ ವಾಜಪೇಯಿ, ಸಂಸ್ಕೃತಿ ಸಚಿವಾಲಯ, ಶಾಸ್ತ್ರಿ ಭವನ, ನವದೆಹಲಿ ೧೧೦ ೦೦೧.

ಅಜಯ್ ಕುಮಾರ್ ಸಿಂಗ್, ಬಿ - ೪ , ಸೀನಿಯರ್ ಪೋಲಿಸ್ ಆಫೀಸರ್ಸ್ ಕ್ವಾರ್ಟರ್ಸ್, ೨೩ - ೨೪ ಹೌಸ್ ರೋಡ್, ಬೆಂಗಳೂರು - ೨೫.

ಗಿರೀಶ್ ಕಾರ್ನಾಡ್, ೧೪ / ೩೩, ೨ನೇ ಮೈನ್, ೮ನೇ ಬ್ಲಾಕ್, ಜಯನಗರ, ಬೆಂಗಳೂರು - ೮೨

ಶೈಲೇಂದ್ರ ಬಂದಗದ್ದೆ, ಕೆಳದಿ - ೫೭೭ ೪೦೧ ಶಿವಮೊಗ್ಗ

ಎಚ್. ಎಸ್. ಶಿವಪ್ರಕಾಶ್, ಇಂಗ್ಲಿಷ್ ಉಪನ್ಯಾಸಕರು, ೫೪೭, ೯ನೇ ಮೈನ್, ಎಂ.ಸಿ. ಲೇಔಟ್, ವಿಜಯನಗರ, ಬೆಂಗಳೂರು - ೪

ಜಿ. ಎಸ್. ಸಿದ್ಧಲಿಂಗಯ್ಯ, ಲಲಿತ ಕೃಪ , ೨೦೩, ೭ನೇ 'ಎ ' ಮೈನ್, ವಿಜಯನಗರ, ಆರ್.ಪಿ.ಸಿ ಲೇಔಟ್, ಬೆಂಗಳೂರು - ೪೦.

ಪ್ರತಿಭಾ ನಂದಕುಮಾರ್, ೬೮ ಎ, ೪ನೇ ಬ್ಲಾಕ್, ಪಶ್ಚಿಮ, ಜಯನಗರ, ಬೆಂಗಳೂರು - ೫೬೦ ೦೧೧.

ಎಸ್. ಮಂಜುನಾಥ್, ೧೫ನೇ ತಿರುವು, ಬಸವೇಶ್ವರ ಬಡಾವಣೆ, ಕೆ. ಆರ್. ನಗರ - ೫೭೧ ೬೦೨.

ನಾ. ಡಿಸೋಜ, ೧೫ / ೧೪ ೨ನೇ ಕ್ರಾಸ್, ನೆಹರು ನಗರ, ಸಾಗರ - ೫೭೭ ೪೦೧.

ಪ್ರಸನ್ನ, ಹೆಗ್ಗೋಡು, ಸಾಗರ - ಶಿವಮೊಗ್ಗ ೫೭೭ ೪೧೭.

ವಿಲಿಯಂ, ೧೫ / ೧೩, ೨ನೇ ತಿರುವು, ನೆಹರು ನಗರ, ಸಾಗರ, ಶಿವಮೊಗ್ಗ ಜಿಲ್ಲೆ. ೫೭೭ ೪೦೧.

ಯು. ಆರ್. ಅನಂತಮೂರ್ತಿ, "ಶ್ರೀ ಶೈಲಂ " ೨೨೪ ವಿದ್ಯಾರತ್ನ ನಗರ, ಮಣಿಪಾಲ - ೫೭೬ ೧೧೯.

ಸಂಪಾದಕನ ಟಿಪ್ಪಣಿಗಳು

ರುಜುವಾತು

ನನ್ನ ಬದುಕು, ನನ್ನ ಬರಹ

ನನ್ನ ಬರಹ ನನ್ನದೂ ಹೌದು, ನನ್ನದಲ್ಲದ್ದೂ ಹೌದು ಅನ್ನುತ್ತಾನೆ ಬ್ಲೇಕ್. ಸೃಜನಾತ್ಮಕತೆಯ ಮಂತ್ರದಂತಿದೆ ಈ ಮಾತು. ಲೇಖಕನ ಎಲ್ಲ ಸಾಕ್ಷಾತ್ಕಾರಗಳೂ ಆತ್ಮದ ಖಾಸಗಿತನದಲ್ಲಿ - ಆತನ ನೋವು ನಲಿವುಗಳ ಉತ್ಕಟತೆಯಲ್ಲಿ ಹುಟ್ಟುತ್ತದೆ.

ಕವಿ ಮೂಲತಃ ಸ್ವಗತನಾಗಿ ಸಂಭಾಷಿಸುತ್ತಾನೆ. ಆದರೂ ಸೃಜನಾತ್ಮಕ ಪ್ರಕ್ರಿಯೆಯ ಹಾದಿಯಲ್ಲಿ, ಎಲ್ಲೋ ಖಾಸಗಿತನ ಕರಗಿ ಬಿಡುತ್ತದೆ. ತನ್ನತನ ಮೀರಿಬಿಡುತ್ತದೆ. ಕೃತಿ, ಕಲಾವಿದನಿಂದ ವಂಚಿತವಾಗಿ ಅನಾಥವೇನೂ ಆಗುವುದಿಲ್ಲ, ಆದರೆ ಖಾಸಗಿ ಆಸ್ತಿಯಾಗಿಯೂ ಉಳಿಯುವುದಿಲ್ಲ.

ಕವಿಗೆ ಭಾಷೆ ನೀಡುವುದು ಆತನ ಜನಾಂಗ. ಸಮಕಾಲೀನರು ಮಾತ್ರವೆ ಅಲ್ಲ, ಸತ್ತವರೂ ಕೂಡಾ ಮಾತು ಒದಗಿಸುತ್ತಾರೆ. ಸತ್ತ ಕವಿಗಳೂ ಜೀವಂತ ಕಾವ್ಯ ಪರಂಪರೆಯಲ್ಲಿ ಭಾಗಿಗಳು. ಹಾಗಾಗಿ ಸೃಜನಾತ್ಮಕತೆ ಅಪ್ಪಟವಾಗಲಿಕ್ಕೆ ಖಾಸಗಿಯಾಗಬೇಕು, ಮಿಕ್ಕಂತೆ ಸಾರ್ವಜನಿಕವಾಗಬೇಕು. ಆಗಲೇ ಓದುಗರನ್ನ ಮಂತ್ರ ಮುಗ್ಧವಾಗಿಸಬಲ್ಲ ಅರ್ಥ ದಕ್ಕುತ್ತದೆ ಕೃತಿಗೆ. ಕೃತಿಕಾರನನ್ನ ಮತ್ತೆ ಬದುಕಿಗೆ ಹಿಂದಿರುಗಿಸುತ್ತದೆ ಕೃತಿ.

ಎಲ್ಲ ಭಾಷೆಗಳಲ್ಲೂ ಈ ಅದ್ಭುತ ಘಟಿಸುತ್ತಿರುತ್ತದೆ. ಕೆಲವು ದಿನಗಳ ಹಿಂದೆ ಕಲ್ಕತ್ತೆಯಲ್ಲಿ **ವಿಭೂತಿ ಭೂಷಣ ಬಂದ್ಯೋಪಾಧ್ಯಾಯ**ರ ಶತಮಾನೋತ್ಸವ ಸಮಾರಂಭದಲ್ಲಿ ಕೂತಿದ್ದೆ. ಅಲ್ಲಿ ಆಡುತ್ತಿದ್ದ ಮಾತುಗಳನ್ನ ಕೇಳುತ್ತಿದ್ದಂತೆ ನನಗನ್ನಿಸಿತು, **ವಿಭೂತಿ ಭೂಷಣ**ರ ಕಾದಂಬರಿಗಳ **ಅಪ್ಪು** ನನ್ನ ವಾರಿಗೆಯ ಬಂಗಾಲಿ ಲೇಖಕರ ಬೆಳವಣಿಗೆಯ ಅವಿಭಾಜ್ಯ ಅಂಗ ಆಗಿಬಿಟ್ಟಿದ್ದಾನೆ ಅಂತ. ಅವರೆಲ್ಲರ ಷೋಡಶದ ಒಂದಲ್ಲ ಒಂದು ಘಟ್ಟ, ಅಪ್ಪುವಿನೊಂದಿಗೆ ಹೊಂದಿಕೊಂಡಿದೆ ಅವರಿಗೆ. **ಸನ್ಸ್ ಅಂಡ್ ಲವರ್ಸ್** ಕಾದಂಬರಿಯ **ಪಾಲ್** ಒಂದು ವಾರಿಗೆಯ ಇಂಗ್ಲಿಷರಿಗೆ ಹೀಗೇ ಆಗಿದ್ದನಂತೆ.

ಲೇಖಕನಾಗಿ ನನ್ನ ಉತ್ತಮತರ ಸಾಧನೆ ಇದೇ ಆಗಬೇಕು. ನನ್ನ ಬರವಣಿಗೆಯ ಬಗ್ಗೆ, ಇದು ನನ್ನದೂ ಹೌದು, ನನ್ನದಲ್ಲದ್ದೂ ಹೌದು ಎಂದು ಅಭಿಮಾನ ಪಡಲಿಕ್ಕೆ ಸಾಧ್ಯವಾಗಬೇಕು. ಆದರೆ ಲೇಖಕ ಪ್ರಜ್ಞಾಪೂರ್ವಕ ನಿರ್ಧಾರದಿಂದ ಹೀಗೆ ಬರೆಯಲಿಕ್ಕೆ ಹೊರಡಬಾರದು. ಬರವಣಿಗೆ ಯೋಜನೆಯಲ್ಲ. ಸೃಜನಾತ್ಮಕತೆಗೊಂದು ನಿರ್ದಿಷ್ಟ ಕಾರ್ಯಕ್ರಮವಿಲ್ಲ. ಅದು ಘಟಿಸಬೇಕು ಅಷ್ಟೆ. ಒಂದು ಜನಾಂಗದ ಧ್ವನಿಯಾಗುತ್ತೇನೆ ಎಂದು ನಿರ್ಧರಿಸಿ ಹೊರಟವನು ಮೂರ್ಖಮಾತುಗಳನ್ನ ಉದುರಿಸುವ ಬೊಗಳೆ ವ್ಯಕ್ತಿ ಆಗಬಲ್ಲನು ಅಷ್ಟೆ.

(ಕೇರಳದ ಆಲ್‌ವೆ ಎಂಬಲ್ಲಿ ಸೆಪ್ಟೆಂಬರ್ ೧೭, ೧೯೯೪ರ ರಿಂದ ೨೦ ರವರೆಗೆ ಒಂದು ಬೃಹತ್ ಸಾಹಿತ್ಯಗೋಷ್ಠಿ ನಿಯೋಜಿತವಾಗಿತ್ತು. ನಿಯೋಜಕರು "ಸುರಭಿ" ಎನ್ನುವ ಸಾಂಸ್ಕೃತಿಕ ಸಂಘಟನೆ. ಎಲ್ಲ ಇಪ್ಪತ್ತೆರಡು ಭಾರತೀಯ ಭಾಷೆಗಳಿಂದ, ಇನ್ನೂರಕ್ಕೂ ಮಿಗಿಲಾದ ಲೇಖಕರು ಅಲ್ಲಿ ನೆರೆದಿದ್ದರು. ಓಣಂ ಉತ್ಸವದ ಸಂಭ್ರಮದಲ್ಲಿ ನಡೆದ ಸಾಹಿತ್ಯಗೋಷ್ಠಿಯ ಉದ್ಘಾಟನಾ ಭಾಷಣದ ಕನ್ನಡ ಅನುವಾದವಿದು)

ರಾಷ್ಟ್ರೀಯ ಮಟ್ಟದ ಈ ಸಾಹಿತ್ಯ ಗೋಷ್ಠಿಯಲ್ಲಿ ಕನ್ನಡವನ್ನ ಪ್ರತಿನಿಧಿಸಿದ್ದ ಇತರ ಲೇಖಕರೆಂದರೆ

ಶಿವರಾಮ ಕಾರಂತರು,

ಶಾಂತಿನಾಥ ದೇಸಾಯಿಯವರು

ಶಿವರುದ್ರಪ್ಪನವರು

ಸಿದ್ದಲಿಂಗಯ್ಯ,

ಪ್ರಸನ್ನ,

ಡಿ. ಆರ್. ನಾಗರಾಜ್,

ಪ್ರತಿಭಾ ನಂದಕುಮಾರ್,

ಎಚ್. ಎಸ್. ಶಿವಪ್ರಕಾಶ್,

ಶೂದ್ರ ಶ್ರೀನಿವಾಸ್,

ಅಗ್ರಹಾರ ಕೃಷ್ಣಮೂರ್ತಿ, ಹಾಗೂ

ಎಚ್. ಎಸ್. ವೆಂಕಟೇಶಮೂರ್ತಿ.

ರುಜುವಾತು ವಿಶೇಷ



ಬೇತಾಳದ ಕತೆ



ಪ್ರಸನ್ನ

ನಾನೊಂದು ಬೇತಾಳವನ್ನ ಬೆನ್ನಲ್ಲಿ ಹೊತ್ತಿದ್ದೇನೆ. ಬೇತಾಳವೆಂದರೆ ಪ್ರೇತ; ಆದರೂ ಆಕರ್ಷಕವಾದದ್ದು; ಸುಂದರ ಕತೆಗಳನ್ನ ಹೇಳುತ್ತದೆ ; ದಾರಿ ಸವೆಸಲು ಸಹಾಯಮಾಡುತ್ತದೆ ; ಪ್ರಶ್ನೆಗಳನ್ನ ಕೇಳುತ್ತದೆ. ಉತ್ತರಿಸದೆ ಹೋದರೆ ತಲೆ ಹೋಳು ಮಾಡುತ್ತದೆ. ತಲೆ ನೋವು ತರಿಸುತ್ತದೆ. ಬೇತಾಳದಿಂದಾಗಿ, ಪ್ರಶ್ನಿಸುವ ಜಾಯಮಾನ ನನಗೂ ಅಂಟಿ ಬಿಟ್ಟಿದೆ.

ಈಗ ಬೇತಾಳನ ಬೆನ್ನು ಹತ್ತುವ ಛಲ ದೂರವಾಗಿದೆ. ಆದರೂ ಪ್ರಶ್ನಿಸುವ ಚಪಲ ಬಿಟ್ಟಿಲ್ಲ. ಇರಲಿ.

ಬೇತಾಳದ ಒಂದು ಕತೆ, ಭರತವರ್ಷಕ್ಕೆ ಸಂಬಂಧಿಸಿದ್ದು. ಯಥಾ ಪ್ರಕಾರ ಕತೆ ಹೇಳಿ, ಈ ಕೆಳಗಿನಂತೆ ಪ್ರಶ್ನೆ ಮಾಡುತ್ತದೆ ಬೇತಾಳ,

ಹೇಳು !ಈ ದೇಶ ಹೀಗೆಯೇ ಉಳಿದೀತೆ ? ಛಿದ್ರವಾಗಿ ಹೋದೀತೆ ? ಬರಿದೆ ಒಂದೆರೆಡು ವರ್ಷಗಳ ಅಂತರದಲ್ಲಿ ಹಲವು ದೇಶಗಳು ದಾರ್ಮಿಕ ವಿಕೋಪಕ್ಕೆ ಸಿಕ್ಕು, ಸಿಡಿದು ಹೋಗಿರುವಾಗ ಭರತಖಂಡದ್ದೇನು ಮಹಾ ? ನಾನು, ನೇರ ಉತ್ತರ ಕೊಡದೆ ನುಣುಚಿಕೊಳ್ಳುತ್ತೇನೆ. ಸುತ್ತಿ ಬಳಸಿ ಮಾತನಾಡುತ್ತೇನೆ.

ಇತ್ತಿತ್ತಲವರೆಗೆ ನಮಗೊಂದು ಧೈರ್ಯವಿತ್ತು. ನಮಗೊಂದು ಪರಂಪರೆಯಿತ್ತು, ನಮ್ಮನ್ನ ಅದು ಕಾಯುತ್ತದೆ ಎನ್ನುವ ಭರವಸೆ ಇತ್ತು. ಆದರೇನು ? ಪರಂಪರೆ ಭಗವಾದ್ವಜದಡಿ ಕೂತಿದೆ. ಸಾವರಕರರಿಗೂ ಸಾಧ್ಯವಾಗದ್ದು ಅದವಾನಿಯವರಿಗೆ ಸಾಧಿಸಿಬಿಟ್ಟಿದೆಯೊ ಎಂಬ ಅನುಮಾನ ಕಾಡುತ್ತಿದೆ.

ಬೇತಾಳ, ಗಾಂಧೀಜಿಯನ್ನು ಮುಂದೆ ಒಡ್ಡಿತು.

ಗಾಂಧೀಜಿಗೆ ಉತ್ತರ ಗೊತ್ತಿತ್ತು. ವಿಭಜನೆಯ ಸಾಧ್ಯತೆ ನರಮೇಧಕ್ಕೆ ಎಡೆಕೊಟ್ಟಿತ್ತು. ಭರತವರ್ಷದ ಪುಣ್ಯ ಬರಿದಾಗುತ್ತಿದೆ ಎಂದು ಮೊದಲು ಅರಿತವರು ಅವರೇ. ನೆಹರು, ಪಟೇಲ್, ನಂಬೂದಿರಿಪಾದ್, ಯಾರಿಗೂ ಅರ್ಥವಾಗದ್ದು, ಗಾಂಧೀಜಿಗೆ ಅರ್ಥವಾಗಿತ್ತು. ಅಪ್ಪಟ ಜಾನಪದದ ಕೆರೆಗೆ ಹಾರ ಕಥಾನಕದಂತೆ, ಭರತ ವರ್ಷವೂ ಆವಾಹನೆಗೆ ಮೊದಲು, ಬಲಿಯನ್ನ ಬೇಡುತ್ತಿತ್ತು.

ಸಂಘ ಪರಿವಾರವನ್ನ ಛೇಡಿಸಿ ಛೇಡಿಸಿ, ಗುಂಡು ಹಾಕಿಸಿಕೊಂಡರು ಗಾಂಧೀಜಿ. ಅನಂತರದ ಕತೆ ನಮಗೆಲ್ಲ ತಿಳಿದೇ ಇದೆ. ಸಂಘ ಪರಿವಾರವನ್ನ ಶವಪೆಟ್ಟಿಗೆಯಲ್ಲಿಟ್ಟು ಮೊಳೆ ಜಡಿದರು ರೊಚ್ಚಿಗೆದ್ದ ಜನಗಳು. ಇಂಗ್ಲಿಷು ಸಿನಿಮಾಗಳಲ್ಲಿ ಡ್ರಾಕುಲಾನಿಗೆ ಗತಿ ಕಾಣಿಸಿದಂತೆ - ಥೇಟ್ ಅದೇ ಮಾದರಿಯಲ್ಲಿ ಗತಿ ಕಾಣಿಸಿದರು. ಅನಂತರದ ಒಂದಿಷ್ಟು ವರ್ಷ, ಗೌಜು ಗದ್ದಲ ಅಡಗಿ ಅರಾಮವಿತ್ತು.

ಸಿನಿಕ ಬೇತಾಳ ಮಾತು ಮುಂದುವರಿಸಿದೆ,

ತಪ್ಪು ನಿನ್ನದೆ. ಗಾಂಧೀಜಿಯವರ ಬಲಿ, ಪಿಶಾಚವನ್ನ ಎಲ್ಲ ಕಾಲಕ್ಕೂ ತೊಡೆದು ಹಾಕಿತೆಂಬ ಭ್ರಮೆ ಆವರಿಸಿದ್ದು ನಿನಗೆ ತಾನೆ ? ಎಂತೆಂಥ ಭ್ರಮೆಗಳು ನಿನ್ನವು. ಡಾಲರಿನ ಭ್ರಮೆ, ಪ್ರಗತಿಯ ಭ್ರಮೆ, ಜಂಗಮ ಮರೆತು ಸ್ಥಾವರ ಕಟ್ಟುವ ಭ್ರಮೆ. ಹೌದು. ಭ್ರಮೆಗೆ ಬಿದ್ದಿದೆ. ಮೊಳೆಗೆ ತುಕ್ಕು ಹಿಡಿದದ್ದು ಗೊತ್ತಾಗಲಿಲ್ಲ. ಗಾಂಧೀಜಿ ಎಂಬ ಶಿಲುಬೆ ಕೆಳ ಜಾರಿದ್ದು ಗೊತ್ತಾಗಲಿಲ್ಲ.

ಕುಹಕಿಗಳು ಅಲುಗಾಡಿಸಿ ನೋಡಿದರು. ಶವ ಪೆಟ್ಟಿಗೆ ಸಡಿಲಾಗಿತ್ತು. ಹಳೆಯ ಶವ ಹೊರಗೆಳೆದು ನಿಲ್ಲಿಸಿದರು. ಪರಮಾಶ್ಚರ್ಯ ಕಾದಿತ್ತು !

ಸತ್ತ ಚರ್ಮದಡಿ ಇಷ್ಟಿಷ್ಟೇ ರಕ್ತ ಶೇಖರಣೆಯಾಯಿತು. ಗಲ್ಲ ಗುಲಾಬಿಯಾಯಿತು. ತುಟಿ ಮುಗುಳುನಗುವಾಯಿತು. ಕಣ್ಣು ಕಾಮಾಕ್ಷಿಯಾಯಿತು. ಸತ್ತ ಶವ ಸುಂದರಾಂಗವಾಯಿತು. ಮತ್ತೇನು? ಬರಿದೆ ಕುಚೇಷ್ಟೆಗೆಂದು ಅಷ್ಟೆಲ್ಲ ಮಾಡಿದವರ ಉತ್ಸಾಹ ಮೇರೆ ಮೀರಿತು. ಶವದ ಮೆರವಣಿಗೆಯಾಯಿತು. ಚಪ್ಪಾಳೆ ಇಕ್ಕಿದರು, ರಥ ಎಳೆದರು. ಜನರು ನಿಬ್ಬೆರಗಾಗಿ ಜಂಗುಳಿಯಾದರು.

ಎಲ್ಲಿ ನೋಡಿದರೂ ಗೌಜು ; ಎಲ್ಲಿ ನೋಡಿದರೂ ಗದ್ದಲ ; ಸಂಭ್ರಮ. ಮೊದಲು ಅಯೋಧ್ಯೆಯಲ್ಲಿ. ಅನಂತರ ಹುಬ್ಬಳ್ಳಿಯಲ್ಲಿ. ಈಗ ನನ್ನ ಮನೆ, ಮಠ, ವಠಾರದಲ್ಲಿ.

ಒಮ್ಮೆ ಗಾಂಧೀಜಿಯನ್ನ ಯೌವನಸ್ಥ ತರುಣಿಯರು ಕೇಳಿದ್ದರಂತೆ, **ಎಲೆ ಘಾಟಿ ಮುದುಕನೆ ! ನೀನೆಷ್ಟು ವರುಷ ಬದುಕುವಿ ?** ಬೊಚ್ಚು ಬಾಯಿಯ ತುಂಬಾ ನಗು ತುಂಬಿಕೊಂಡು, ನೂರಿಪ್ಪತ್ತೈದು ಎಂದಿದ್ದರಂತೆ ಗಾಂದೀಜಿ. ಅಷ್ಟೆಲ್ಲ ಆಸೆಗಳಿದ್ದ ಮುದುಕ ವಿಭಜನೆಯ ನಂತರ ಮರಳ ಕಟ್ಟಡದಂತೆ ಕುಸಿದು ಬಿದ್ದಿದ್ದರು.

ವಿಭಜನೆ ಗಾಂಧೀಜಿಯ ಶಕ್ತಿ ಹೀರಿ ಬಿಟ್ಟಿತ್ತು. ಪ್ರಾರ್ಥನೆಗೆ ಜನರು ಬಾರದಂತೆ ಮಾಡಿತ್ತು. ಒಂದೇ ವರ್ಷದಲ್ಲಿ, ಒಂದುನೂರಾ ಇಪ್ಪತ್ತ ಐದು ವರ್ಷ ನವೆದು, ಬಯಸಿ, ಬಯಸಿ, ಸಾವನ್ನ ಅಪ್ಪಿದರು ಗಾಂಧೀಜಿ.

ಕಡೆಯ ದಿನಗಳ ಕತೆ ಹೇಳುವಾಗ ಕಾರ್ಯದರ್ಶಿ ಪ್ಯಾರೇಲಾಲನಿಗೆ ಕಣ್ಣೀರು ಬರುತ್ತದೆ, “ನೆಲಕ್ಕೆ ಮೈತಾಕಿಸಿದರೆ ಸಾಕು, ನಿದ್ದೆ ಮಾಡುತ್ತಿದ್ದ ಮುದುಕ ! ಈಗ ರಾತ್ರಿ ಇಡೀ ಹಾಸಿಗೆಯಲ್ಲಿ ಬಡಬಡಿಸುತ್ತಾನೆ. ಹೇ ರಾಮಚಂದ್ರ! ಘೋರ ಪಾತಕವೊಂದು ಘಟಿಸದ ಹಾಗೆ ಹೇಗೆ ತಡೆಯುತ್ತಿ!ಹೇಳಿಬಿಡು ಮಹರಾಯ” ಎನ್ನುತ್ತ ಹಲುಬುತ್ತಾನೆ.

ಹೌದು ಜಾನಪದವೇ ಸತ್ಯ. ಭರತ ವರ್ಷವೆಂಬ ಹೊಸಕೆರೆ ಖಾಲಿ ಖಾಲಿ. ನಗುವ ತುಳಿಕಿಸಲಿಲ್ಲ. ಒಳ ನೀರು ಬರಲಿಲ್ಲ. ಬಂದ ನೀರೆಲ್ಲ ರಾಡಿ ರಾಡಿ ರಕ್ತದಂತೆ ಸೋರಿ ಹೋಗುತ್ತಿದೆ. ನೂರಿಪ್ಪತ್ತೈದು

ಮಾಸ ತುಂಬಿದ ತುಂಬು ಗರ್ಭಿಣಿ ಕೆರೆಗೆ ಹಾರಿ ಬಲಿಯಾದ ಮೇಲೆಯೆ ಅದು ತುಂಬಿದ್ದು. ತುಳುಕಿದ್ದು. ಆಗ ಮತ್ತೆ ಸೋರುತ್ತಿದೆ.

ಬೇತಾಳ ಪ್ರಶ್ನೆ ಮಾಡುತ್ತದೆ.

ಹೇಳು ಮಗನೇ ! ನಿನ್ನ ಬಾವುಟದ ಬಣ್ಣಗಳಾವುವು ? ಅವುಗಳ ಜೋಡಣೆಯ ರಹಸ್ಯವೇನು ? ತಿಳಿದೂ ಹೇಳದಿದ್ದರೆ ನಿನ್ನ ತಲೆ ಸಹಸ್ರ ಹೋಳಾದೀತು !

ತರಗತಿಯ ಮೊದಲಲ್ಲಿ ಕಲಿತ ಪಾಠ ಒಪ್ಪಿಸುತ್ತೇನೆ ನಾನು.

ಕೇಸರಿ ಬಿಳಿ ಹಸಿರು ಮೂರು ಬಣ್ಣ ನಡುವೆ ಚಕ್ರವು,
ಸತ್ಯ ಶಾಂತಿ ತ್ಯಾಗ ಮೂರ್ತಿ ಗಾಂಧಿ ಹಿಡಿದ ಚರಕವು.

ತಲೆ ಹರಟೆ ಬೇತಾಳ ಗಹಗಹಿಸಿ ನಗುತ್ತದೆ. ನನ್ನ ಬೆನ್ನಿಂದ ಹಾರಿ ಪರಾರಿಯಾಗಿ ತಲೆಕೆಳಗು ನೇತಾಡುತ್ತ ಅಣಕವಾಡುತ್ತದೆ.

'ಎಲೆ ಮೂರ್ಖ ! ಕೇಸರಿ ಭಗವಾಧ್ವಜದ ಬಣ್ಣ ಅಲ್ಲವೇನು ? ಹಸಿರು, ಮುಸ್ಲಿಂ ಲೀಗಿನ ಬಣ್ಣ ಅಲ್ಲವೇನು ?. ಬಿಳಿಯು, ಯುದ್ಧವಿರಾಮ, ಶರಣಾಗತಿ ಇತ್ಯಾದಿಗಳಿಗೆ ಬಳಕೆಯಾಗುವ ಬಣ್ಣ ಅಲ್ಲವೇನು ?. ಸಿನಿಕ ಬೇತಾಳ ಗಹಗಹಿಸಿ ನಗುತ್ತದೆ.

ಮೂರ್ಖ! ಕೇಸರಿಗೂ ಹಸಿರಿಗೂ ನಡುವೆ ಯುದ್ಧ ವಿರಾಮ ಘೋಷಿಸಿದ್ದಾರೆ ನಿನ್ನ ಹಿರಿಯರು! ಬಿಳಿ ಪಟ್ಟಿ ಎಳೆದಿದ್ದಾರೆ !

ಹೌದು. ಭಾರತೀಯ ಬಾವುಟ ಯುದ್ಧವಿರಾಮದ ಸಂಕೇತ. ಕೇಸರಿ ಹಸಿರಿನ ನಡುವೆ ಹರಡಿರುವ ಬಿಳಿ ನಮ್ಮೆಲ್ಲರ ಆಶಯವೂ ಹೌದು, ಆತಂಕವೂ ಹೌದು : ಗಾಂಧೀಜಿಯವರ ಹಟವೂ ಹೌದು, ಭರತಖಂಡದ ಅನಿವಾರ್ಯ ಪರಿಸ್ಥಿತಿಗೆ ಸಂಕೇತವೂ ಹೌದು.

ಹಳೆಯ ಲೀಗಿನ ಹೊಸ ನಾಯಕರಿಗೆ ಇದು ಗೊತ್ತಿಲ್ಲವೇ ?

ಸಾವರಕರರ ಹೊಸ ಅನುಯಾಯಿಗಳಿಗೆ ಇದು ಗೊತ್ತಿಲ್ಲವೆ ?

ತಲೆ ಕೆಳಗು ನೇತಾಡುತ್ತಿದ್ದ ಬೇತಾಳ ಮರದಿಂದಲೇ ಕೂಗಿ ಮಾತನಾಡಿತು.

ನನ್ನಂತೆ ನೀನೂ ತಲೆ ಕೆಳಗಾಗು. ಆಗ ಅರ್ಥವಾದೀತು. ವೈಚಾರಿಕತೆಯ ಜುಂಗು ಹಿಡಿದಿದೆ ನಿನ್ನ ದರಿದ್ರ ಮೆದುಳಿಗೆ. ದೇವರಿದ್ದಲ್ಲಿ ಸೈತಾನ ಇರುತ್ತಾನೆ. ದೇವರು ಮರೆಯಾದಲ್ಲಿ ಸೈತಾನ ಮಾತ್ರ ಇರುತ್ತಾನೆ. ಅರ್ಥವಾಯಿತೇನು ?

ಇಲ್ಲವೆಂದು ತಲೆಯಾಡಿಸಿದೆ.

ದೇವರಿರುವಾಗ ಸೈತಾನ ಇದ್ದರೂ, ಗಮನಕ್ಕೆ ಬರುವುದಿಲ್ಲ. ದೇವರು ಇದ್ದಾಗ ನಗುವಿನಷ್ಟು ಅಗಲವಿರುತ್ತದೆ ಬಿಳಿಯ ಪಟ್ಟಿ. ಇಲ್ಲವಾದಾಗ ಕತ್ತಿಯ ಅಲುಗಿನಷ್ಟು ಕಿರಿದಾಗುತ್ತದೆ.

ಹೌದು. ಸೈತಾನನನ್ನ ದೂಷಿಸಿ ಫಲವಿಲ್ಲ. ಕೇಸರಿ ದೇವರ ಸಂಕೇತವಾದರೆ, ಹಸಿರೂ ದೇವರ ಸಂಕೇತವೆ. ಮಧ್ಯದ ಬಿಳಿಯೂ ದೇವರ ಸಂಕೇತವೆ ! ಇದು ದೇವರ ಸಮಸ್ಯೆ. ನನ್ನ ಸಮಸ್ಯೆ. ಅದ್ವಾನಿಯವರದ್ದು, ಜಾಮಾ ಮಸೀದಿಯ ಇಮಾಮರದ್ದು ಅಲ್ಲ.

ರಾಮ ನನ್ನವನು. ಅದ್ವಾನಿಯವ ಹೇಗಾದಾನು ? ರಾಮ ಗಾಂಧಿಯವನು. ರೈತರವನು.
ಹೆ ಪ್ರಭು ! ರಾಮಚಂದ್ರ ! ಇಕೋ ನಾನು ಬೇತಾಳನ ಸಂಘ ಬಿಟ್ಟಿದ್ದೇನೆ. ನಿನ್ನ ಭಕ್ತನಾಗಲು ಸಿದ್ಧನಿದ್ದೇನೆ. ಸ್ವೀಕರಿಸು.

ರಾಮ ನನ್ನನ್ನು ಸ್ವೀಕರಿಸುವನೆ ? ಅದ್ವಾನಿಯ ಸಂಘ ತೊರೆಯುವನೆ ?

ಬೇತಾಳ, ತಲೆಕೆಳಗು ಸ್ಥಿತಿಯಲ್ಲೇ ಮಾತಾಡಿ ಎಚ್ಚರಿಸಿತು.

ನಿನ್ನ ಸಂಗ ಮಾಡಲಿಕ್ಕೆ ರಾಮ, ಅದ್ವಾನಿಯ ಸಂಘ ಏಕೆ ತೊರೆಯಬೇಕು ? ಏಕೆ ತೊರೆಯಬೇಕು?. ರಾಮ ಅದ್ವಾನಿಯವನೂ ಆಗಿದ್ದರೆ ತೊಂದರೆಯೇನು ?

ಒಂದು ತೊಂದರೆಯಿದೆ. ನನ್ನಂತೆ ಅದ್ವಾನಿಯವರೂ ಬೇತಾಳ ಹೊತ್ತಿದ್ದಾರೆ. ಪೇಜಾವರರೂ ಹೊತ್ತಿದ್ದಾರೆ. ಅವರೇ ಶವಪೆಟ್ಟಿಗೆಯಿಂದ ಹೊರಗೆಳೆದು ನಿಲ್ಲಿಸಿದ ಶವ, ಅವರ ಬೆನ್ನಿಗಂಟಿದೆ. ಶವವನ್ನ ಬೆನ್ನಿಂದೆತ್ತಿ ಎಸೆದು ಬಿಟ್ಟರೆ ಆಗ , ರಾಮ ಅವರವನೂ ಆಗಬಲ್ಲನು.

ಅವರು ಬೆನ್ನ ಮೇಲೆ ಹೊತ್ತಿರುವುದು ರಾಮನನ್ನಲ್ಲ, ಸಾಬರನ್ನ.

ಬೇತಾಳವೇ ವಾಸ್ತವವಾದರೆ ? ಆಗ ಅದು ವಾಸ್ತವಿಕ ಶವ. ರಾಮನ ಮುಖವಾಡ ತೊಡಿಸಿದರೂ ಅದು ಶವವೆ. ಡ್ರಾಕುಲಾನ ಕತೆ ಗೊತ್ತಿದ್ದವರಿಗೆ ಇದು ಗೊತ್ತಿರುತ್ತದೆ. ಬಿಸಿ ಬಿಸಿ, ಹೊಸ ಹೊಸ, ರಕ್ತ ಹೀರದಿದ್ದರೆ ಶವದ ಮೈ ಥಣ್ಣಗಾಗುತ್ತದೆ, ಭಾರವಾಗುತ್ತದೆ, ಹೊರುವವನ ಬೆನ್ನಿಗಂಟಿಕೊಂಡು ಬಿಡುತ್ತದೆ.

ಮೂಲರಾಮ ಹೆಂಡತಿಯನ್ನ ಬಿಟ್ಟಿರಲಾರ. ತಮ್ಮನನ್ನ ಬಿಟ್ಟಿರಲಾರ. ರಾಮ ಸಂಸಾರಿ ; ತ್ಯಾಗಮೂರ್ತಿ. ಅವ ಹಟಮಾರಿಯಲ್ಲ : ಸೇಡು ತೀರಿಸಿಕೊಳ್ಳಲೊಲ್ಲ. ರಾವಣ ಸಾಬರವನಲ್ಲ.

ಅಧಿಕಾರ ತ್ಯಜಿಸಿದವನು ರಾಮ. ಅಧಿಕಾರ ಕೊಡಿಸಲಾರ ಅವನು. ನನಗೂ ಕೊಡಿಸಲಾರ. ಅದ್ವಾನಿಯವರಿಗೂ ಕೊಡಿಸಲಾರ. ಇದನ್ನ ಅರಿತಿದ್ದವರು ಗಾಂಧೀಜಿ ಮಾತ್ರ. ಸ್ವಾತಂತ್ರ್ಯ ಬಂದ ನಂತರ ಕಾಂಗ್ರೆಸ್ ವಿಸರ್ಜಿಸಲು ಹೊರಟಿದ್ದವರು ಅವರು.

ಬೇತಾಳನನ್ನ ಬೆನ್ನಿಂದ ಎಸೆದುಬಿಡಿ ಮಾರಾಯರೆ. ಆಗ ರಾಮ ನಿಮ್ಮವನೂ ಹೌದು. ನನ್ನವನೂ ಹೌದು. ಬಿಳಿಯ ಪಟ್ಟಿ ಕೇಸರಿಗೂ ಸೇರುತ್ತದೆ. ಹಸಿರಿಗೂ ಸೇರುತ್ತದೆ. ಅದು ಅಗಲವಾಗುತ್ತದೆ.

ನನ್ನ ನಿಮ್ಮಂತೆ ಅವರಲ್ಲೂ ಬುದ್ಧಿ ಹೇಳುವವರಿದ್ದಾರೆ. ಹೇಳುತ್ತಾರೆ.

ರಾಮ ರಾವಣರ ಯುದ್ಧ ಹಿಂದುಗಳ ಆಂತರಿಕ ಯುದ್ಧ. ನಮ್ಮ ಅಂತರಂಗದ ಯುದ್ಧ.

ಧರ್ಮ ನಿರಪೇಕ್ಷತೆ : ಒಂದು ಮರುಚಿಂತನೆ

ಜೋಸೆಫ್ ತಾರಮಂಗಲಮ್

ಕನ್ನಡಕ್ಕೆ : ಎಸ್. ಸಿ. ಸದಾಶಿವ

ಭಾರತೀಯ ಸಮಾಜ ವಿಜ್ಞಾನಿಗಳಲ್ಲಿ **ಧರ್ಮನಿರಪೇಕ್ಷತೆಯ** ಬಗ್ಗೆ ಹೊಸ ರೀತಿಯ ಚರ್ಚೆಯೊಂದು ನಡೆದಿದೆ. ಹೆಚ್ಚುತ್ತಿರುವ ಮತೀಯ ರಾಜಕಾರಣ ಹಾಗೂ ಮತೀಯ ಹಿಂಸೆ ಈ ಚರ್ಚೆಗೆ ತುರ್ತನ್ನ ಒದಗಿಸಿದೆ. ಹೆಚ್ಚಿನ ಸಮಾಜ ಶಾಸ್ತ್ರಜ್ಞರು, ದೇಶದಲ್ಲಿ ತುಂಬಿರುವ ತುಮುಲಕ್ಕೆ ಧರ್ಮನಿರಪೇಕ್ಷತೆ ಪರಿಹಾರ ಎಂದು ವಾದಿಸುತ್ತಾರೆ. ಇದಕ್ಕೆ ಪ್ರತಿಯಾಗಿ, ಒಂದು ಚಿಕ್ಕ, ಆದರೆ ಪ್ರಭಾವಶಾಲಿಯಾದ ಗುಂಪು, ಭಾರತೀಯ ಪರಿಕಲ್ಪನೆಯ ಧರ್ಮನಿರಪೇಕ್ಷತೆ ದೇಶದ ಸಮಸ್ಯೆಗಳನ್ನ ಪರಿಹರಿಸುವ ಬದಲಾಗಿ ಹುಟ್ಟುಹಾಕುತ್ತಿದೆ ಎಂದು ವಾದಿಸುತ್ತಾರೆ.

ಆಶೀಶ್‌ನಂದಿ, ಟಿ. ಎನ್ ಮದನ್‌ರಂತಹ ವಿಮರ್ಶಕರು ಧರ್ಮನಿರಪೇಕ್ಷತೆ ಈ ನಾಡಿನ ಸಂಸ್ಕೃತಿ ಹಾಗೂ ಪರಂಪರೆಗೆ ಹೊರತಾದ ಪರಿಕಲ್ಪನೆ ಎಂದು ವಾದಿಸುತ್ತಾರೆ. ಬದಲಾಗಿ ಧಾರ್ಮಿಕತೆಗೆ ಹಾಗೂ ದೇಶೀಯ ಪರಂಪರೆಗೆ ನಾವು ಒತ್ತು ಕೊಡಬೇಕು ಎಂದವರು ಕರೆ ಕೊಡುತ್ತಾರೆ. ಅವರ ಅಭಿಪ್ರಾಯದಲ್ಲಿ ಅನೂಚಾನವಾಗಿ ನಡೆದು ಬಂದಿರುವ ಪರಧರ್ಮ ಸಹಿಷ್ಣುತೆಯ ಮಾರ್ಗವೇ ಅತ್ಯಂತ ಅರ್ಥಪೂರ್ಣವಾದ ಮಾರ್ಗ. ಇತ್ತೀಚೆಗೆ **ಎಂ. ಎನ್ ಶ್ರೀನಿವಾಸ**ರಂತಹ ಹಿರಿಯ ಸಮಾಜಶಾಸ್ತ್ರಜ್ಞರು ಕೂಡಾ ಈ ಅಭಿಪ್ರಾಯಕ್ಕೆ ತಮ್ಮ ದನಿ ಕೂಡಿಸಿದ್ದಾರೆ. ದೇವರಲ್ಲಿ ನಂಬಿಕೆ ಇಡುವುದು ಹಾಗೂ ದೇವರೇ ರಕ್ಷಕನೆಂದು ತಿಳಿದು ಬಾಳುವೆ ನಡೆಸುವುದು, ಇಂದಿನ ಹಲವು ಹತ್ತು ಸಮಸ್ಯೆಗಳಿಗೆ ಪರಿಹಾರವಾಗಬಲ್ಲದೆಂದು ಅವರು ತಿಳಿಸಿದ್ದಾರೆ. ಈ ಎಲ್ಲ ವಿದ್ವಾಂಸರ ವಾದಗಳನ್ನ ವಿಮರ್ಶಾತ್ಮಕವಾಗಿ ಮೌಲ್ಯಮಾಪನ ಮಾಡಿ, ಈ ವಾದಗಳ ಪ್ರಸ್ತುತತೆ ಹಾಗೂ ಪರಿಣಾಮ ಸ್ವರೂಪವನ್ನ ಚರ್ಚಿಸುವುದು, ನನ್ನ ಪ್ರಬಂಧದ ಉದ್ದೇಶವಾಗಿದೆ.

ಲೌಕಿಕ, ಧರ್ಮನಿರಪೇಕ್ಷ, ಧರ್ಮನಿರಪೇಕ್ಷೀಕರಣ ಇತ್ಯಾದಿ ಪರಿಕಲ್ಪನೆಗಳಿಗೆ ಹಚ್ಚಲಾಗಿರುವ ಭಿನ್ನ ಅರ್ಥಗಳಿಂದಾಗಿ ಇಂದು, ವಿಪರೀತ ಗೊಂದಲದ ಪರಿಸ್ಥಿತಿ ಉಂಟಾಗಿದೆ. ಆದರೆ ಧರ್ಮನಿರಪೇಕ್ಷತೆ ನಮ್ಮ ಸಂವಿಧಾನದಲ್ಲಿ, ರಾಜಕೀಯ ಚರ್ಚೆಗಳಲ್ಲಿ, ವಿದ್ವಾಂಸರ ಚರ್ಚೆಗಳಲ್ಲಿ ಅದೆಷ್ಟು ಆಳವಾಗಿ ಬೇರೂರಿಬಿಟ್ಟಿದೆಯೆಂದರೆ, ಈ ಗೊಂದಲವನ್ನ ನಿವಾರಿಸಿಕೊಳ್ಳದೆ ವಿಧಿಯೇ ಇಲ್ಲ. ಕನಿಷ್ಠ **ಡರ್ಕ್‌ಹ್ಯಾಂ**ನ ಕಾಲದಿಂದಲಾದರೂ, ಸಮಾಜಶಾಸ್ತ್ರ, ಪವಿತ್ರ (Sacred) ಹಾಗು ಲೌಕಿಕ (Secular)ಗಳ ನಡುವೆ ಸಾರ್ವತ್ರಿಕವಾಗಿ ಒಪ್ಪಬಹುದಾದಂತಹ ವ್ಯತ್ಯಾಸವೊಂದನ್ನ ಗುರುತಿಸಿದೆ. ಡರ್ಕ್‌ಹ್ಯಾಂನ ಪ್ರಕಾರ **ಸೇಕ್ರೆಡ್** ಎನ್ನುವುದು ನಿಗೂಢವು, ತರ್ಕಾತೀತವೂ, ಅದ್ಭುತವೂ, ಅಸಾಧ್ಯವೂ

ಆದ ಅನುಭವ ವಲಯ. ಅದನ್ನ ನಾವು **ಪಾರಮಾರ್ಥಿಕ** ಎಂದೂ ಕರೆಯುತ್ತೇವೆ. ಈ ಅನುಭವ ವಲಯವನ್ನ ನಾವು ದೇವರು ಹಾಗೂ ಧರ್ಮದ ವಲಯ ಎಂದು ಕೂಡಾ ಗುರುತಿಸುತ್ತೇವೆ. ಅದಕ್ಕೆ ಬದಲಾಗಿ **ಸೆಕ್ಯೂಲರ್** ಎನ್ನುವ ಪರಿಕಲ್ಪನೆ ಮನುಷ್ಯನ ಲೌಕಿಕ ಪ್ರಪಂಚಕ್ಕೆ ಸಂಬಂಧಿಸಿದ್ದು, ದಿನನಿತ್ಯವನ್ನ ತಾಕುವಂತಹದ್ದು.

ಆದರೆ ಪೂರ್ವದ ದೇಶಗಳಲ್ಲಿ, ಲೌಕಿಕ ಹಾಗೂ ಪಾರಮಾರ್ಥಿಕಗಳ ನಡುವಿನ ಸಂಬಂಧ ದ್ವಂದ್ವಾತ್ಮಕವಾದದ್ದಲ್ಲ. ಪೌರ್ವಾತ್ಯ ಧರ್ಮಗಳಲ್ಲಿ ಲೌಕಿಕವೂ ಪಾರಮಾರ್ಥಿಕವೂ ಒಟ್ಟಿಗೆಯೇ ನಡೆದು ಕಡೆಗೊಮ್ಮೆ ದೇವರಲ್ಲಿ ಒಂದಾಗುವಂತಹದ್ದು. ಹಾಗೆಂದು ಸಮಕಾಲೀನ ನಾಗರೀಕರ ಬದುಕಿನಲ್ಲಿ ಲೌಕಿಕ ಹಾಗು ಪಾರಮಾರ್ಥಿಕಗಳ ಸಾಮರಸ್ಯ ಸಾಧ್ಯವಾಗಿದೆ ಎಂದೇನೂ ಅಲ್ಲ. ಹೆಚ್ಚು ಕಡಿಮೆ ಎಲ್ಲರೂ ಇವೆರಡನ್ನ ಬೇರ್ಪಡಿಸಿ ಇಡುವುದೇ ಅಲ್ಲದೆ, ಅವುಗಳ ಜೊತೆ ಏಗಲಿಕ್ಕೆಂದು ಭಿನ್ನರೀತಿಯ ತಂತ್ರಗಳನ್ನ, ರೀತಿ ನೀತಿಗಳನ್ನ ರೂಡಿಸಿಕೊಂಡಿದ್ದಾರೆ. ಬದುಕಲಿಕ್ಕೆಂದು ಬೇಟೆಯನ್ನೋ, ಮೀನುಗಾರಿಕೆಯನ್ನೋ, ಬೇಸಾಯವನ್ನೋ ನೆಚ್ಚಿಕೊಂಡಿದ್ದಾರೆ.

ಆಧುನಿಕ ಸಮಾಜ ಇವೆರಡರ ಸಂಬಂಧ ಮತ್ತಷ್ಟು ದೂರೀಕರಿಸಿ, ಪಾರಮಾರ್ಥವನ್ನ ಪೂರ್ತಿಯಾಗಿ 'ಖಾಸಗಿ' ವಲಯಕ್ಕೆ ಗಡೀಪಾರುಗೊಳಿಸಿಬಿಟ್ಟಿದೆ. ಆದರೂ ಪಾರಮಾರ್ಥಿಗಳು ಲೌಕಿಕದ ಪ್ರಯೋಜನಕ್ಕೆ ಆಸೆ ಪಡುವುದು, ಲೌಕಿಕರು ಪಾರಮಾರ್ಥದ ಮೋಹಕ್ಕೆ ಬೀಳುವುದು, ಇಲ್ಲಿ ಹಾಗೂ ಎಲ್ಲೆಲ್ಲಿಯೂ ನಡೆದೇ ಇದೆ.

ಧರ್ಮಾತೀತತೆ ಅಥವಾ ಧರ್ಮನಿರಪೇಕ್ಷೀಕರಣ ಎನ್ನುವುದು ಹಲವು ಚಾರಿತ್ರಿಕ ಬೆಳವಣಿಗೆಗಳಿಂದಾಗಿ ಜಾರಿಗೆ ಬಂದಿರುವ ಆಧುನಿಕ ಜಗತ್ತಿನ ಪರಿಕಲ್ಪನೆ. ಆಧುನಿಕ ಬದುಕು ಧಾರ್ಮಿಕ ವಲಯದಲ್ಲಿ ಜಾರಿಗೊಳಿಸಿರುವ ಬದಲಾವಣೆಗಳನ್ನ ಗುರುತಿಸುವುದಾದರೆ,

೧. ಶಿಕ್ಷಣ, ಮದುವೆ, ಮುಂತಾದ ಸಂಸ್ಥೆ ಯಾ ವ್ಯವಸ್ಥೆಗಳಿಂದ ಪಾರಮಾರ್ಥವು ದೂರವಾಗುತ್ತಿರುವುದು.

೨. ವಿವಿಧ ಸಮುದಾಯಗಳು ಹಾಗೂ ಧರ್ಮಗಳು ತಾವೇ ಅದ್ವಿತೀಯವೆನ್ನುವ ಭಾವನೆ ಕಳಚಿಕೊಂಡು ಬಹುತ್ವವನ್ನ ಮಾನ್ಯ ಮಾಡಬೇಕಾದ ಪರಿಸ್ಥಿತಿ ಉಂಟಾಗಿರುವುದು.

೩. **ಮ್ಯಾಕ್ಸ್ ವೆಬರ್** ಹೇಳುವಂತೆ, ವಿಶ್ವವೇ **ವೈಚಾರಿಕದತ್ತ** ಹೊರಳುತ್ತಿರುವುದು, ಹಾಗೂ ಅಂತಹ ವೈಜ್ಞಾನಿಕ, ವೈಚಾರಿಕ ಮನೋವೃತ್ತಿ ಬೆಳೆದು, ನಿಗೂಢವಾದದ್ದು, ಪೌರಾಣಿಕವಾದದ್ದು, ಮಂತ್ರ ಮಾಟಗಳು, ಪವಾಡಗಳು ಅನುಭವ ಪ್ರಪಂಚದಿಂದ ಮಾಯವಾಗುತ್ತಿರುವುದು.

೪. ಒಂದು ಕಾಲಕ್ಕೆ ಪ್ರಶ್ನಾತೀತವಿದ್ದ ಧಾರ್ಮಿಕವಲಯ **ವಿಮರ್ಶೆ**ಗೆ ಒಳಗಾಗಿ, ಅವುಗಳ ಬೆಳವಣಿಗೆಗೆ ಕಾರಣವಾದ ಸೈದ್ಧಾಂತಿಕ ವಿಚಾರಗಳು ಗೋಚರವಾಗುತ್ತಿರುವುದು.

ಅಮೇರಿಕೆಯ ಖ್ಯಾತ ಧಾರ್ಮಿಕ ಸಮಾಜಶಾಸ್ತ್ರಜ್ಞ **ಪೀಟರ್ ಬರ್ಗರ್** ಹೇಳುವಂತೆ, ಧರ್ಮ ನಿರಪೇಕ್ಷೀಕರಣ ಎಂದರೆ ಸಂಸ್ಥೆ ಹಾಗೂ ಅಂತಃ ಪ್ರಜ್ಞೆಯ ಎರಡೂ ಸ್ತರಗಳಲ್ಲಿ ಧಾರ್ಮಿಕ ಹಿಡಿತ ಸಡಿಲವಾಗುವುದೇ ಆಗಿದೆ. ಆತನೇ ಮುಂದುವರೆದು ಮತ್ತೊಂದು ಸಂದರ್ಭದಲ್ಲಿ, "ಸಮುದಾಯಗಳು, ಸಂಸ್ಕೃತಿಗಳು, ಧಾರ್ಮಿಕಸಂಸ್ಥೆ ಹಾಗೂ ಸಂಕೇತಗಳ ಹಿಡಿತದಿಂದ ಮುಕ್ತವಾಗುವ ಪ್ರಕ್ರಿಯೆ ಧರ್ಮನಿರಪೇಕ್ಷಿಕರಣ'' ಎಂದು ಗುರುತಿಸುತ್ತಾನೆ.

ಎಂ. ಎನ್. ಶ್ರೀನಿವಾಸರು ಕೂಡಾ ಭಾರತೀಯ ಪರಿಸ್ಥಿತಿಯನ್ನ ಹೆಚ್ಚು ಕಡಿಮೆ ಇದೇ ಮಾದರಿಯಲ್ಲಿ ಗುರುತಿಸುತ್ತಾರೆ.

ಆದರೆ ಧರ್ಮನಿರಪೇಕ್ಷೀಕರಣ ಬರಿದೆ ಚಾರಿತ್ರಿಕ ಬೆಳವಣಿಗೆ ಮಾತ್ರವಲ್ಲ; ಅದೊಂದು ವಾದವೂ ಹೌದು. ಇಡೀ ಪ್ರಕ್ರಿಯೆಯ ಆಂತರಿಕ ಸಂಬಂಧ ಗುರುತಿಸುವ ಹಾಗೂ ಗತಿ ನಿರ್ಧರಿಸುವ ವಾದ ಇದು. ಕಾಮ್ಟೆಯಿಂದ ವೆಬರ್‌ವರೆಗೆ, ಇತ್ತೀಚಿನ ಬ್ರಯಾನ್ ವಿಲ್ಸನ್‌ರವರೆಗೆ ಎಲ್ಲ ವ್ಯಾಖ್ಯಾನಕಾರರೂ ಧರ್ಮನಿರಪೇಕ್ಷೀಕರಣದ ಏಕಮುಖ ಬೆಳವಣಿಗೆಯ ಬಗ್ಗೆ ಒತ್ತಿ ಹೇಳುತ್ತಾರೆ ; ಇಡೀ ಮನುಕುಲವನ್ನೆ ಆವರಿಸಲಿರುವ ಅದರ ಅಪಾರ ಹರಹಿನ ಬಗ್ಗೆ ಬರೆಯುತ್ತಾರೆ.

ನಾನಾಗಲೇ ಹೇಳಿದಂತೆ ಭಾರತದಲ್ಲಿ ಜಾತ್ಯಾತೀತತೆ ಹಾಗೂ ಧರ್ಮನಿರಪೇಕ್ಷತೆಗೆ ಹಲವು ಅರ್ಥಗಳಿವೆ, ಹಲವು ಮಾದರಿಗಳಿವೆ. ಅವುಗಳಲ್ಲಿ ಪ್ರಮುಖ ಮಾದರಿಗಳಾವುವು ಎಂದು ಗುರುತಿಸುವುದಾದರೆ,

ಭಾರತೀಯ ಅಧಿಕೃತ ಮಾದರಿ

ಭಾರತವು ಧರ್ಮನಿರಪೇಕ್ಷಿತ ಪ್ರಜಾಸತ್ತಾತ್ಮಕ ರಾಜ್ಯ. ಭಾರತೀಯ ಸಂವಿದಾನದ ಹಲವು ಪರಿಚ್ಛೇದಗಳಲ್ಲಿ ಧರ್ಮನಿರಪೇಕ್ಷತೆಯ ಅರ್ಥ ವಿವರಣೆಯಿದೆ. ಪ್ರತಿಯೊಬ್ಬ ಭಾರತೀಯನಿಗೂ ಧಾರ್ಮಿಕ ಸ್ವಾತಂತ್ರ್ಯವನ್ನು ನೀಡಲಾಗಿದೆ. ಈ ಸ್ವಾತಂತ್ರ್ಯವು ವ್ಯಕ್ತಿಗತವಾಗಿ ನಾಗರೀಕನಿಗೆ ಹಾಗೂ ಧರ್ಮಗಳಿಗೆ ಅನ್ವಯಿಸುತ್ತದೆ. ಎರಡನೆಯದಾಗಿ ಸಮಾನತೆ. ಧರ್ಮದ ಆಧಾರದ ಮೇಲೆ ಯಾವುದೇ ವ್ಯಕ್ತಿಗೆ ಪಕ್ಷಪಾತವಾಗದಂತೆ ನೊಡಿಕೊಳ್ಳಲು ಸಂವಿದಾನ ಬದ್ಧವಾಗಿದೆ. ಸಾರ್ವಜನಿಕ ಸೇವೆಯಲ್ಲಿ ಸಮಾನ ಅವಕಾಶ, ಶೈಕ್ಷಣಿಕ ಸಂಸ್ಥೆಯಲ್ಲಿ ತಾರತಮ್ಯವಿಲ್ಲದಿರುವುದು, ಈ ರೀತಿ ಅನೇಕ ಸಂವಿದಾನ ಬದ್ಧ ರಕ್ಷಣೆ ಭಾರತೀಯನಿಗೆ ಇದೆ.

ಇದರಿಂದ ಅರ್ಥವಾಗುವ ಮುಖ್ಯ ಅಂಶವೆಂದರೆ ಸಂವಿದಾನ ಶಿಲ್ಪಿಗಳಿಗೆ ಧರ್ಮವನ್ನು ವಿರೋಧಿಸುವುದರಲ್ಲಾಗಲಿ, ಸಂಸ್ಕೃತಿಯ ವೈಚಾರಿಕರಣದಲ್ಲಾಗಲೀ ಆಸಕ್ತಿ ಇರಲಿಲ್ಲ. ಬದಲಾಗಿ ಧರ್ಮ ಸಂಬಂಧ ವಿಚಾರದಲ್ಲಿ ಒಂದು ರೀತಿಯ ತಾಟಸ್ಥ್ಯ ಮತ್ತು ನಿಷ್ಪಕ್ಷಪಾತದ ನಿಲುವನ್ನು ಕಾಪಾಡಿಕೊಂಡು ಹೋಗಬೇಕೆಂಬ ಇರಾದೆಯು ಕಾಣುತ್ತದೆ. ಅವರ ಪ್ರಕಾರ ಮಾದರಿ ಧರ್ಮನಿರಪೇಕ್ಷತೆಯೆಂದರೆ ಧರ್ಮವನ್ನು ಸಮಾಜದಿಂದ ಕೆಲವಷ್ಟು ಮಟ್ಟಿಗಾದರೂ ಹೊರಗಿಡುವುದು. ವೈಯಕ್ತಿಕ ಬದುಕಿನಲ್ಲಿ ಧರ್ಮದ ಪಾತ್ರದ ಬಗ್ಗೆ ಯಾವ ತಕರಾರನ್ನು ಎತ್ತಿಲ್ಲ ಅವರು. ಆದರೆ ಸಾರ್ವಜನಿಕ ಜೀವನದಲ್ಲಿ ಧರ್ಮವನ್ನು ಬಳಸುವಾಗ ವಹಿಸಬೇಕಾದ ಎಚ್ಚರದ ಬಗ್ಗೆ ಸಂವಿದಾನ ಶಿಲ್ಪಿಗಳು ತೀವ್ರವಾದ ಕಾಳಜಿ ವಹಿಸಿರುವುದು ಸ್ಪಷ್ಟವಾಗಿದೆ.

ಪರಂಪರಾಗತ ಹಿಂದು ಮಾದರಿ

ಹೆಚ್ಚಿನ ಭಾರತೀಯ ಬುದ್ಧಿಜೀವಿಗಳು, ಅದರಲ್ಲೂ ಹಿಂದು ಬುದ್ಧಿಜೀವಿಗಳು, ಜಾತ್ಯತೀತತೆಯನ್ನ, ಪರಂಪರಾಗತ ಹಿಂದೂ ಧರ್ಮ ಹೇಳುತ್ತದೆ ಎನ್ನುವ, ಪರಧರ್ಮ ಸಹಿಷ್ಣುತೆ ಹಾಗೂ ಸರ್ವ ಧರ್ಮ ಸಮತಾಭಾವದಲ್ಲಿ ಗುರುತಿಸುತ್ತಾರೆ.

ಡಾ / ಎಸ್. ರಾಧಾಕೃಷ್ಣನ್ ಈ ರೀತಿ ಹೇಳುತ್ತಾರೆ. "ನಮ್ಮ ಸಂಸ್ಕೃತಿಯ ಬೇರುಗಳು ಪಾರಮಾರ್ಥಿಕ ಮೌಲ್ಯಗಳಲ್ಲಿ ಇರುವಾಗ, ನಮ್ಮ ಸರ್ಕಾರವು ಧರ್ಮನಿರಪೇಕ್ಷತೆಯ ಬಗ್ಗೆ ಮಾತನಾಡುವುದು ವಿಚಿತ್ರವಾಗಿ ಕಾಣಬಹುದು. ಧರ್ಮ ನಿರಪೇಕ್ಷತೆಯ ಅರ್ಥ ಅಧಾರ್ಮಿಕವಾಗಲೀ, ನಾಸ್ತಿಕತೆಯಾಗಲೀ, ಅಥವಾ ಚಾರ್ವಾಕವಾದವಾಗಲಿ ಅಲ್ಲ. ಅದು ಸರ್ವಧರ್ಮಗಳಿಗೂ ಸಮಾನವಾದ ಪಾರಮಾರ್ಥಿಕ ಮೌಲ್ಯಗಳ ಬಗ್ಗೆ ಹೆಚ್ಚು ಇಂಬುಕೊಡುತ್ತಿದೆ ಅಷ್ಟೆ. ಇಂತಹ ಮೌಲ್ಯಗಳನ್ನು ಹಲವು ಹತ್ತು ಮಾರ್ಗಗಳಲ್ಲಿ ಮೈಗೂಡಿಸಿಕೊಳ್ಳಬಹುದು. ವಿವಿಧ ಪಂಥಗಳಿಂದ ಕೂಡಿದ ಈ ದೇಶದಲ್ಲಿ ಪಾರಮಾರ್ಥಿಕ ಏಕತೆಯನ್ನ ಸಾಧಿಸುವುದೇ ಅತ್ಯಂತ ಪ್ರಭಾವ ಶಾಲಿ ಸುವರ್ಣ ಮಾಧ್ಯಮ. ಆದರೆ ಇಂತಹ ಗಂಭೀರ ಅರ್ಥವನ್ನು ಗ್ರಹಿಸುವುದರಲ್ಲಿ ನಾವು ವಿಫಲರಾಗಿದ್ದೇವೆ ಎನ್ನುವುದೂ ನಿಜವೆ.

ದೇಶದ ವಿಭಜನೆಗೆ ಗಾಂಧೀಜಿ ತೋರಿಸಿದ ವಿರೋಧವೂ ಸಹ ಧಾರ್ಮಿಕ ನೆಲೆಯಲ್ಲೇ ಇತ್ತು. "ವಿಭಜನೆ ಎನ್ನುವುದೇ ಅಪಶಕುನದಾಯಕವಾದ ಅಸತ್ಯ. ಹಿಂದು ಹಾಗೂ ಇಸ್ಲಾಂ ಧರ್ಮಗಳು ವಿರೋಧಿ ಸಂಸ್ಕೃತಿ ಹಾಗೂ ಸಿದ್ಧಾಂತವನ್ನು ಪ್ರತಿನಿಧಿಸುತ್ತಿವೆ ಎಂಬ ಮಾತು ಕೇಳಿದರೆ ನನ್ನ ಆತ್ಮ ಬಂಡೇಳುತ್ತದೆ. ಅಂತಹ ಸಿದ್ಧಾಂತಕ್ಕೆ ಸಮ್ಮತಿ ಸೂಚಿಸುವುದೆಂದರೆ ದೇವರ ಅಸ್ತಿತ್ವವನ್ನೇ ಅಲ್ಲಗಳೆದಂತೆ. ನಾನು ಆತ್ಮ ಸಾಕ್ಷಿಯಾಗಿ ನಂಬಿರುವುದೇನೆಂದರೆ ಕುರಾನಿನ ದೇವರೇ ಭಗವದ್ಗೀತೆಯ ದೇವರು. ನಾವೆಲ್ಲರೂ ಒಂದೆ. ಹೆಸರು ಬೇರೆ ಇರಬಹುದು, ನಾವೆಲ್ಲರೂ ದೇವರ ಮಕ್ಕಳು "

ಹಿಂದೂ ಮಾದರಿಯ ಭಾರತೀಯ ಸಮಾಜದಲ್ಲಿ ಸಹಿಷ್ಣತೆ ಮತ್ತು ಉದಾರಧಾರ್ಮಿಕ ಸಂಸ್ಕೃತಿಯನ್ನು ನಾವು ಕಾಣಬಹುದು. ಶಬ್ದ ಸ್ಪರ್ಶ ರೂಪ ರಸ ಗಂಧಾದಿಗಳಿಗೂ ನಿಲುಕದ ಪಾರಿಮಾರ್ಥಿಕವಾದ ಅನನ್ಯ ಸತ್ಯದ ಅವಲೋಕನವೇ ಧರ್ಮದ ನೆಲಗಟ್ಟೆಂದು ನಂಬಿರುವ ಹಿಂದುಗಳು, ಯಾವುದೇ ಒಂದು ಗ್ರಂಥಕ್ಕಾಗಲಿ, ಪ್ರವಾದಿಗಾಗಲಿ, ಧರ್ಮಕ್ಕಾಗಲಿ ಹೆಚ್ಚಿನ ಮಹತ್ವವನ್ನು ಕೊಡುವುದಿಲ್ಲ. ಆದರೆ ಹಿಂದೂಗಳು ಸಾಮಾಜಿಕ ವಿಚಾರದಲ್ಲಿ ಸಮಾನತೆಗಿಂತಲೂ ವರ್ಗೀಕರಣವನ್ನು ಹೆಚ್ಚಾಗಿ ಕಾಣುತ್ತಾರೆ. ಬಹುಜನಾಂಗೀಯವಾದ ಹಿಂದೂ ಧರ್ಮವನ್ನು ಅಧ್ಯಯನಕ್ಕೆ ತೊಡಗಿಸಿಕೊಂಡಾಗ ಈ ಅಂಶಗಳು ಮನಸ್ಸಿಗೆ ನಾಟುತ್ತವೆ. ಅವರ ಪರಿಶುದ್ಧತೆ ಮತ್ತು ಮೈಲಿಗೆಯ ಪರಿಕಲ್ಪನೆ ಅತ್ಯಂತ ವಿಸ್ಮಯವನ್ನುಂಟುಮಾಡುವಂತಹದು. ಅಸ್ಪೃಶ್ಯನೊಬ್ಬನು, ವಿಗ್ರಹಾರಾಧನೆ ಮತ್ತು ಪ್ರಾಣಿ ಹತ್ಯೆಯಲ್ಲಿ ತೊಡಗಿರುವ ವ್ಯಕ್ತಿಯಾದರೂ, ಅವನು ಜ್ಞಾನೋದಯ ಹೊಂದಿರುವ ಸನ್ಯಾಸಿಗೆ ಒಂದು ಅರ್ಥದಲ್ಲಿ ಸಮನಾಗುತ್ತಾನೆ. ಈ ಅಸಮಾನತೆಯ ಬಗ್ಗೆ ಮಾತನಾಡುತ್ತಾ ಹೋದಂತೆ ಭಾರತೀಯ ಜಾತಿ ಪದ್ಧತಿಯ ಬಗ್ಗೆ ಹೇಳುವುದು ಅನಿವಾರ್ಯವಾಗುತ್ತದೆ. ವಾಸ್ತವಿಕವಾಗಿ ಇಲ್ಲಿ ಎಲ್ಲ ಧರ್ಮಗಳು ಸಮಾನ ಅಲ್ಲ. ಹಾಗೆಯೇ ಎಲ್ಲ ಜಾತಿಗಳು ಸಹಾ.

ಧರ್ಮನಿರಪೇಕ್ಷೆ ಧರ್ಮ ವಿರೋಧಿ ಸಿದ್ಧಾಂತವಾಗಿ

ಎಲ್ಲಾ ಧರ್ಮಗಳು ಕಾಲದ ತಪ್ಪೆಣಿಕೆಯಿಂದ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿರುವ ಸಂಸ್ಥೆಯೆಂಬುವುದು ಇವರ ನಂಬಿಕೆ. ಆರ್ಥಿಕ ಬೆಳವಣಿಗೆ ಮತ್ತು ವೈಜ್ಞಾನಿಕ ಪ್ರಗತಿಯ ಮಧ್ಯದಲ್ಲಿಯೂ ಭೂತಕಾಲದ ವ್ಯವಸ್ಥೆ ಉಳಿಸಿಕೊಂಡು ಹೋಗುವ ಸಾಧನವಾಗಿ ಧರ್ಮವನ್ನು ಬಳಸಲಾಗುತ್ತಿದೆ ಎಂದು ಇವರು ತಿಳಿಯುತ್ತಾರೆ. ಅನೇಕ ಮಾರ್ಕ್ಸಿಸ್ಟ್ ವಿಚಾರವಾದಿಗಳು ಹಾಗೂ

ನಾಸ್ತಿಕರು, ಧಾರ್ಮಿಕರು ಅವೈಚಾರಿಕರೆಂದು ಭಾವಿಸುತ್ತಾರೆ. ಧರ್ಮವನ್ನು ಅದರ ಸಹಜ ಸಾವಿನತ್ತ ಕೊಂಡೊಯ್ಯುವಲ್ಲಿ ಪ್ರಯತ್ನಿಸುತ್ತಿದ್ದೇವೆ ತಾವು ಎಂದು ಇವರು ತಿಳಿಯುತ್ತಾರೆ.

ಧರ್ಮನಿರಪೇಕ್ಷತೆ ಮತ್ತು ಅಲ್ಪ ಸಂಖ್ಯಾಂತರ ರಕ್ಷಣೆ

ಭಾರತದ ಅಲ್ಪ ಸಂಖ್ಯಾತರು, ತೀವ್ರ ಧಾರ್ಮಿಕವಾದಿಗಳು ಹಾಗೂ ಕೆಲವೊಮ್ಮೆ ಮೂಲಭೂತವಾದಿಗಳು ಆಗಿದ್ದರೂ, ಅವರು ಧರ್ಮನಿರಪೇಕ್ಷೆಯ ಒಟ್ಟು ಬೆಂಬಲಿಗರಾಗಿದ್ದಾರೆ. ಸರ್ಕಾರವು ನಿಷ್ಪಕ್ಷಪಾತವಾಗಿಯೂ ತಟಸ್ಥವಾಗಿಯೂ ಧರ್ಮದ ವಿಚಾರದಲ್ಲಿ ವ್ಯವಹರಿಸಬೇಕೆಂದು ಇವರು ನಿರೀಕ್ಷಿಸುತ್ತಾರೆ. ಹಿಂದೂ ಪ್ರಾಬಲ್ಯದಿಂದ ಕೂಡಿರುವ ಈ ಸಮಾಜದಲ್ಲಿ ಧರ್ಮ ನಿರಪೇಕ್ಷತೆಯೇ ಪರ್ಯಾಯ ವ್ಯವಸ್ಥೆಯಾಗಿ ಕಾಣುತ್ತದೆ ಇವರಿಗೆ. ಧರ್ಮನಿರಪೇಕ್ಷತೆ ಮರೆಯಾಗಿಬಿಟ್ಟರೆ ಹಿಂದೂಧರ್ಮನಿಷ್ಠ ಸರ್ಕಾರ ಬಂದು ಬಿಡಬಹುದೆಂಬ ಭಯವು ಸಹಾ ಅವರಲ್ಲಿರಬಹುದು.

ಧರ್ಮನಿರಪೇಕ್ಷತೆಯ ವಿರೋಧಿಗಳು

ಭಾರತೀಯ ಸೆಕ್ಯುಲರ್‌ವಾದವು ಇಂದು ಅತ್ಯಂತ ಗಂಭೀರವಾದ ಸಮಸ್ಯೆಯ ಮಡುವಿನಲ್ಲಿದೆ. ನೆಹರು ಪ್ರಣೀತ ಧರ್ಮನಿರಪೇಕ್ಷೆ ಇಂದು ನಾಶವಾಗಿದೆ, ಅಥವಾ ನಾಶವಾಗುತ್ತಿದೆ. ಧರ್ಮವು ಸಮಾಜ ನಿರ್ಮಾಣದಲ್ಲಿ, ಮತೀಯ ಶಕ್ತಿಯ ಧ್ರುವೀಕರಣದಲ್ಲಿ, ಆರ್ಥಿಕ ಆಸಕ್ತಿಗಳಲ್ಲಿ, ರಾಜಕೀಯ ಶಕ್ತಿಪ್ರದರ್ಶನಗಳಲ್ಲಿ ಬಳಕೆಯಾಗುತ್ತಿರುವುದು ಕಂಡುಬಂದಿದೆ. ಆಸೇತು ಹಿಮಾಚಲ ಪರ್ಯಂತವಾಗಿ ಪ್ರಾಂತೀಯ, ಜಾತೀಯ, ಭಾವನೆಗಳ ಎಲ್ಲೆ ಮೀರಿ ಹಿಂದುತ್ವ ಬೆಳೆಯುತ್ತಿರುವುದು ಇಂದು ಸ್ಪಷ್ಟವಾಗಿದೆ. ಇದನ್ನೇ Hindu Backlash ಎಂದು ಕರೆಯಲಾಗಿದೆ.

ಅಲ್ಪಸಂಖ್ಯಾತರ ರಾಜಕೀಯ ಧ್ರುವೀಕರಣದ ವಿರುದ್ಧ ಬಹುಸಂಖ್ಯಾತರ ವಿರೋಧ ವ್ಯಕ್ತವಾಗಿದೆ. ಇದು ಸಾಮಾಜಿಕವಾಗಿ ತಲ್ಲಣವನ್ನುಂಟುಮಾಡಿದೆ. **ಧರ್ಮನಿರಪೇಕ್ಷತೆ** ಎಂಬ ಶಬ್ದವೇ ಖಂಡನೆಗೆ ಗುರಿಯಾದದ್ದು ಕಂಡುಬಂದಿದೆ. ಈ ಹಿನ್ನೆಲೆಯಲ್ಲಿ ಭಾರತೀಯ ಧರ್ಮನಿರಪೇಕ್ಷತೆಯನ್ನ ಪುನರ್ ಪರಿಶೀಲನೆಗೆ ಒಡ್ಡಬೇಕಾಗಿದೆ. ಭಾರತದ ಲಕ್ಷೋಪಲಕ್ಷ ಜನ ಬಹುಸಂಖ್ಯಾತರು ಧರ್ಮನಿರಪೇಕ್ಷೆಯಿಂದಾಗಿಯೇ ತಮ್ಮ ಧರ್ಮಕ್ಕೆ ಅಪಾಯವಿದೆ ಎಂದು ಅಂದುಕೊಂಡಿದ್ದಾರೆ. ಇತ್ತೀಚಿನ ದಿನಗಳಲ್ಲಿ ಹಲವಾರು ವಿಮರ್ಶಕರು ಈ ಧ್ವನಿಯನ್ನು ಬೆಂಬಲಿಸುತ್ತಿದ್ದಾರೆ. ಅಂಥವರಲ್ಲಿ ನಮ್ಮ ಮೂವರು ವಿಮರ್ಶಕರು ಸೇರುತ್ತಾರೆ.

ಆಶಿಶ್ ನಂದಿ. An anti- secularist Manifesto (೧೯೮೫) ಎಂಬ ತಮ್ಮ ಪ್ರೌಢ ಪ್ರಬಂಧದಲ್ಲಿ ನಂದಿಯವರ ವಾದ ಹೀಗಿದೆ. ಭಾರತದಲ್ಲಿ ಧರ್ಮನಿರಪೇಕ್ಷತೆ ತನ್ನೆಲ್ಲಾ ಸಾಧನೆಗಳನ್ನು ಮೀರಿ, ಅಪಾಯಕಾರಿ ಹಂತವನ್ನು ತಲುಪಿದೆ. ಧರ್ಮನಿರಪೇಕ್ಷತೆ ಮತ್ತು ಆಧುನಿಕತೆಗಳು ಧಾರ್ಮಿಕ ಹಿಂಸೆಗಳ ಮೂಲಗಳು: A gift of christianity. ಆಶಿಶ್ ನಂದಿಯವರಿಗೆ ಪಾಶ್ಚಿಮಾತ್ಯ ವಿಜ್ಞಾನ ಹಾಗೂ ವೈಚಾರಿಕತೆಯ ಸಿದ್ಧವಸ್ತುವಾಗಿ (Product) ಕಾಣುತ್ತದೆ ಧರ್ಮನಿರಪೇಕ್ಷತೆ. ಈ ಯುಗದ ಎಲ್ಲ ಸಮಕಾಲಿನ ಸಮಸ್ಯೆಗಳ ಉಗಮಕ್ಕೆ ಈ ಸಿದ್ಧಾಂತವೇ ಕಾರಣೀ ಭೂತವಾದ ಶಕ್ತಿ ಎನ್ನುತ್ತಾರೆ

ಅವರು. ಇಸ್ಲಾಂ ಮತ್ತು ಸಿಖ್ ಧರ್ಮಗಳು ಸೆಕ್ಯುಲರ್ ಸರಕಾರದಿಂದ ಏನನ್ನೂ ಕಲಿಯಬೇಕಾದದ್ದು ಇಲ್ಲ ಎಂದವರು ಹೇಳುತ್ತಾರೆ.

ಧರ್ಮನಿರಪೇಕ್ಷತೆಗೆ ಬದಲಿ ವ್ಯವಸ್ಥೆಯಾಗಿ ನಂದಿಯವರು ತಮ್ಮ ವಾದವನ್ನು ಹೀಗೆ ಮಂಡಿಸುತ್ತಾರೆ; ಭಾರತದಲ್ಲಿ ಪರಂಪರಾನುಗತವಾಗಿ, ಅನುಚಾನವಾಗಿ ಹರಿದು ಬಂದಿರುವ ಧರ್ಮ ಸಹಿಷ್ಣುತೆಯನ್ನು ನಾವು ಪುನಃ ಸ್ಥಾಪಿಸಬೇಕಾಗಿದೆ. ಸಾಮ್ರಾಜ್ಯಶಾಹಿ ಮತ್ತು ಪಾಶ್ಚಿಮಾತ್ಯ ಪ್ರಣೀತವಾದ ಧರ್ಮನಿರಪೇಕ್ಷತೆಯಿಂದ ನಾವು ಮುಕ್ತರಾಗಬೇಕಾಗಿದೆ. ಸೆಕ್ಯುಲರ್ ಕಲ್ಪನೆಯ ಅತ್ಯುನ್ನತ ಪ್ರತಿನಿಧಿ ಗಾಂಧೀಜಿ. ಆಧುನಿಕರಲ್ಲದ ಬಹುಸಂಖ್ಯಾತ ಭಾರತೀಯರು ಇಂದಿಗೂ ಸಹಿಷ್ಣುತೆಯನ್ನ ಜೀವನ ಕ್ರಮವಾಗಿ ಅಳವಡಿಸಿಕೊಂಡಿದ್ದಾರೆ. ಆಧುನಿಕ ವಿಚಾರವಾದಿಗಳಿಗಿಂತಲೂ ಹೆಚ್ಚು ಧರ್ಮ ಸಹಿಷ್ಣುತೆಯನ್ನು ಭಾರತದ ರೈತರು ಖಂಡಿತವಾಗಿ ಹೊಂದಿದ್ದಾರೆ ಎಂದು ನಂದಿಯವರು ವಾದಿಸುತ್ತಾರೆ.

ಮದನ್ :- ಮದನರ ಪ್ರಕಾರ ದಕ್ಷಿಣ ಏಷ್ಯಾದ ಧರ್ಮಗಳು ಅದ್ವಿತೀಯವಾದವು. ಇವು ಅಖಂಡತೆಯನ್ನು ಸಾಧಿಸಿರುವುದು ಮಾತ್ರವಲ್ಲದೆ, ದಟ್ಟ ಅನುಯಾಯಿಗಳ ಹಿನ್ನಲೆಯನ್ನು ಹೊಂದಿರುವ ಧರ್ಮಗಳು. ಇಲ್ಲಿ ಧರ್ಮವು ಸಮಾಜ, ಸಂವಿದಾನದ ಉಪಾಧಿಯಲ್ಲಿ ತನ್ನ ಕಾರ್ಯವನ್ನು ಮಾಡುತ್ತದೆ. ಅವುಗಳನ್ನು ಆಧುನಿಕ ಸೆಕ್ಯುಲರ್‌ವಾದದೊಡನೆ ಹೋಲಿಸುವುದು ಕಷ್ಟ. ಈ ಧರ್ಮಗಳು **ಸೇಕ್ರೆಡ್** ಮತ್ತು **ಸೆಕ್ಯುಲರ್** ಗಳ ನಡುವೆ ಇರುವ ವ್ಯತ್ಯಾಸಗಳನ್ನು ಸರಿಯಾಗಿ ತಿಳಿದಿವೆ .

ಎಂ. ಎನ್ ಶ್ರೀನಿವಾಸ್ :- ಇಂದಿನ ಧಾರ್ಮಿಕ ಮತ್ತು ಆಧ್ಯಾತ್ಮಿಕ ತುಮುಲವನ್ನು ಬಗೆಹರಿಸಬೇಕಾದರೆ ಭಾರತಕ್ಕೊಂದು ಹೊಸ ತತ್ವಜ್ಞಾನದ ಅಗತ್ಯವಿದೆ ಎಂಬುದು ಶ್ರೀನಿವಾಸರ ಗಾಢವಾದ ನಂಬಿಕೆ. ಈ ತತ್ವಜ್ಞಾನವು ಧರ್ಮನಿರಪೇಕ್ಷ ಮಾನವತಾವಾದವಾಗಲು ಸಾಧ್ಯವಿಲ್ಲ. ಬದಲಾಗಿ ಇಂದು, ಸೃಷ್ಟಿಕರ್ತನಾದ ದೇವರ ಅಸ್ತಿತ್ವದಲ್ಲಿ ಆಳವಾದ ನಂಬಿಕೆಯಿರುವ ತತ್ವಜ್ಞಾನದ ಅಗತ್ಯವಿದೆ ಎನ್ನುತ್ತಾರೆ ಇವರು.

ಭಾರತ ಮತ್ತು ಜಗತ್ತು ವಿವೇಕ ರಹಿತವಾದ ಹಾಗೂ ಪ್ರಚಾರ ಮಾಧ್ಯಮಪ್ರಣೀತವಾದ ಜೀವನ ಕ್ರಮವನ್ನು ಸಹಿಸಲು ಖಂಡಿತಾ ಸಾಧ್ಯವಿಲ್ಲ ಎನ್ನುತ್ತಾರೆ ಅವರು. ದೇವರ ಇರುವಿಕೆಯಲ್ಲಿ ಅಚಲವಾದ ನಂಬಿಕೆ ಬೇಕೆಂದು ಶ್ರೀನಿವಾಸ್ ಹೇಳುತ್ತಾರೆ. ಇಲ್ಲಿ ತಾಂಡವಾಡುತ್ತಿರುವ ಭ್ರಷ್ಟಾಚಾರ, ಚಾರ್ವಾಕವಾದ, ವಿಷಯ ಲೋಲುಪತೆ - ಇವುಗಳ ಬಗ್ಗೆ ಅವರು ಗಂಭೀರವಾಗಿ ಚಿಂತಿಸುತ್ತಾರೆ. ಅಷ್ಟೇ ಅಲ್ಲದೆ ಈ ಎಲ್ಲಾ ಅನಿಷ್ಟಗಳು ಧರ್ಮನಿರಪೇಕ್ಷತೆಯ ದುಷ್ಪರಿಣಾಮಗಳೆಂದು ನಂಬುತ್ತಾರೆ.

ಈ ವಿಮರ್ಶಕರನ್ನು ಸೂಕ್ಷ್ಮವಾಗಿ ಅಧ್ಯಯನಮಾಡಿದಾಗ ನೈತಿಕವಾದ ಅಡಿಪಾಯವೊಂದನ್ನು ಆಧರಿಸಿಕೊಂಡಿರುವ ಸಮಾಜ ವ್ಯವಸ್ಥೆಯ ಬಗ್ಗೆ ಅವರಿಗೆ ಗಾಢವಾದ ಅಪೇಕ್ಷೆ ಇದೆ ಎಂದು ಅನಿಸುತ್ತದೆ. ಸಾಮರಸ್ಯದಿಂದ ಕೂಡಿದ, ಪವಿತ್ರವಾದ, ಸಮಾಜವನ್ನು ಅವರು ಬಯಸುತ್ತಾರೆ. ವ್ಯಕ್ತಿಗತವಾದ, ಅನೈತಿಕವಾದ, ಧರ್ಮನಿರಪೇಕ್ಷವಾದ ಸಮಾಜ ಅವರಿಗೆ ಅಸಹ್ಯವಾಗಿ ಕಾಣುತ್ತದೆ.

ವಿಮರ್ಶೆ :- ಈ ಸಂಗತಿಗಳನ್ನ ಅವುಗಳ ವಿವಿಧ ಆಯಾಮಗಳಲ್ಲಿ ಪರೀಕ್ಷಿಸಿದಾಗ, ಈ ಬರಹಗಾರರಿಗೆ ಸೆಕ್ಯುಲರ್‌ವಾದದ ಕೆಲವು ಸಂಗತಿಗಳ ಬಗ್ಗೆ ಮಾತ್ರ ಅತೃಪ್ತಿ ಇರುವುದು ಗೋಚರಿಸುತ್ತದೆ. ಆದರೆ ಧರ್ಮಾಧಾರಿತ ರಾಜ್ಯದಲ್ಲಿ ಸರ್ಕಾರದ ಕಾರ್ಯಾಂಗ ಮತ್ತು ನ್ಯಾಯ

ನಿರ್ಣಯಗಳೆಲ್ಲವೂ ಧರ್ಮದ ಆದಿಪತ್ಯಕ್ಕೆ ಒಳಪಟ್ಟಿರುತ್ತದೆ. ಈ ವಿಮರ್ಶಕರು ಆಧುನಿಕ ಸರಕಾರ ವ್ಯವಸ್ಥೆಯ ಟೀಕಾಕಾರರಾಗಿ ಕಾಣುತ್ತಾರಾದರೂ ಧಾರ್ಮಿಕ ಸ್ವಾತಂತ್ರ್ಯ, ನಾಗರಿಕ ಸಮಾನತೆ, ಮತ್ತು ರಾಜಕೀಯದಿಂದ ಧರ್ಮವನ್ನು ಬೇರ್ಪಡಿಸುವ ಬಗ್ಗೆ ಇವರ ಅಭ್ಯಂತರವಿಲ್ಲ.

ಅತ್ಯಂತ ಜರೂರಿನ ಕೆಲವು ಸಂಗತಿಗಳ ಬಗ್ಗೆ ಇವರ್‍ಯಾರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿಲ್ಲ. ಅದು ಧರ್ಮಾಧಾರಿತ ವೈಯುಕ್ತಿಕ ಕಾನೂನುಗಳು. ಅವರು ಖಂಡಿತವಾಗಿಯೂ ಧಾರ್ಮಿಕ ಮೂಲಭೂತವಾದ ಅಥವಾ ಪ್ರತ್ಯೇಕತಾವಾದದ ಪರವಾಗಿ ಇಲ್ಲ. ಯಾವ ವ್ಯವಸ್ಥೆಯು ಬಹು ಧರ್ಮೀಯರನ್ನು ಮತ್ತು ಪ್ರಜಾಪ್ರಭುತ್ವವನ್ನು ಸರಿದೂಗಿಸಿಕೊಂಡು ಹೋಗುತ್ತದೆಯೋ ಅಂತಹ ವ್ಯವಸ್ಥೆಯನ್ನು ಇವರು ಪ್ರತಿಪಾದಿಸುತ್ತಿರುವುದು ಸ್ಪಷ್ಟವಿದೆ.

೨. ನಮ್ಮ ಸಮಾಜದಲ್ಲಿರುವ ಧರ್ಮನಿರಪೇಕ್ಷ ಸಂಸ್ಥೆಗಳಾದ, ವಿಶ್ವವಿದ್ಯಾಲಯಗಳು, ಆಸ್ಪತ್ರೆಗಳು, ಪ್ರಯೋಗಾಲಯಗಳು, ವಿಜ್ಞಾನ ಸಂಸ್ಥೆ -ಇತ್ಯಾದಿ, ಎಲ್ಲಿ ನಮ್ಮ ಸಮಾಜದ ಬುದ್ಧಿಜೀವಿ ವರ್ಗವು ಬದುಕುತ್ತವೆಯೋ ಅವುಗಳ ಬಗ್ಗೆ ಕೂಡಾ ಈ ವಿಮರ್ಶಕರ ತಕರಾರುಗಳು ಇಲ್ಲ. ಅಲ್ಲಿ ಎಲ್ಲಿಯೂ ಧರ್ಮ ತಲೆಹಾಕಬೇಕು ಎಂದು ಅವರಿಗೆ ಅನ್ನಿಸಿಲ್ಲ.

೩. ಧರ್ಮನಿರಪೇಕ್ಷಿಕರಣಕ್ಕೂ, ಸಾಮಾಜಿಕ ಬದಲಾವಣೆಗೂ ಸಂಬಂಧವಿದೆ ಎಂದು ಇವರ ಅನಿಸಿಕೆ. ಪಾರಂಪರಿಕ ಧರ್ಮದಲ್ಲಿ ಇರುವಂತಹ ಅಮಾನವೀಯ ಆಚರಣೆಗಳಾದ ವಿಧವಾ ದಹನ ಮತ್ತು ಅಸ್ಪೃಷ್ಯತೆಯನ್ನು ತೊಲಗಿಸುವಲ್ಲಿ ಧರ್ಮನಿರಪೇಕ್ಷಿಕರಣದಿಂದ ಸಹಾಯವಾಗಿದೆ ಎಂದು ಇವರು ಭಾವಿಸುತ್ತಾರೆ. ಇತ್ತೀಚಿನ ದಿನಗಳಲ್ಲಿ ನಂದಿಯವರು “Critical Traditionalism” ಮತ್ತು “ The critical insider” ಸಿದ್ಧಾಂತಗಳನ್ನು ಜನಪ್ರಿಯಗೊಳಿಸಿದ್ದಾರೆ.

ಧರ್ಮನೀರಪೇಕ್ಷಿಕರಣದ ಎರಡು ಅಂಶಗಳನ್ನ ಈ ವಿಮರ್ಶಕರು ಗುರುತಿಸುತ್ತಾರೆ. ಒಂದು, ಚಾರಿತ್ರಿಕ ಕ್ರಿಯೆಯಾಗಿ ಇದು, ಎಲ್ಲೆಡೆಯಲ್ಲಿಯೂ ವಿಮರ್ಶಾತ್ಮಕ ಸಾಕ್ಷಿ ಪ್ರಜ್ಞೆಯನ್ನು ಬೆಳಸಿ, ಶಕ್ತಿಶಾಲಿ ಸಮಾಜಸುಧಾರಕರನ್ನು ಹೊರ ತಂದಿದೆ. ಎರಡನೆಯದಾಗಿ ಯಾವುದೇ ಸಮಾಜವು ಪೂರ್ಣವಾಗಿ ಧಾರ್ಮಿಕವು ಪೂರ್ಣವಾಗಿ ಧರ್ಮನಿರಪೇಕ್ಷವು ಆಗಿರಲು ಸಾಧ್ಯವಿಲ್ಲ. ಸೆಕ್ರೆಡ್ ಮತ್ತು ಸೆಕ್ಯುಲರ್ ನಡುವೆ ಖಂಡಿತವಾಗಿಯೂ ವ್ಯತ್ಯಾಸವಿದೆ. ಅದರ ಪ್ರಮಾಣವು ಕಾಲಕಾಲಕ್ಕೆ ಹೆಚ್ಚು ಕಡಿಮೆಯಾಗುತ್ತಾ ಹೋಗಬಹುದು. ಈ ಹೊಸ ವಿಮರ್ಶಕರು ಒತ್ತಿ ಹೇಳುತ್ತಿರುವ ಸೂತ್ರ ಧರ್ಮನಿರಪೇಕ್ಷಿಕರಣದ ಮೂರನೆ ಮಾದರಿ.

ಭ್ರಷ್ಟಾಚಾರ, ಅನೈತಿಕತೆ, ಚಾರ್ವಾಕವಾದ, Consumer culture ಹೇಗೆ ಭಾರತೀಯ ನೈತಿಕಸ್ತರವನ್ನು ಸಂಪೂರ್ಣ ನಾಶಗೊಳಿಸಿದೆ ಎಂಬುದನ್ನು ಶ್ರೀನಿವಾಸರು ಹೇಳಿದ್ದಾರೆ. ಈ ಎಲ್ಲಾ ಬೆಳವಣಿಗೆಗಳು ನಮ್ಮಲ್ಲಿ “ಲೈಸೆನ್ಸ್ ಪರ್ಮಿಟ್ ರಾಜ್ಯಕ್ಕೆ ” ಕಾರಣವಾಗಿದೆಯೆಂದು ಅಭಿಪ್ರಾಯ ಪಡುತ್ತಾರೆ. ಪುರಾತನ ಬದುಕಿನ ಮೌಲ್ಯಗಳನ್ನು ನವೀಕರಿಸಬೇಕೆಂದು ಕರೆ ಕೊಡುತ್ತಾರೆ. ಈ ನಂಬಿಕೆಯೇ ರಾಷ್ಟ್ರ ನಿರ್ಮಾಣಕ್ಕೆ ಅಡಿಪಾಯವೆಂದು ದೃಢವಾಗಿ ನಂಬಿದ್ದಾರೆ. ಮೌಲ್ಯಾಧಾರಿತ ವ್ಯವಸ್ಥೆ ಮತ್ತು ಪಾರಮಾರ್ಥಿಕತೆಯು ಇಳಿಮುಖವಾಗುತ್ತಿರುವ ಸಾಮಾಜಿಕ ಆರೋಗ್ಯವನ್ನ ಎತ್ತಿಹಿಡಿಯಲು ಒಳ್ಳೆಯ ಔಷಧಿಯೆಂದು ನಂಬಿದ್ದಾರೆ.

ಪರ್ಯಾಯ ಸೂತ್ರವಾವುದು ?

ಆದರೆ ಅವರ ಬಳಿ ಸೂಕ್ತವಾದ ಪರ್ಯಾಯ ಸೂತ್ರವಿಲ್ಲ. ಧರ್ಮನಿರಪೇಕ್ಷ ರಾಜ್ಯಕ್ಕೊಂದು ಪರ್ಯಾಯ ವ್ಯವಸ್ಥೆಯನ್ನು ಯೋಚಿಸುವುದೇ ಒಂದು ರೋಮಾಂಚಕ ಸಂಗತಿ. ದಕ್ಷಿಣ ಏಷ್ಯಾದ ಧರ್ಮಗಳ ಶ್ರೇಷ್ಠತೆಯ ಬಗ್ಗೆ ಮದನ್‌ರವರ ವಾದವು ಸಾಧುವಲ್ಲ. ಸೇಕ್ರೆಡ್ ಮತ್ತು ಸೆಕ್ಯುಲರ್ ನಡುವಿನ ವ್ಯತ್ಯಾಸವು ಸಾವತ್ರಿಕವಾದದ್ದೆಂದು ಮದನ್‌ರವರೇ ಒಪ್ಪಿಕೊಳ್ಳುತ್ತಿದ್ದಾರೆ. ತಾವು ಸೂಚಿಸಿರುವ ಪರ್ಯಾಯ ವ್ಯವಸ್ಥೆಯು ಇಂದಿನ ಭಾರತದ ಗೊಂದಲಮಯವಾದ ಪರಿಸ್ಥಿತಿಗೆ ಏಕೆ ಮತ್ತು ಹೇಗೆ ಪರಿಹಾರವಾಗಬಹುದೆನ್ನುವುದನ್ನು ಶ್ರೀನಿವಾಸ್‌ರವರು ಎಲ್ಲಿಯೂ ಹೇಳಿಲ್ಲ. ಈ ಮಾತನ್ನು ಚಾರಿತ್ರಿಕವಾಗಿ ಅಧ್ಯಯನ ಮಾಡಿದಾಗ ಧರ್ಮವು ಮಾನವೀಯ ಮತ್ತು ನ್ಯಾಯಬದ್ಧವಾದ ಸಮಾಜವನ್ನು ನಿರ್ಮಾಣ ಮಾಡುವ ಸಾದನವಾಗಿದೆಯೇ ಇಲ್ಲವೇ ಎಂಬುದನ್ನು ಹೇಳುವುದು ಬಹಳ ಕಷ್ಟ. ಧರ್ಮವು ಅನೇಕ ಸಂದರ್ಭಗಳಲ್ಲಿ ಹಿಂಸಾರೂಪ ತಾಳಿದ ಪ್ರಸಂಗಗಳಿವೆ.

ಶ್ರೀನಿವಾಸರು ತಮ್ಮ ವಾದವನ್ನು ಮಂಡಿಸುವಾಗ ನಿಜವಾದ ಅರ್ಥದಲ್ಲಿ ಧರ್ಮವನ್ನು ಆಚರಣೆಗೆ ತರುವ ಬಗ್ಗೆ ಇರುವ ಕಷ್ಟಗಳನ್ನು ಮನಗಂಡಿದ್ದಾರೆಂದು ತಿಳಿಯುತ್ತದೆ. ಧರ್ಮದ ಹೆಸರಿನಲ್ಲಿ ನಡೆದಿರುವ ಹಿಂಸೆಯ ಚಿತ್ರ ಸಹಸ್ರಾರು ಪುಟಗಳಲ್ಲಿ ದಾಖಲೆಯಾಗಿ ಉಳಿದಿವೆ. ಶ್ರೀನಿವಾಸರು ಹೇಳುವ ‘ Philosophia perennis’ -ಇದು ಉಪನಿಷತ್ತಿನಲ್ಲಿ, ಭಕ್ತಿಪಂಥದಲ್ಲಿ, ಸೂಫಿಸಂತರಲ್ಲಿ, ಯಹೂದಿ ಮತ್ತು ಕ್ರೈಸ್ತ ಅನುಭಾವಿಗಳ ಬೋದನೆಗಳಲ್ಲಿ ಅಡಗಿವೆ. ಈಗಾಗಲೇ ಬಹಳಷ್ಟು ಚಿಂತನಕಾರರು ಮತ್ತು ದಾರ್ಶನಿಕರು ಧರ್ಮಕ್ಕಿರುವ ಸಾಂಸ್ಥಿಕ ನೆಲೆಗಟ್ಟನ್ನು ಕಾಣಲು ಹೋಗಿ ಬ್ರಹ್ಮನಿರಸನಗೊಂಡಿದ್ದಾರೆ. ಅವರೆಲ್ಲರು ಶ್ರೀನಿವಾಸರು ಹೇಳುವ ಪರ್ಯಾಯ ವ್ಯವಸ್ಥೆಯನ್ನು ಬೆಂಬಲಿಸುತ್ತಾರೆ.

ಈ ಬಗ್ಗೆ ಶ್ರೀನಿವಾಸರು ತೀವ್ರ ಕಾಳಜಿಯಿಂದ ಯೋಚಿಸುತ್ತಾರೆ. ಇಂದು ಧರ್ಮನಿರಪೇಕ್ಷತೆಯ ವಿರೋಧಿಗಳ ವಾದ, ಕೇವಲ ಶೈಕ್ಷಣಿಕ ಸಂಸ್ಥೆಗಳಲ್ಲಿ ಉಳಿಯದೇ ಬದುಕಿನ ಎಲ್ಲಾ ಸ್ತರಗಳಲ್ಲಿ ಗಂಭೀರವಾಗಿ ಚರ್ಚಿಸಲ್ಪಡುತ್ತಿದೆ. ಸಮಾಜ ಶಾಸ್ತ್ರದ ಇತಿಹಾಸವು **ಹೆಗಲ್, ಮಾರ್ಕ್ಸ್, ವೆಬರ್, ಮ್ಯಾನ್‌ಹೀಂ** -ಇವರೆಲ್ಲರ ಕಾಲದಿಂದಲೂ ಧರ್ಮದ ಮೇಲಿರುವ ಮುಸುಕನ್ನು ತೆಗೆದು ಹಾಕಿ, ಅದರಲ್ಲಿ ಅಂತರ್‌ಗತವಾಗಿರುವ ಸತ್ಯವನ್ನು ವಿಶ್ಲೇಷಿಸುವಲ್ಲಿ ಪರಿಶ್ರಮ ವಹಿಸಿದೆ. ಈ ದಿಸೆಯಲ್ಲಿ ಸಮಾಜ ಶಾಸ್ತ್ರಜ್ಞರೆಲ್ಲರ ಸತತ ಪರಿಶ್ರಮವಿದೆ. ಈ ಸಮಾಜ ವಿಜ್ಞಾನಿಗಳು ಧರ್ಮದಲ್ಲಿರುವ ಪ್ರವಾಧಿತ್ವವನ್ನು ಮತ್ತು ‘Utopian’ ಅಂಶಗಳನ್ನು ಕಂಡುಹಿಡಿಯಲು ಹೆಣಗಿದ್ದಾರೆ.ಇಂತಹ ಪ್ರಯತ್ನಗಳಿಂದಾಗಿಯೇ ಇತಿಹಾಸದಲ್ಲಿ ಧಾರ್ಮಿಕ ಸುಧಾರಣೆಗಳು ಕಂಡು ಬಂದಿವೆ.

ಇಂದು ಯಾವ ಚಿಂತಕನೂ, ಧರ್ಮವನ್ನು ಕೇವಲ ತಪ್ಪು ಗ್ರಹಿಕೆಯೆಂದು ತಿಳಿಯುವಷ್ಟು ಮೂರ್ಖನಾಗಿಲ್ಲ. **ಮಹಾತ್ಮಾ ಗಾಂಧೀಜಿಯವರು** ವಿಮರ್ಶಾತ್ಮಕ ದೃಷ್ಟಿಕೋನವುಳ್ಳ ಸ್ವಕೀಯ ಪ್ರಜೆ. ಅವರು ಪ್ರಗತಿಪರ ಮಾನವೀಯ ಗುಣಗಳನ್ನು ಪಡೆದದ್ದು ಧರ್ಮಗಳ ನೆಲೆಗಳಿಂದಲೇ. ಇವಲ್ಲದಿದ್ದರೆ ಅಸ್ಪೃಶ್ಯತೆ, ಅಸಮಾನತೆ ಮುಂತಾದ ಸಾಮಾಜಿಕ, ಆರ್ಥಿಕ ರೋಗಗಳ ವಿರುದ್ಧ ಅಷ್ಟೊಂದು ತೀವ್ರವಾಗಿ ಹೋರಾಟ ಮಾಡಲು ಅವರಿಗೆ ಆಗುತ್ತಿರಲಿಲ್ಲ. ಅವರು ಉದಾರವಾದಿಯಾದದ್ದು ಧರ್ಮದ ತಿರುಳನ್ನು ಗ್ರಹಿಸಿಕೊಂಡಿದ್ದರಿಂದಲೇ. ಆದರೆ ಧರ್ಮದೆಡೆಗೆ ಬೇಸರತ್ತಾಗಿ ಹಿಂದಿರುಗಬೇಕೆಂದು ಕರೆ ನೀಡುತ್ತಿರುವ ಸಮಾಜ ವಿಜ್ಞಾನಿಗಳು ಧರ್ಮದಿಂದಾಗುತ್ತಿರುವ

ಅನಾಹುತಗಳ ಬಗ್ಗೆ ದಿವ್ಯ ಮೌನವನ್ನು ಪ್ರಕಟಿಸುತ್ತಿದ್ದಾರೆ. ಮತಾಂಧತೆ, ಫ್ಯೂಡಲ್ ದೋರಣೆಗಳಂತಹವು ಇಂದಿಗೂ ಧರ್ಮದ ಹೆಸರಿನಲ್ಲಿ ಆಗುತ್ತಿವೆ. ಭಾರತೀಯ ಸಂವಿದಾನವು ಬಹು ಜನಾಂಗೀಯ ಮತ್ತು ಬಹು ಧರ್ಮೀಯ ಸಮಾಜಕ್ಕೆ ಅವಕಾಶವನ್ನು ನೀಡುವಲ್ಲಿ ಖಂಡಿತವಾಗಿಯೂ ಸಫಲವಾಗಿದೆ. ಪ್ರಜಾಪ್ರಭುತ್ವ ಮತ್ತು ಧರ್ಮನಿರಪೇಕ್ಷದ ನಡುವಿನ ಸಂಬಂಧವನ್ನು ಹೇಳುವುದರೊಂದಿಗೆ ನನ್ನ ಪ್ರಬಂಧದ ಕೊನೆಯ ಅಂಶಕ್ಕೆ ಪ್ರವೇಶಿಸುತ್ತಿದ್ದೇನೆ.

ಧರ್ಮನಿರಪೇಕ್ಷಿತವಲ್ಲದ ಭಾರತದಲ್ಲಿ ಪ್ರಜಾಪ್ರಭುತ್ವ ಸಾಧ್ಯವಿದೆ ಎಂದು ನಂದಿ, ಮದನ್, ಮತ್ತು ಶ್ರೀನಿವಾಸರಿಗೆ ನಂಬಿಕೆ ಇದೆಯೇ ? ನೆಹರೂ ಹಾಗೆ ತಿಳಿದಿರಲಿಲ್ಲ. ಭಾರತದಂತಹ ಬಹು ಜನಾಂಗೀಯ ಮತ್ತು ಬಹುಧರ್ಮೀಯ ದೇಶದಲ್ಲಿ ದರ್ಮನಿರಪೇಕ್ಷ ಅಲ್ಲದ ಸಮಾಜವನ್ನು ಊಹಿಸುವುದು ಸಹ ಕಷ್ಟವಾಗುತ್ತದೆ.

ಉಪಸಂಹಾರ

ಜಗತ್ತಿನಾದ್ಯಂತ ಎಲ್ಲರೂ ಒಂದಲ್ಲಾ ಒಂದು ಧರ್ಮದ ಚೌಕಟ್ಟಿನೊಳಗೆ ಇದ್ದಾರೆ. ಇತಿಹಾಸ ತಜ್ಞರು ಮತ್ತು ಸಮಾಜ ಶಾಸ್ತ್ರಜ್ಞರ ಪ್ರಕಾರ ಧರ್ಮವಿಲ್ಲದೆ ಸಮಾಜವಿರಲು ಸಾಧ್ಯವಿಲ್ಲ - ಭಾರತದಂತಹ ಸಂಕೀರ್ಣ ಸಾಮಾಜಿಕ ವ್ಯವಸ್ಥೆಗೆ, ಯಾವ ರೀತಿಯ ಪರ್ಯಾಯ ವ್ಯವಸ್ಥೆ ತರಬೇಕೆಂದು ಯೋಚಿಸುವಲ್ಲಿ ನಾನು ವಿಫಲನಾಗಿದ್ದೇನೆ. ಇಲ್ಲಿರುವ ಎಲ್ಲ ಧರ್ಮೀಯರ ಸಾಮಾಜಿಕ ವ್ಯವಸ್ಥೆಗೆ, ಮೌಲ್ಯಗಳಿಗೆ, ಮತ್ತು ಆಚರಣೆಗಳಿಗೆ ಯಾವುದೇ ರೀತಿಯ ಅಡ್ಡಿ, ಅಡಚಣೆಗಳು ಆಗದಂತೆ ಧರ್ಮನಿರಪೇಕ್ಷವಾದಕ್ಕೆ ಪರ್ಯಾಯವನ್ನು ಹೇಗೆ ಕಂಡುಕೊಳ್ಳಬೇಕೆಂಬುದು ಬಹಳ ಮುಖ್ಯ. ಇಲ್ಲಿರುವ ವೈವಿಧ್ಯತೆಯಲ್ಲಿ ಏಕತೆಯನ್ನು ಕಾಪಾಡಿಕೊಂಡು, ಸುಮಾರು ಅರ್ಧಶತಮಾನಗಳ ಕಾಲ ನಾಗರೀಕ, ವೈಚಾರಿಕ ಮತ್ತು ವಾಕ್ ಸ್ವಾತಂತ್ರ್ಯವನ್ನು ಗಣನೀಯ ಪ್ರಮಾಣದಲ್ಲಿ ಅನುಭವಿಸುತ್ತಾ ಬಂದಿದ್ದೇವೆ ನಾವು. ಧರ್ಮ, ಜಾತಿ, ಭಾಷೆ ಮತ್ತು ಇನ್ನಿತರ ಅಸಮಾನತೆಗಳ ವಿರುದ್ಧ ನಮ್ಮ ಜನ ದಿಟ್ಟ ಹೋರಾಟವನ್ನು ನಡೆಸುತ್ತಾ ಬಂದು, ಮಾನವೀಯ ಸಮಾಜವೊಂದನ್ನು ಕಟ್ಟುವುದರಲ್ಲಿ ಶ್ರಮಿಸುತ್ತಿದ್ದಾರೆ. ಈ ರೀತಿಯ ದಿಟ್ಟ ಹೋರಾಟಗಳು ನಡೆಯಲು ಭಾರತದಂತಹ ಸೆಕ್ಯುಲರ್ ರಾಜ್ಯಗಳಲ್ಲಿ ಮಾತ್ರ ಸಾಧ್ಯವೇನೋ ಅನಿಸುತ್ತದೆ. ಎಲ್ಲಿಯವರೆಗೆ ಇದಕ್ಕಿಂತ ಉತ್ತಮವಾದ ಮತ್ತು ಪರಿಣಾಮಕಾರಿಯಾದ ಪರ್ಯಾಯ ವ್ಯವಸ್ಥೆ ಸಿಗುವುದಿಲ್ಲವೋ ಅಲ್ಲಿಯವರೆಗೆ ಭಾರತಕ್ಕೆ ಧರ್ಮನಿರಪೇಕ್ಷತೆ ಅನಿವಾರ್ಯ.

ಜೋಸೆಫ್ ತಾರಮಂಗಲಮ್ ಕೆನಡಾದಲ್ಲಿ ಸಮಾಜಶಾಸ್ತ್ರ ಕಲಿಸುತ್ತಿರುವ ಭಾರತೀಯ ವಿಜ್ಞಾನಿಗಳು. ಇನ್ನೂ ಪ್ರಕಟವಾಗದಿರುವ ಅವರ ಲೇಖನದ ಕನ್ನಡ ಅನುವಾದವನ್ನ ಪ್ರಕಟಿಸಲು ಅನುಮತಿ ನೀಡಿದ್ದಕ್ಕೆ ರುಜುವಾತು ಅವರಿಗೆ ಋಣಿಯಾಗಿದೆ.

ಒಂದು ಸ್ಮರಣೆ



ಮಲ್ಲಿಕಾರ್ಜುನ ಮನಸೂರ

ಕಾಲ ಬೇಗ ಉರುಳುತ್ತದೆ. **ಮಲ್ಲಿಕಾರ್ಜುನ ಮನ್ಸೂರ**ರು ತೀರಿಕೊಂಡು ಎರಡು ವರ್ಷಗಳಾಯಿತು. ಕೆಲವು ವ್ಯಕ್ತಿಗಳ ಖಾಸಗಿ ಬದುಕು, ಇಡೀ ಜನಾಂಗದ ಬದುಕಿಗೆ ಪ್ರಾತಿನಿಧಿಕವಾಗಬಲ್ಲದು, ಅವರ ಸಾಧನೆ ಇಡೀ ಸಂಸ್ಕೃತಿಯ ಸಾಧನೆಗೆ ಕಲಶರೂಪದ್ದಾಗಬಹುದು. ಮನ್ಸೂರರು ಅಂತಹ ವ್ಯಕ್ತಿತ್ವ. ಅವರಿಗೆ ಶ್ರದ್ಧಾಂಜಲಿ ಅರ್ಪಿಸುವ ಸಲುವಾಗಿ ಶಬ್ದಗಳ ಹುಡುಕಾಟ ನಡೆಸಿದೆವು. **ಬೇಂದ್ರೆ**ಯವರು ಬರೆದಿರುವ **ಮನಸೂರರ ಹಾಡು ಕೇಳಿ** ಎನ್ನುವ ಪುಟ್ಟ ಪದ್ಯವೊಂದನ್ನ ಬಿಟ್ಟರೆ ಕನ್ನಡದ ಮಿಕ್ಕ ಬರವಣಿಗೆಗಳೆಲ್ಲವೂ ಸಪ್ಪೆ ಎನ್ನಿಸಿಬಿಟ್ಟಿತು.

ಮನ್ಸೂರರು ತಮ್ಮ ಜೀವನ ಚರಿತ್ರೆ ಬರೆದಿದ್ದಾರೆ. ನನ್ನ **ರಸಯಾತ್ರೆ** ಬಹಳಷ್ಟು ಕನ್ನಡಿಗರ ಕಣ್ಣಿಗೆ ಬಿದ್ದಿಲ್ಲ ; ಅಸಾಧಾರಣವಾದ ಸಾಹಿತ್ಯ ಕೃತಿಯದು ; ಸಾಹಿತ್ಯ ಅಕಾಡೆಮಿಯಿಂದ ಪುರಸ್ಕೃತವಾದ ಪುಸ್ತಕ. ನನ್ನ ರಸಯಾತ್ರೆ ಪುಸ್ತದಿಂದ ಆಯ್ದು ಭಾಗಗಳನ್ನ ಇಲ್ಲಿ ಪ್ರಕಟಿಸುತ್ತಿದ್ದೇವೆ.

ಛಾಯಾಗ್ರಾಹಕ **ಕೆ. ಜಿ. ಸೋಮಶೇಖರ್** ಅಪರೂಪದ ಚಿತ್ರವೊಂದನ್ನ ಒದಗಿಸಿದ್ದಾರೆ. ಚಿತ್ರ ಶ್ರೀಶೈಲದಲ್ಲಿ ೧೯೭೭ರಲ್ಲಿ ತೆಗೆದದ್ದು. ಚಿತ್ರದಲ್ಲಿ ಮನ್ಸೂರರು, ಅಣ್ಣ ಬಸವರಾಜ ಮನ್ಸೂರರು, ಮಕ್ಕಳಾದ ಗಿರಿಜಮ್ಮ, ಅಕ್ಕಮಹಾದೇವಿ, ಮನ್ಸೂರರ ಆತ್ಮೀಯ ಅಭಿಮಾನಿ ವೈ. ಚಂದ್ರಶೇಖರ್ ಹಾಗೂ ಮಕ್ಕಳು ಇದ್ದಾರೆ. ಮನ್ಸೂರರ ರಸಯಾತ್ರೆಯಲ್ಲಿ ಬರುವ ಶ್ರೀಶೈಲಯಾತ್ರೆ ನಡೆದದ್ದು ೧೯೩೭ರಲ್ಲಿ. ಆ ಯಾತ್ರೆ ಮನ್ಸೂರರಿಗೆ ಹಲವು ಸಂಕಟಗಳನ್ನ ತಂದೊಡ್ಡಿ, ಕಡೆಗೆ ಅವರ ತಾಯಿಯನ್ನೇ ಬಲಿ ತೆಗೆದುಕೊಳ್ಳುತ್ತದೆ. ನೊಂದ ಮನ್ಸೂರರು ನಲವತ್ತು ವರ್ಷ, ತನ್ನ ಆರಾಧ್ಯ ದೈವ ಚೆನ್ನಮಲ್ಲಿಕಾರ್ಜುನನ ದರ್ಶನ ಮಾಡುವುದಿಲ್ಲ. ೭೭ರಲ್ಲಿ ಮಕ್ಕಳ ಒತ್ತಾಸೆ ಹಾಗೂ ಚಂದ್ರಶೇಖರ್ ಅವರ ಅಭಿಮಾನಕ್ಕೆ ಕಟ್ಟುಬಿದ್ದು ಮತ್ತೆ ಶ್ರೀಶೈಲಯಾತ್ರೆ ಮಾಡುತ್ತಾರೆ.

ಇಲ್ಲಿ ಮುದ್ರಿತವಾಗಿರುವ ಮತ್ತೊಂದು ಚಿತ್ರದಲ್ಲಿ ಮನ್ಸೂರರ ಜೊತೆ ಕೆ. ಜಿ. ಸೋಮಶೇಖರ್ ಇದ್ದಾರೆ. ಈ ಚಿತ್ರ ತೆಗೆದವರು ಮನ್ಸೂರರ ಅಭಿಮಾನಿ, ಮರಾಠಿನಾಟಕಕಾರ **ಪು. ಲ. ದೇಶಪಾಂಡೆ**ಯವರು. ಪು. ಲ. ದೇಶಪಾಂಡೆಯವರು ೧೯೭೬ರಲ್ಲಿ ಮುಂಬಯಿಯಲ್ಲಿ ಮೂರು ದಿನಗಳ ಕಾಲ ಮನ್ಸೂರರ ಸಂಗೀತ ಕಛೇರಿ ಏರ್ಪಡಿಸಿದ್ದರಂತೆ. ಪ್ರತಿ ದಿನ ಮೂರು ಗಂಟೆಯಂತೆ ಒಟ್ಟು ಒಂಬತ್ತು ಗಂಟೆಗಳ ಹಾಡುಗಾರಿಕೆ ! ಸೋಮಶೇಖರ್ ಮನ್ಸೂರರ ಸಂಗೀತ ಕೇಳಲೆಂದೇ ಬೆಂಗಳೂರಿನಿಂದ ಮುಂಬಯಿಗೆ ಹೋಗಿದ್ದರು.



ನನ್ನ ರಸಯಾತ್ರೆ ಮಲ್ಲಿಕಾರ್ಜುನ ಮನ್ಸೂರ್

ಕೈವಿಡಿದು ಕರೆದುಕೊಳ್ಳಾ, ಚೆನ್ನಮಲ್ಲಿಕಾರ್ಜುನ

ಮಂಜೀಖಾನ ಸಾಹೇಬರು ಕಾಲವಾದ ಬಳಿಕ ನನ್ನ ಪಾಲಿಗೆ ಇಡೀ ಮುಂಬಯಿ ನಗರವೇ ಭಣಭಣ ಎನಿಸಿದಂತಾಯಿತು. ನನ್ನ ಜೀವ ಜೀವಾಳದಲ್ಲಿ ಬೆರೆತು ಹೋದ ಮಂಜೀಖಾನ ಸಾಹೇಬರು ಹೊರಟುಹೋದ ಬಳಿಕ, ನನಗೊಂದು ನಿತ್ರಾಣಸ್ಥಿತಿಯೇ ಬಂದಂತಾಯಿತು. ನಾನು ಧಾರವಾಡಕ್ಕೆ ಹೊರಟು ಬಂದೆ. ಕ್ರಮೇಣ ದುಃಖದ ಸಾಂದ್ರತೆಯಲ್ಲಿ ವಿಚಾರದ ಬೆಳಕು ಮೂಡಿದಾಗ, ಗುರುವೆಂದರೆ ಯಾವನೊಬ್ಬ ವ್ಯಕ್ತಿಯ ಶರೀರ ಮಾತ್ರವಲ್ಲ ; ಅವನಿತ್ತ ಪ್ರೇರಣೆ, ಹೊತ್ತಿಸಿದ ದೀಪವೆಂದು ಮನವರಿಕೆಯಾಯಿತು. ಆ ದೀಪ ಆರಕೂಡದು. ಅಗಲಿದ ಗುರುವನ್ನು ಹೃದಯದಲ್ಲಿ ಪ್ರತಿಷ್ಠಾಪಿಸಬೇಕೆಂದು ನಿರ್ಧರಿಸಿದಾಗ ನನ್ನ ರಿಯಾಜಿಗೆ ಹೊಸ ಚೇತನಿಯು ಕೂಡಿಕೊಂಡಿತು. ಬೆಳಿಗ್ಗೆ ನಾಲ್ಕು ತಾಸು ಮತ್ತು ಸಂಜೆಗೆ ನಾಲ್ಕು ತಾಸು ನನ್ನ ಸಾಧನೆ ನಡೆಯುತ್ತಿತ್ತು. ಆದರೆ ಗುರುವಿನ ಸ್ಮರಣೆ ನನ್ನ ಅಂತರಂಗದಲ್ಲಿ ಅಂತರ್ ಗಂಗೆಯಾಗಿ ಹರಿಯುತ್ತಲೇ ಇತ್ತು.

ನನ್ನ ತಾಯಿಯು ನನ್ನ ಸಾಧನೆಗೆ ಬೇಕಾದ ಎಲ್ಲ ಅನುಕೂಲತೆಗಳನ್ನು ಒದಗಿಸಿಕೊಡುತ್ತಿದ್ದಳು. ನಾನು ಕೋಣೆಯಲ್ಲಿ ಕುಳಿತು ಸಾಧನೆಯನ್ನು ಮಾಡುತ್ತಿರುವಾಗ ಒಳಗೆ ಯಾರನ್ನೂ ಬಿಡದೆ, ನನಗೆ ಆಯಾಸವಾಗಿರಬಹುದೆಂದು ಅನಿಸಿದಾಗಲೆಲ್ಲ, ತಾನೇ ಹಾಲು, ಹಣ್ಣು ಹಂಪಲುಗಳನ್ನು ನನಗಾಗಿ ಒಳಗೆ ತಂದು ಕೊಡುತ್ತಿದ್ದಳು. ನನ್ನ ತಾಯಿಯು ಕರುಣಾಮೂರ್ತಿಯಾಗಿದ್ದಳು. ನವನೀತಕ್ಕಿಂತ ಕೋಮಲವಾದ ಆಕೆಯ ಹೃದಯ ಬೇರೆಯವರ ದುಃಖದ ತಾಪಕ್ಕೆ ಕರಗಿ, ಕಷ್ಟದಲ್ಲಿದ್ದವರಿಗೆ

ನೆರವಾಗುವುದು ಆಕೆಯ ಸ್ವಭಾವವಾಗಿತ್ತು. ಮಾಡುವ ಕೆಲಸವನ್ನೆಲ್ಲ ಶಿವಾರ್ಪಣಭಾವದಿಂದ ಮಾಡುತ್ತಿದ್ದಳು.

ಆ ವರ್ಷ ಶಿವರಾತ್ರಿಯನ್ನು ಒಂದು ಪವಿತ್ರ ಕ್ಷೇತ್ರದಲ್ಲಿ ಕಳೆಯಬೇಕೆಂದು ನನ್ನ ಕಕ್ಕಿ ಮತ್ತು ಆಕೆಯ ಮಗಳು ಶ್ರೀಶೈಲಕ್ಕೆ ಹೊರಡುವವರಿದ್ದರು. ತಮ್ಮ ಜೊತೆಗೆ ನಾವೂ ಬರಬೇಕೆಂದು ಅವರು ಒತ್ತಾಯಪಡಿಸಿದರು. ನನ್ನ ತಾಯಿ ತಂದೆಯವರಿಗೆ ತೀರ್ಥಯಾತ್ರೆಯೆಂದರೆ ತುಂಬ ಇಷ್ಟ. ನಾನು, ನನ್ನ ಅಕ್ಕ, ನನ್ನ ತಾಯಿ, ತಂದೆ, ಕಕ್ಕಿ ಮತ್ತು ಆಕೆಯ ಮಗಳು ಹೀಗೆ ಒಂದು ಸಣ್ಣ ಪರಿವಾರವೇ ಶ್ರೀಶೈಲಕ್ಕೆ ಹೊರಟಿತು. ರಾತ್ರಿಯ ರೈಲುಗಾಡಿಯನ್ನು ಹತ್ತಿ ಧಾರವಾಡದಿಂದ ಪ್ರಯಾಣ ಬೆಳೆಸಿದೆವು. ಹೋಗುವಾಗಲೇ ಹುಬ್ಬಳ್ಳಿ ಸ್ಟೇಶನದಲ್ಲಿ ನೋಡಿದಾಗ ಒಂದು ಸಾಮಾನು ಕಳೆದದ್ದು ನಮ್ಮ ಗಮನಕ್ಕೆ ಬಂತು. ಮುಂದೆ ಸಾಗಿ ನಂದ್ಯಾಲ ಸ್ಟೇಶನದಲ್ಲಿ ಇಳಿದೆವು. ಅಲ್ಲಿಂದ ಚಕ್ಕಡಿ ಪ್ರವಾಸ ಮಾಡಿ ಯಾವುದೋ ಒಂದು ಊರಿನಲ್ಲಿ ತಂಗಿದೆವು. ಅಲ್ಲಿಂದ ಮುಂದೆ ಚಕ್ಕಡಿಯಲ್ಲಿಯೇ ಕುಳಿತು ಉದ್ದಾನವೀರಭದ್ರ ದೇವಸ್ಥಾನದಲ್ಲಿ ತುಸು ವಿಶ್ರಮಿಸಿದೆವು. ಅಲ್ಲಿಂದ ನಡೆದು ಹೋಗಿ ಭೀಮಕೊಳ್ಳ ದಾಟಿ ಶ್ರೀಶೈಲ ಸೇರಿದೆವು. ಶಿವರಾತ್ರಿಯ ದಿನವೇ ನಾನು ಅಲ್ಲಿಯ ಪಾತಾಳಗಂಗೆಯಲ್ಲಿ ಸ್ನಾನ ಮಾಡಲು ಹೋದೆ. ನನ್ನ ಕೋಟನ್ನು ದಂಡೆಯ ಮೇಲಿಟ್ಟು ಈಸಹತ್ತಿದೆ. ಮನದಣಿಯ ಈಸಿ ಮೇಲೆ ಬಂದು ನೋಡಿದರೆ ನನ್ನ ಕೋಟು ಇದ್ದಕ್ಕಿದ್ದಂತೆ ಅದೃಶ್ಯವಾಗಿತ್ತು. ಕೋಟು ಕಾಣದಿದ್ದಾಗ ಒಂದು ಕ್ಷಣ ಎದೆ 'ಝುಲ್' ಎಂದಿತು. ಕೋಟಿನಲ್ಲಿಯೇ ರಿಟರ್ನ ಟಿಕೆಟ್ಟು, ರೂಪಾಯಿ, ರಿಸ್ಟ ವಾಚು ಮುಂತಾದ ಸಾಮೂನುಗಳಿದ್ದ ಮೂಲಕ- 'ಮುಂದೇನು ಗತಿ ? ಊರಿಗೆ ತಿರುಗಿ ಹೋಗುವುದು ಹೇಗ?' ಎಂಬ ಪ್ರಶ್ನೆಗಳು ಮತ್ತೆಮತ್ತೆ ಮುತ್ತಿ ಬಂದು ಮನಸ್ಸನ್ನು ವ್ಯಗ್ರಗೊಳಿಸಿದವು. ಇಳಿದುಕೊಂಡ ತಾವಕ್ಕೆ ಹೋಗಿ ಒಂದು ಮೂಲೆಯಲ್ಲಿ ಖಿನ್ನವದನನಾಗಿ ಮುದುಡಿಕೊಂಡು ಕುಳಿತೆ. ಉಳಿದವರೆಲ್ಲರೂ ದೇವರ ದರ್ಶನ ಘಾಡಿಕೊಂಡು ಬಂದರೂ ನಾನು ಮಾತ್ರ -'ಎಲ್ಲಿಯ ದೇವರು ? ಏನು ದರ್ಶನ ? ದರ್ಶನಕ್ಕೆ ಬಂದವರಿಗೆ ದೇವರು ಹೀಗೆ ಪೀಡಿಸಿದರೆ ಯಾಕೆ ಬರಬೇಕು ಜನ ?' ಎಂದು ವಿಚಾರ ಮಾಡುತ್ತ ಮೂಲೆಯಲ್ಲಿಯೇ ಸ್ಥಿರವಾದೆ. ತಾಯಿಯು ನನ್ನ ತಲೆಯನ್ನು ಮೆಲ್ಲನೆ ನೇವರಿಸುತ್ತ, 'ನೀನು ಸುಮ್ಮನೆ ಚಿಂತಿಸಬೇಡ. ಊರಿನವರಿಂದ ಹಣಪಡೆದು ಹೋಗುವಾ. ಈ ಹೊತ್ತು ಶಿವರಾತ್ರಿ. ದೇವರ ದರ್ಶನ ಮಾಡಿಕೊಂಡು ಬಾ ' ಎಂದು ಪರಿಪರಿಯಾಗಿ ಸಮಾಧಾನ ಹೇಳಿದಳು. ತಾಯಿಯ ಮಾತನ್ನು ಕೇಳಿಯೂ ಕೇಳದವನಂತೆ ನಾನು ಕುಳಿತಲ್ಲಿಯೇ ಕುಳಿತುಬಿಟ್ಟೆ.

ರಾತ್ರಿಯ ಸಮಯ ಮತ್ತೆ ತಾಯಿಯು -'ಮಗೂ, ನಡೆ. ಹೊರಗಿನಿಂದಾದರೂ ನೋಡಿ ಬರೋಣ' ಎಂದು ನನ್ನನು ಗುಡಿಯ ಹತ್ತಿರ ಕರೆದೊಯ್ದಳು. ಆಗ ರಾತ್ರಿಯ ಹನ್ನೆರಡೋ ಅಥವಾ ಒಂದು ಘಂಟೆಯಾಗಿರಬೇಕು. ದೇವಸ್ಥಾನದ ದ್ವಾರ ಮುಚ್ಚಿತ್ತು. 'ಮಗೂ, ದ್ವಾರದ ಹೊರಗೆ ನಿಂತು ಸ್ವಲ್ಪ ಹಾಡು' ಎಂದು ತಾಯಿ ಹೇಳಿದಾಗ ನಾನು ಎಲ್ಲವನ್ನು ಮರೆತು ಭಾವಪರವಶನಾಗಿ ಆರ್ತಧ್ವನಿಯಲ್ಲಿ ಹಾಡತೊಡಗಿದೆ. ಆಶ್ಚರ್ಯದ ಮಾತೆಂದರೆ ಒಳಗಿನಿಂದ ಒಬ್ಬ ಪೂಜಾರಿ ಬಾಗಿಲು ತೆರೆದು 'ಒಳಗೆ ದರ್ಶನಕ್ಕೆ ಬನ್ನಿ' ಎಂದು ಕರೆದ. ನಾವು ಒಳಗೆ ಹೋಗಿ ದರ್ಶನ ಪಡೆದೆವು. ಆಗ ತಾಯಿಯು ದೇವರೆದುರು ನಿಂತು-'ಶಿವನೆ ನೀನು ಇಲ್ಲಿ ಇದ್ದದ್ದೇ ಸತ್ಯವಾಗಿದ್ದರೆ ನನ್ನನ್ನು ನಿನ್ನಲ್ಲಿ ಕರೆದುಕೊ. ನನಗೆ ಸಂಸಾರದಲ್ಲಿ ಏನೂ ಆಸಕ್ತಿ ಉಳಿದಿಲ್ಲ. ಇದೇ ನನ್ನಿಚ್ಛೆ, ನಿನ್ನಾಣೆಯಾಗಿ, ಇದೇ ನನ್ನ ಕೊನೆಯಾಸೆ. ಕರೆದುಕೊ ನಿನ್ನಡಿಯಲ್ಲಿ' ಎಂದು ಅಂಗಲಾಚಿ ಬೇಡಿಕೊಂಡಳು. ಆಗ 'ನಾನು ನಿನ್ನನ್ನು ಬಿಟ್ಟರೆ ತಾನೆ ಆತನು ಕರೆದುಕೊಳ್ಳುವುದು?' ಎಂದು ತಾಯಿಗೆ ನಕ್ಕು ನುಡಿದದ್ದು ನನಗಿನ್ನೂ ನೆನಪಿದೆ.

ಹೀಗೆ ಮಧ್ಯರಾತ್ರಿಯಲ್ಲಿ ದೇವರ ದರ್ಶನ ಮುಗಿಸಿ ದೇವರೊಡನೆ ಪೂಜಾರಿಗೂ ಕೃತಜ್ಞತೆಗಳನ್ನು ಸಲ್ಲಿಸಿ ನಮ್ಮ ಬಿಡಾರಕ್ಕೆ ಮರಳಿದೆವು. ಮರು ದಿನ ಬೆಳಗಾಗುತ್ತಲೆ ಮತ್ತೆ ಕೋಟಿನ ಚಿಂತೆ. ಎಲ್ಲಿ ಹಣ, ಎಲ್ಲಿ ಟಿಕೇಟು, ಮರು ಪ್ರಯಾಣ ಮಾಡುವ ಬಗೆ ಹೇಗೆ?...ಈ ಎಲ್ಲ ಪ್ರಶ್ನೆಗಳು ಮತ್ತೆ ಮತ್ತೆ ಮರುಕಳಿಸಲಾರಂಭಿಸಿದವು. ಈ ತೊಡಕನ್ನು, ನಮ್ಮಂತೆಯೇ ಯಾತ್ರೆಗೆ ಬಂದಿದ್ದ ಹುಬ್ಬಳ್ಳಿಯ ಒಬ್ಬ ಸಭ್ಯ ಗೃಹಸ್ಥರೆದುರು ತೋಡಿಕೊಂಡಾಗ, 'ನೀವೇನು ಚಿಂತಿ ಮಾಡಬ್ಯಾಡ್ರಿ. ಇಂಥಾ ಕಾಲ ಎಲ್ಲರಿಗೂ ಬರತೈತಿ. ನಾಳೆ ನಾಡದ್ರಾಗ ನಿಮಗೆ ಹಣದ ವ್ಯವಸ್ಥಾ ಮಾಡಿಕೊಡ್ತೀನಿ' ಅಂತ ಅವರು ಸಮಾಧಾನ ಹೇಳಿದಾಗ ನನ್ನ ಜೀವದಲ್ಲಿ ಜೀವ ಬಂತು. ಈ ಸಭ್ಯ ಗೃಹಸ್ಥರು ತಮ್ಮ ಪರಿವಾರದೊಂದಿಗೆ ಪಕ್ಕದ ಗಂಗೆಯಪಳಿ ಗ್ರಾಮದಲ್ಲಿ ತಂಗಿದ್ದರು. ಮರುದಿನ ಗಂಗೆಯಪಳಿಯಲ್ಲಿಯೇ ಅವರನ್ನು ಕಂಡು ಹಣ ಪಡೆದುಕೊಂಡು ಮುಂದೆ ಪ್ರಯಾಣ ಬೆಳೆಸಿದರಾಯಿತು ಎಂದು ನಾವೆಲ್ಲರೂ ಶ್ರೀಶೈಲದ ಮಲ್ಲಿಕಾರ್ಜುನನಿಗೆ ಇನ್ನೊಮ್ಮೆ ನಮಸ್ಕರಿಸಿ ಪಾದ ಬೆಳೆಸಿದೆವು. ಗಂಗೆಯಪಳಿ ತಲುಪಿದಾಗ ಅಲ್ಲಿ ಅಡವಿ ಸ್ವಾಮಿಗಳ ಸಾನ್ನಿಧ್ಯದಲ್ಲಿ ಭಜನೆ ನಡೆದಿತ್ತು. ಹುಬ್ಬಳ್ಳಿಯ ಆ ಸಭ್ಯಗೃಹಸ್ಥರು ಭಜನೆಯಲ್ಲಿ ತಲ್ಲೀನರಾಗಿ ಕುಳಿತಿದ್ದರು. ಆಗ ಅವರನ್ನು ಮಾತಾಡಿಸುವುದು ಸರಿಯಲ್ಲವೆಂದು ನಾವು ಕೆಲಹೊತ್ತು ಭಜನೆಯಲ್ಲಿ ಭಾಗವಹಿಸಿದೆವು. ಹುಬ್ಬಳ್ಳಿಯವರು ವಚನವಿತ್ತ ಪ್ರಕಾರ ನಮಗೆ ಧನಸಹಾಯ ನೀಡಿದರು. ಆದರೆ 'ರಾತ್ರಿಯ ಹೊತ್ತು ಚಕ್ಕಡಿಯಲ್ಲಿ ಪ್ರಯಾಣ ಬೆಳೆಸುವುದೇಕೆ, ಬೆಳಿಗ್ಗೆ ಹೊರಟರಾಯಿತು' ಎಂದಳು ನನ್ನ ತಾಯಿ. ಎಲ್ಲರಿಗೂ ಆ ಮಾತು ಒಪ್ಪಿಗೆಯಾಗಿ ನಾವೆಲ್ಲರೂ ಅಲ್ಲಿಯೇ ಮಲಗಿಕೊಂಡೆವು. ಬೆಳಗಿನ ತಂಗಾಳಿ ಬೀಸಿ ಬೀಸಿ ಬರುತ್ತಿರುವಂತೆ ನನ್ನ ಕಣ್ಣು ತೆರೆಯಿತು. ಯಾತ್ರಿಕರನ್ನು ಚಕ್ಕಡಿಗಳಲ್ಲಿ ಮರಳಿ ಒಯ್ಯುತ್ತಿದ್ದ ಎತ್ತುಗಳ ಕೊರಳಗಂಟೆಯ ನಾದ ಬಲು ಹಿತವಾಗಿ ಕೇಳಿಸುತ್ತಿತ್ತು. ಅಷ್ಟರಲ್ಲಿಯೇ ಯಾವುದೋ ಒಂದು ಚಕ್ಕಡಿ ನಾವು ಮಲಗಿದ ಕಡೆಗೇ ರಭಸದಿಂದ ಬಂದಂತಾಯಿತು. ಕಣ್ಣೆವೆ ಮುಚ್ಚಿ ತೆರೆಯುವುದರೊಳಗೆ ಆ ಚಕ್ಕಡಿ ನನ್ನ ಕಾಲಿನ ಮೇಲಿಂದಲೇ ಹಾಯ್ದು ಹೋಯಿತು. 'ಅಯ್ಯೋ' ಎಂದು ಚೀರಿ ಪಕ್ಕಕ್ಕೆ ನೋಡುವಷ್ಟರಲ್ಲಿ ಆ ಚಕ್ಕಡಿ ಇನ್ನೂ ನಿದ್ದೆಗಣ್ಣಿನಲ್ಲಿದ್ದ ನನ್ನ ತಾಯಿಯ ಎದೆಯಮೇಲೆಯೇ ಹಾಯ್ದು ಹೋಗಿತ್ತು. ನನ್ನ ಕಾಲಿನ ನೋವನ್ನು ಮರೆತು ತಾಯಿಯ ಹತ್ತಿರ ಸರಿದು ನೋಡುವಷ್ಟರಲ್ಲಿ ಅವಳ ಪ್ರಾಣ ಪಕ್ಷಿ ಹಾರಿಯೇ ಹೋಗಿತ್ತು. ಮುನ್ನಾದಿನದ ಮಧ್ಯರಾತ್ರಿ ಮಲ್ಲಿಕಾರ್ಜುನನ ಗುಡಿಯಲ್ಲಿ 'ಕೈವಿಡಿದು ಕರೆದುಕೊಳ್ಳಾ ಚೆನ್ನಮಲ್ಲಿಕಾರ್ಜುನಾ' ಎಂಬಂತೆ ನನ್ನ ತಾಯಿ ಮಾಡಿಕೊಂಡ ಪ್ರಾರ್ಥನೆ ಇಷ್ಟು ಬೇಗ ಮತ್ತು ಈ ರೀತಿಯಲ್ಲಿ ಈಡೇರಬೇಕೆ ?-ಎಂದು ನನ್ನ ಜೀವ ಗೋಗರೆಯಿತು. ಶ್ರೀಶೈಲದ ತೀರ್ಥಯಾತ್ರೆಗೆಂದು ಬಂದ ನಮ್ಮ ಪರಿವಾರವೆಲ್ಲ ಶ್ರೀಶೈಲದಲ್ಲಿಯೇ ನನ್ನ ತಾಯಿಯ ಅಂತಿಮಯಾತ್ರೆ ಮುಗಿಸಿ ಮನೆಗೆ ಮರಳಬೇಕಾಯಿತು. ಕರುಣೆ, ದಯಾ-ದಾಕ್ಷಿಣ್ಯಗಳನ್ನರಿಯದ ಸಾವು-ನೋವು ನನ್ನ ಅಂತಃಕರಣವನ್ನೇ ಹಿಂಡಿಹಾಕಿತ್ತು. ನನ್ನ ಗುರುಗಳಾದ ನೀಲಕಂಠಬುವಾ ಹಾಗು ಮಂಜೀಖಾಂಸಾಹೇಬರ ಮರಣ, ನಂತರ ತೀರ್ಥಯಾತ್ರೆಗೆ ಹೋದಾಗ ತಾಯಿಯ ಆಕಸ್ಮಿಕ ನಿಧನ, ಹೀಗೆ ಒಂದರಮೇಲೊಂದು ಆಘಾತಗಳು ಬಂದು ನನ್ನ ಹೃದಯಸಮುದ್ರವನ್ನು ಅಲ್ಲೋಲಕಲ್ಲೋಲಗೊಳಿಸಿದವು. ಈ ಮೂವರೂ ವಾತ್ಸಲ್ಯಮೂರ್ತಿಗಳನ್ನು ಕಳೆದುಕೊಂಡ ನಾನು ಹಿಂಡನಗಲಿದ ಹಕ್ಕಿಯಂತೆ ಪರಿತಪಿಸುವಂತಾಯಿತು. ಇದೆಲ್ಲ ನಡೆದದು ಎರಡು ಮೂರು ವರ್ಷಗಳ ಅವಧಿಯಲ್ಲಿ. ಅದು ನನ್ನ ಬದುಕಿನ ಕರಾಳ ಕಾಲ.

ಈ ಕರಾಳಕಾಲದಲ್ಲಿ ದಾರಿಗಾಣದ ಶಿಶುವಿನಂತೆ ತೆವಳುತ್ತಿರುವಾಗ ಕರುಣಾಳು ಬೆಳಕಾಗಿ ಬಂದ ಮಹಾಸ್ವಾಮಿಗಳೊಬ್ಬರು ನನ್ನ ಕೈ ಹಿಡಿದು ನಡೆಸಿರದಿದ್ದರೆ ನನ್ನ ಗತಿ ಏನಾಗುತ್ತಿತ್ತೋ ನಾನರಿಯೆ.

ಉಸ್ತಾದ ಬುರ್ಜಿಖಾನಸಾಹೇಬರ ತಾಲೀಮು

ತಾಯಿಯು ಮತ್ತು ಗುರುಗಳು ತೀರಿಹೋದ ತರುವಾಯ ಗಾಸಿಗೊಂಡ ನನ್ನ ಜೀವ ಚೇತರಿಸಿಕೊಳ್ಳಲಿಕ್ಕೆ ಎರಡು ಮೂರು ತಿಂಗಳು ಹತ್ತಿದವು. ಸಾಧನೆಯಂತೂ ನಡೆಯುತ್ತಲೇ ಇತ್ತು- ಅಂತರಂಗದಲ್ಲಿ ಮತ್ತು ಬಹಿರಂಗದಲ್ಲಿ. ಮಂಜೀಖಾಂಸಾಹೇಬರು ನನ್ನನ್ನು ಬಿಟ್ಟು ಹೋಗಿದ್ದರಾದರೂ ಅವರ ಸಂಗೀತ ಮಾತ್ರ ನನ್ನನ್ನು ಬಿಟ್ಟಿದ್ದಿಲ್ಲ. ಅವರ ದನಿಯು ನದಿಯಾಗಿ ಹರಿಯುತ್ತಿತ್ತು ನನ್ನ ಅಂತರಾಳದಲ್ಲಿ. ಆ ದಿವ್ಯ ಸಂಗೀತದ ಚಿಂತನೆ ಅವಿರತವಾಗಿ ನಡೆಯುತ್ತಿತ್ತು ನನ್ನ ಮನಸ್ಸಿನಲ್ಲಿ ಹಾಗೂ ಕನಸಿನಲ್ಲಿ. ನನ್ನ ತಲೆಗೇರಿದ ಆ ಅಮಲು ಹದಿನೆರಡು ವರ್ಷ ಇಳಿದಿದ್ದಿಲ್ಲ.

ಮಂಜೀಖಾಂಸಾಹೇಬರ ತಾಲೀಮು ದೈವದುರ್ವಿಪಾಕದಿಂದ ಕೊನೆಗೊಂಡ ತರುವಾಯ ಇನ್ನೂ ಶೇಷವಾಗಿ ಉಳಿದ ಜಯಪುರ ಘರಾಣೆಯ ಗಾಯಕಿಯನ್ನು ಪೂರ್ತಿಯಾಗಿ ಗ್ರಹಿಸಬೇಕೆಂಬ ಹಂಬಲವು ತೀವ್ರವಾಗಿ ನಾನು ಮುಂಬಯಿಗೆ ಹೋದೆ. ಪೂಜ್ಯ ಪರಮಗುರು ಅಲ್ಲಾದಿಯಾಖಾಂ ಸಾಹೇಬರನ್ನು ಭೆಟ್ಟಿಯಾಗಿ- 'ಇನ್ನು ನನ್ನ ಮುಂದಿನ ಗತಿಯೇನು?' ಎಂದು ಕೇಳಿದಾಗ, 'ನನ್ನೀ ವೃದ್ಧಾವಸ್ಥೆಯಲ್ಲಿ ನಿನ್ನ ಜೊತೆ ನಾಲ್ಕೈದು ತಾಸು ಹಾಡಲು ನನಗೆ ಸಾಧ್ಯವಿಲ್ಲ. ನೀನೀಗ ನನ್ನ ಕಿರಿ ಮಗ ಬುರ್ಜಿಖಾಂ ಹತ್ತರ ಕಲಿ. ನಾನೂ ಅವನಿಗೆ ನಿನ್ನ ತಾಲೀಮಿನ ಬಗ್ಗೆ ಹೇಳುವೆ. ಏನೂ ಚಿಂತೆ ಮಾಡಬೇಡ' ಎಂದು ಆಶ್ವಾಸನವಿತ್ತರು.

ಮರುದಿನ ಮಧ್ಯಾಹ್ನ ನಾನು ಚೌಪಾಟಿಯ ಸನಿಯದಲ್ಲಿದ್ದ ಬುರ್ಜಿಖಾಂ ಸಾಹೇಬರ ಮನೆಗೆ ಹೋದಾಗ ಅವರು ಮೇನಕಾಬಾಯಿಯವರಿಗೆ ತಾಲೀಮು ಕೊಡುತ್ತಿದ್ದರು. ತಾಲೀಮು ಮುಗಿದ ಮೇಲೆ, ಅವರು ನನ್ನನ್ನು ಮಾತಾಡಿಸಿದರು. ನನ್ನ ಉತ್ಕಟೇಚ್ಛೆಯ ವಿಷಯವನ್ನು ತಿಳಿದುಕೊಂಡು, ನನಗೆ ಮೊದಲು ಹಾಡಲು ಹೇಳಿದರು. ನಾನು **ಗೌಡಸಾರಂಗ** ಹಾಡಹತ್ತಿದೆ. ಬುರ್ಜಿಖಾಂಸಾಹೇಬರು ಡಗ್ಗೆಯ ಮೇಲೆ ಠೇಕಾ ಬಾರಿಸುತ್ತ ನನ್ನ ಹಾಡನ್ನು ಕೇಳುತ್ತಿರುವಾಗ, ಅವರ ಕಣ್ಣುಗಳಿಂದ ದಳದಳನೆ ನೀರು ಹರಿಯತೊಡಗಿತು. ಅವರಿಗೆ ತಮ್ಮ ಅಣ್ಣ ಮಂಜೀಖಾಂಸಾಹೇಬರ ನೆನಪಾಗಿ ಅವರು ಅಳಹತ್ತಿದರು.

ಮರುದಿನವೇ ನನ್ನ ತಾಲೀಮು ಶುರುವಾಯಿತು. ಆದರೆ ಹಲವಾರು ಕಾರಣಗಳಿಂದಾಗಿ ತಾಲೀಮು ಸರಿಯಾಗಿ ನಡೆಯದೇ ಇದ್ದ ಕಾರಣ ನಾನು ಕಲಿಯಲು ಹೋಗುವುದನ್ನು ನಿಲ್ಲಿಸಿದೆ. ಮುಂದೆ ಎರಡು ವರ್ಷಗಳ ನಂತರ ಬುರ್ಜಿಖಾನಸಾಹೇಬರು ಮತ್ತು ದೊಡ್ಡ ಖಾನಸಾಹೇಬರು ಕೊಲ್ಹಾಪೂರದಲ್ಲಿ ಇರಹತ್ತಿದಾಗ ನಾನು ಅಲ್ಲಿ ಹೋಗಿ ಒಂದು ಸಣ್ಣ ಖೋಲಿ ತೆಗೆದುಕೊಂಡೆ. ಧಾರವಾಡದಲ್ಲಿ ಹೆಂಡತಿ ಮಕ್ಕಳನ್ನು ಬಿಟ್ಟು, ಖಾನಾವಳಿಯಲ್ಲಿ ಊಟ ಮಾಡಿ ಬುರ್ಜಿಖಾಂಸಾಹೇಬರಲ್ಲಿ ಕಲಿಯಹತ್ತಿದೆ.

ಗುರು ಬುರಜೀಖಾಂಸಾಹೇಬರಿಂದ ತಾಲೀಮು ಪಡೆಯುತ್ತಿರುವಾಗ ನನಗೆ ಬಂದ ಅನುಭವವನ್ನು ಕುರಿತು ಸಾಧ್ಯವಿದ್ದ ಮಟ್ಟಿಗೆ ಇಲ್ಲಿ ಬರೆಯಲು ಯತ್ನಿಸುತ್ತೇನೆ. ಏಕೆಂದರೆ ಸಾಂಗೀತಿಕ ಸೂಕ್ಷ್ಮ ವಿಚಾರಗಳನ್ನು ಶಬ್ದಗಳಲ್ಲಿ ವ್ಯಕ್ತಪಡಿಸುವುದು ಸುಲಭವಲ್ಲ. ಅವರು ಕಲಿಸುವ ಚೀಜುಗಳು ಬಿಗುವಾದ ಬಂದೀಷವಾಗಿದ್ದವು. ಅವುಗಳನ್ನು ತಾಲದ ಕಟ್ಟುನಿಟ್ಟಿನಲ್ಲಿ ಹಾಡಿ, ತಾಲದ ಆವರ್ತನದಲ್ಲಿಯೇ ಲಯದ ವಿವಿಧ ಗತಿಗಳಿಗೆ ಹೊಂದಿಸಿಕೊಂಡು ವಿಸ್ತಾರಪಡಿಸಿ ಸಮಕ್ಕೆ ಬರುವುದು ಅಷ್ಟೊಂದು ಸುಲಭವಿದ್ದಿಲ್ಲ. ಅದರಲ್ಲಿ ಜೋಲು ಬರಕೂಡದು. ಬೇಕಾದ ಮಾತ್ರೆಯಿಂದ ಎದ್ದು ಸಹಜ ಸೌಂದರ್ಯದಿಂದ ಶಬ್ದಗಳನ್ನು ಲಯದಲ್ಲಿ ಹೆಣೆದು ಅದೇ ಓಘದಲ್ಲಿ **ಮುಖಡೆ** ಯನ್ನು ಸೇರ್ಪಡಿಸಿ

ರುಜುವಾತು

ಸಮಕ್ಕೆ ಬರುವುದು ಕಂಬಿಯ ಮೇಲೆ ಸಾಮು ಮಾಡುವಷ್ಟೇ ಕಷ್ಟಕರವೆನಿಸಿತು. ಬುರ್ಜಿಖಾಂಸಾಹೇಬರು **ಉಪಜ** ಗಳನ್ನು ಸಹಜವಾಗಿ ಹಾಗೂ ವಿಪುಲವಾಗಿ ಸಾದಿಸುತ್ತಿದ್ದರೂ, ಇಂಥ ನಿರ್ಮಿತಿಯಲ್ಲಿ ನನಗೆ ತೊಡಕು ಬರುತ್ತಿತ್ತು. ಶಬ್ದಗಳ ಹೆಣಿಕೆ ಸರಿಯಾಗಿದ್ದರೆ **ಮುಖಡೆ** ಕೂಡಿಬರುತ್ತಿರಲಿಲ್ಲ, ಅದಕ್ಕಾಗಿ ತೇಪೆ ಹಾಕಬೇಕಾಗುತ್ತಿತ್ತು. ಯಾರೋ ಕಟ್ಟಿಟ್ಟ, ಪೂರ್ವಕಲ್ಪಿತ ಉಪಜಗಳು ನನಗೆ ಬೇಕಾಗಿದ್ದಿಲ್ಲ. ನಿರ್ಮಿತಿಯ ಸ್ವಾತಂತ್ರ್ಯ ಬೇಕಾಗಿತ್ತು.

ನಾನು ಕೊಲ್ಹಾಪುರದಲ್ಲಿ ಮೂರು ನಾಲ್ಕು ತಿಂಗಳು ಇದ್ದು ಬುರ್ಜಿಖಾಂಸಾಹೇಬರಲ್ಲಿ ಕಲಿತು ಧಾರವಾಡಕ್ಕೆ ಬರುತ್ತಿದ್ದೆ. ಒಂದು ತಿಂಗಳು ಧಾರವಾಡದಲ್ಲಿದ್ದು ಪುನಃ ಕೊಲ್ಹಾಪುರಕ್ಕೆ ಹೋಗಿ ಕಲಿಯುತ್ತಿದ್ದೆ. ಇದೇ ರೀತಿ ಎಷ್ಟೋ ವರ್ಷ ನಡೆದಿತ್ತು, ತಾಲೀಮು. ಖೋಕರ, ಬಸಂತಿ ಕಾನಡಾ, ಬಸಂತಿ ಕೇದಾರ, ಮಾಲವಿ, ಬಿಹಾರಿ, ಶುದ್ಧ ನಟ, ಮುಂತಾದ ಹಲವಾರು ರಾಗಗಳಲ್ಲಿ ಚೀಜುಗಳನ್ನು ನಾನು ಬುರ್ಜಿಖಾಂಸಾಹೇಬರ ಹತ್ತರ ಕಲಿತುಕೊಂಡೆ. ತಾಲದಲ್ಲಿಯ ಬಂದಿಶ ಮತ್ತು ಉಪಜ ಇವು ನನ್ನ ನಿರಂತರ ಚಿಂತನೆಯ ವಿಷಯವಾಗಿದ್ದವು. ಒಂದು ದಿನ ಧಾರವಾಡದ ಹಲಗೇರಿ ಕೆರೆಯ ಹತ್ತಿರ ಹಾದು ಹೋಗುವಾಗ ನಾನು ಎಂದಿನಂತೆ ಮೆಲ್ದನಿಯಲ್ಲಿ ಹಾಡುತ್ತಾ ನಡೆದಿದ್ದೆ. ತಾಲದ ಆವರ್ತನದಲ್ಲಿ ಹಾಡುತ್ತಿರುವಾಗ, **ಉಪಜ**ಗಳು ಲಯದ ವಿವಿಧ ಗತಿಗಳಲ್ಲಿ ರೂಪಗೊಂಡು, ಇಡೀ ಆವರ್ತನೆಯು ತುಂಬ ಸಹಜವಾಗಿ ಚಲಿಸುತ್ತ ಅದೇ ಓಟದಲ್ಲಿ ಮುಖಡೆಯಿಂದೊಡಗೂಡಿ ಆಕರ್ಷಕವಾದ ರೀತಿಯಲ್ಲಿ ಸಮ್ಮಿನಲ್ಲಿ ಕೊನೆಗೊಂಡವು. ನನಗಾದ ಆನಂದ ಹೇಳುವಂತಿಲ್ಲ. ಮರುಭೂಮಿಯಲ್ಲಿ ಸುಡುವ ಉಸುಬನ್ನು ತುಳಿದು ತುಳಿದು ಬಳಲಿಬಾಯಾರಿದವನಿಗೆ ಒಮ್ಮೆಲೆ ನೀರು ಕಂಡಷ್ಟು ಆನಂದವಾಯಿತು. ಒಂದೊಂದು ಕಾಸಿಗಾಗಿ ಚಡಪಡಿಸುವವನಿಗೆ ಬಂಗಾರದ ಗಣಿಯೇ ಸಿಕ್ಕಂತಾಯಿತು.

ಉಪಜ ನಿರ್ಮಿತಿಯ ಈ ದೃಷ್ಟಿಯನ್ನು ನನಗಿತ್ತ ಗುರುಗಳಾದ ಬುರ್ಜಿಖಾಂಸಾಹೇಬರಿಗೆ ನಾನು ಚಿರಋಣಿಯಾಗಿದ್ದೇನೆ. ಶಿಷ್ಯನ ಗುಣಾವಗುಣಗಳನ್ನು ತಿಳಿದು, ಅವನಿಗೆ ಏನು ಬೇಕಾಗಿದೆ ಎಂಬುದನ್ನರಿತು ಅದನ್ನೇ ನೀಡುವಾತ ನಿಜವಾದ ಗುರು. ಹೀಗೆಂದಾಗ ಮೊದಲಿನ ಗುರುಗಳು ನನಗೆ ಸರಿಯಾಗಿ ಹೇಳಿಕೊಡಲಿಲ್ಲವೆಂದಲ್ಲ. ನೀಲಕಂಠಬುವಾರು ನನ್ನ ಎಳೆ ವಯಸ್ಸಿನಲ್ಲಿಯೇ ಸ್ವರ, ರಾಗ, ತಾಲಗಳ ಜ್ಞಾನವನ್ನಿತ್ತು ಗ್ವಾಲೇರ ಘರಾಣೆಯ ವರಸೆಗಳನ್ನೆಲ್ಲ ಕೊಟ್ಟಿದ್ದರು. ಮಂಜೀಖಾಂಸಾಹೇಬರು ಸಂಗೀತಪ್ರಪಂಚದ ಅನಂತವಾದ ಆಕಾಶವನ್ನು ತೋರಿಸಿದ್ದರು. ಪರಿಶುದ್ಧವಾದ ಶ್ರುತಿಗಳೊಂದಿಗೆ ರಾಗವನ್ನು ವಿಸ್ತಾರವಾಗಿ ಬೆಳೆಸುವ ರೀತಿಯನ್ನು ಹೇಳಿದ್ದರು. ಕೇವಲ ಆಲಾಪದೊಂದಿಗೆ ರಾಗವನ್ನು ವಿಸ್ತರಿಸುವುದು ಹಾಗೂ ಇದರ ಜೊತೆಗೆ ರಾಗ ಹಾನಿಯಾಗದೆ ತಾನಿನಿಂದ ರಾಗವನ್ನು ವಿಸ್ತರಿಸುವುದು ಹೇಗೆಂಬುದನ್ನು ಹಾಡಿ ಮತ್ತು ನನ್ನಿಂದ ಹಾಡಿಸಿ ರೂಢಿಗೊಳಿಸಿದ್ದರು.

ಒಂದು ರಾಗ ಎರಡೆರಡು ತಾಸು ಹೇಗೆ ಬೆಳೆಯುತ್ತದೆ ಎಂದು ವಿವೇಚಿಸುವ ಸಂದರ್ಭದಲ್ಲಿ ಮಂಜೀಖಾಂಸಾಹೇಬರು ಹೇಳಿದ ಒಂದು ಮಾತು ನೆನಪಾಗುತ್ತದೆ. ತಾಲದ ಗತಿಯಲ್ಲಿ ರಾಗ ವಿಸ್ತಾರ ಹೊಂದುತ್ತದೆ. ಬೇರೆ ಬೇರೆ ಗತಿಗಳು ತಾಲದಲ್ಲಿ ಅಡಕವಾಗಿದ್ದ ಕಾರಣ ತಾಲಾಂಗ ಗಾಯಕಿಯಿಂದ ರಾಗ ಪ್ರಸ್ತಾರಕ್ಕೆ ಹೆಚ್ಚಿನ ಅವಕಾಶ ದೊರಕಿದಂತಾಗಿ, ಹೊಸ ಹೊಸ ಸಾಂಗೀತಿಕ ಸಂದರ್ಭಗಳು ಹುಟ್ಟುತ್ತಿದ್ದಂತೆ ರಾಗವು ಒಂದು ಅನಂತ ಕಲ್ಪನಾ ವಿಲಾಸವಾಗಿಬಿಡುತ್ತದೆ. ಪ್ರತಿ ಕ್ಷಣದ (ಮಾತ್ರೆಯ) ಗರ್ಭದಿಂದ ಹೊಸ ಹುಟ್ಟು ಸಂಭವಿಸುವುದರಿಂದ ರಾಗದ ಬೆಳವಣಿಗೆಯಲ್ಲಿ ಲಯತಾಲಗಳ

ಪ್ರಯೋಜನವನ್ನು ತಿಳಿದುಕೊಳ್ಳುವುದು ಮಹತ್ವದ್ದು. ಜಯಪುರ ಗಾಯಕಿಯಲ್ಲಿ ಲಯತಾಲಗಳ ವಿಶಿಷ್ಟ ಆವಿಷ್ಕಾರವು ಧ್ರುಪದದ ಸಂಸ್ಕಾರದ ಕುರುಹಾಗಿದೆ.

ನಾನು ಕೇಳಿದಾಗಲೆಲ್ಲ ಸ್ವಲ್ಪವೂ ಬೇಸರಪಡದೇ ಬುರ್ಜಿಖಾಂಸಾಹೇಬರು ನನಗೆ ಕಲಿಸುತ್ತಿದ್ದರು. ಅವರು ೧೯೫೦ರ ಮೇ ೩ರಂದು ತೀರಿಕೊಂಡಾಗ ನನ್ನ ಜೀವನದ ಇನ್ನೊಂದು ದೀಪಸ್ತಂಭ ಕಳಚಿಬಿದ್ದಂತಾಯಿತು. ನನ್ನ ಎಲ್ಲ ಗುರುಗಳೂ ಅಂದು ನನಗೆ ಪ್ರತ್ಯಕ್ಷವಾಗಿ ಕಲಿಸಿದ್ದರು. ಇಂದು ಪರೋಕ್ಷವಾಗಿ ಕಲಿಸುತ್ತಿದ್ದಾರೆ-ಪ್ರೇರಣೆಯ ರೂಪದಿಂದ, ರಸಾನಂದದ ರೂಪದಿಂದ, ಯಶಸ್ಸಿನ ರೂಪದಿಂದ -ಹೀಗೆ ಅನೇಕ ರೂಪಗಳಿಂದ ಬಂದು ಕಲಿಸುತ್ತಿದ್ದಾರೆ, ಹರಸುತ್ತಿದ್ದಾರೆ.



ಕರುಣಾಳು ಬೆಳಕು

ಈ ಮುಂಚೆ ಕರುಣಾಳು ಬೆಳಕಾಗಿ ಬಂದು ನನ್ನ ಕೈ ಹಿಡಿದು ನಡೆಸಿದ ಮಹಾಸ್ವಾಮಿಗಳೊಬ್ಬರ ಉಲ್ಲೇಖ ಮಾಡಿದ್ದೆನಲ್ಲವೆ,-ಅವರೇ ಮೃತ್ಯುಂಜಯ ಸ್ವಾಮಿಗಳು. ಒಮ್ಮೆ ಧಾರವಾಡದಲ್ಲಿ ಮುರುಘಾ ಮಠದಲ್ಲಿ ಶಿವಯೋಗಿಗಳ ಜಾತ್ರೆ ನಡೆದಾಗ ಗೊಡೆಕಟ್ಟ ಗುರಪ್ಪ ಎಂಬ ನಮ್ಮ ಪರಿಚಿತರೊಬ್ಬರು ನನಗೆ ಮಠದಲ್ಲಿ ಹಾಡಲು ಕೇಳಿಕೊಂಡರು. ನನಗೆ ಹಾಡುವ ಇಚ್ಛೆ ಇಲ್ಲದಿದ್ದರೂ ಗೊಡೆಕಟ್ಟರವರ ಬಲವಂತಕ್ಕೆ ಕಟ್ಟುಬಿದ್ದು ಉತ್ಸವದ ಸಮಯ ಹಾಡಬೇಕಾಯಿತು. ಅಂದು ಮಠದ ಮುಖ್ಯಸ್ಥಾಪಕರಾದ ಜ್ಯೋತಿಸ್ವರೂಪ ಮೃತ್ಯುಂಜಯ ಸ್ವಾಮಿಗಳ ದರ್ಶನವಾಯಿತು.

ಸ್ವಾಮಿಗಳ ಸಂಪರ್ಕ ಬೆಳೆದಂತೆ ನನ್ನ ಸ್ವಭಾವದಲ್ಲಿ ಗಡಸು, ಬಿರುಸು, ಕಹಿಯಾದದ್ದೆಲ್ಲ, ತನ್ನಿಂದ ತಾನೇ ಮಾಯವಾಗತೊಡಗಿತು. ನಾನು ಸ್ವಾಮಿಗಳಿಗೆ ಸಂಪೂರ್ಣ ಶರಣಾಗತನಾದೆ. ಗುರುವೆಂದರೆ ಒಂದು ದರ್ಪಣ. ಆ ದರ್ಪಣದಲ್ಲಿ ನನ್ನನ್ನೇ ನಾನು ನೋಡಿಕೊಂಡಾಗ ನನ್ನ ಲೋಪದೋಷಗಳೆಲ್ಲ ರುಜುವಾತು

ಸ್ಫುಟವಾಗಿ ಕಾಣತೊಡಗಿದವು. ನನ್ನ ನಡೆನುಡಿಗಳಲ್ಲಿ ಮೊದಲು ತಲೆಎತ್ತಿ ನಿಲ್ಲುತ್ತಿದ್ದ ಅಹಂಕಾರದ ಪರಿಚಯವೂ ಆಯಿತು. ಇದನ್ನೆಲ್ಲ ದರ್ಪಣದಲ್ಲಿ ಅಂತಃಚಕ್ಷುವಿನಿಂದ ನೋಡಿದಾಗ ನನ್ನ ಅವಗುಣಗಳೆಲ್ಲ ಒಂದೊಂದಾಗಿ ಉದರಹತ್ತಿದವು.

ಮೃತ್ಯುಂಜಯ ಸ್ವಾಮಿಗಳು ಒಳ್ಳೆ ರಸಜ್ಞರಾಗಿದ್ದರು. ಅವರು ಸ್ವತಃ ಶರಣರ ಪದ್ಯಗಳನ್ನು ಚೆನ್ನಾಗಿ ಹಾಡುತ್ತಿದ್ದು ನನಗೂ ಶರಣರ ವಚನಗಳನ್ನು ಆರಿಸಿಕೊಟ್ಟು, ಹಾಡಲಿಕ್ಕೆ ಅಪ್ಪಣೆ ಮಾಡುತ್ತಿದ್ದರು. ಈ ಮೊದಲು ನನಗೆ ವಚನ ಹಾಡಲಿಕ್ಕೆ ಪ್ರೇರಣೆಯಿತ್ತವರು ನನ್ನ ಆತ್ಮೀಯ ಸ್ನೇಹಿತರಾದ ಅ. ನ. ಕೃಷ್ಣರಾಯರು ಹಾಗೂ ಬಸವನಾಳ ಮಾಸ್ತರರು. ವಚನಗಳನ್ನು ಕಾವ್ಯವಾಚನದ ಪದ್ಧತಿಯಲ್ಲಿ ಹೇಳಬೇಕೇ ಅಥವಾ ತಾಲಕ್ಕೆ ಜೋಡಿಸಿ ಹಾಡಬೇಕೆ ಎಂಬ ವಾದವು ನಡೆಯುತ್ತಿದ್ದಾಗ ನಾನು, ಅವುಗಳ ಅರ್ಥ ಹಾನಿಯಾಗಗೊಡದೆ ರಾಗತಾಳಗಳಲ್ಲಿ ಹಾಡಲಾರಂಭಿಸಿದೆ.

ವಚನಗಳನ್ನು ಹಾಡುವ ಉಪಕ್ರಮ ನಡೆದಾಗ, ಹಿಂದಿನ ಶ್ರೇಷ್ಠ ವಚನಕಾರರ ರಚನೆಗಳನ್ನೋದಿ ಅವುಗಳ ಅರ್ಥವನ್ನು ಕೂಲಂಕಷವಾಗಿ ಅರಿತುಕೊಳ್ಳಬೇಕಾಯಿತು. ಏಕೆಂದರೆ ತಿಳಿಯದೇ ಹಾಡಿದ ಹಾಡು ಪ್ರಾಣ ಹೀನ ಹಾಗೂ ನೀರಸವಾಗಿ ಶ್ರೋತೃಗಳ ಮೇಲೆ ಪ್ರಭಾವವನ್ನು ಬೀರಲಾರದು. ತನ್ನನ್ನು ಕಲಕದೇ ಇದ್ದದ್ದು ಕಲೆಯಾಗಲಾರದು. ವಚನ ಸಾಹಿತ್ಯದ ವ್ಯಾಸಂಗ ನಡೆಯುತ್ತಿರುವಾಗ ನನ್ನ ಮನಸ್ಸಿನ ಮೇಲೆ ಉಂಟಾದ ಪ್ರಭಾವ ಮಾತಿಗೆ ನಿಲುಕುವಂತಹದಲ್ಲ.

ಅಲ್ಲಮ ಪ್ರಭುದೇವರ ಜ್ಞಾನದ ಪ್ರಖರವಾದ ಜ್ಯೋತಿಯಲ್ಲಿ ನನ್ನ ಕೊಳೆ ಕಲ್ಮಶಗಳು ಸುಡಹತ್ತಿದವು. ನಾನು ಪ್ರಭುದೇವರ **ಬಿಟ್ಟಕ್ಕೆ ಚಳಿಯಾದೊಡೆ ಏನು ಹೊದ್ದಿಸುವರಯ್ಯಾ,ಬಿರುಗಾಳಿ ಬೀಸಿ ಮರ ಮುರಿಯುವಂತೆ, ಸುಳುಹು ಸುಳಿಯದೆ ತಂಗಾಳಿ ಪರಿಮಳದೊಡಗೂಡಿ ಸುಳಿವಂತೆ , ಆಚಾರವನರಿಯದೆ, ವಿಭವಳಿಯದೆ, ಕೋಪವಡಗದೆ** ಮುಂತಾದ ವಚನಗಳನ್ನೋದಿ, ಮನನಮಾಡಿ, ನನ್ನೊಳಗೇ ಹಾಡಿಕೊಳ್ಳುತ್ತಿರುವಾಗ ನನ್ನ ಅಂತರಂಗವು ಭಾವಪುಲಕಿತವಾಗುತ್ತಿತ್ತು. ಬಸವಣ್ಣನವರ ಭಕ್ತಿ ಪರವಶತೆಗೆ ನಾನು ಮರುಳಾದೆ. ಅವರ ವಚನಗಳನ್ನು ನನ್ನ ಮನಸ್ಸಿನ ಒಳ ಪದರುಗಳಲ್ಲಿ ಹಾಸಿ, ಬೀಸಿ, ನನ್ನನ್ನು ಹಾಗೂ ನನ್ನದನ್ನೆಲ್ಲ ಮರೆತು ಎಷ್ಟೋ ಕಾಲ ಹಾಡಿದ್ದುಂಟು. **ಎನ್ನ ಕಾಯವ ದಂಡಿಗೆಯ ಮಾಡಯ್ಯಾ! ಎನ್ನ ಶಿರವ ಸೋರೆಯ ಮಾಡಯ್ಯಾ!ಎನ್ನ ನರವ ತಂತಿಯ ಮಾಡಯ್ಯಾ!ಎನ್ನ ಬೆರಳ ಕಡ್ಡಿಯ ಮಾಡಯ್ಯಾ!ಬತ್ತೀಸ ರಾಗವ ಹಾಡಯ್ಯಾ ! ಉರದಲೊತ್ತಿ ಬಾರಿಸು ಕೂಡಲಸಂಗಮದೇವಾ** ! ಇಂಥ ಆತ್ಮಸಮರ್ಪಣೆ, ಅಹಂಕಾರ ವಿಸರ್ಜನೆಯಿಲ್ಲದೆ ಉತ್ತಮವಾದ ಸಂಗೀತ ಹೊಮ್ಮುವುದು ಅಸಂಭವವೆಂದು ನನಗೆ ಮನದಟ್ಟಾಯಿತು.

ಬಸವಣ್ಣನವರ ಹಲವಾರು ವಚನಗಳನ್ನು ನಾನು ಹಾಡಿದೆ. **ವಚನದಲ್ಲಿ ನಾಮಾಮೃತ ತುಂಬಿ** ಈ ವಚನ ಭೀಮಪಲಾಸ ರಾಗದಲ್ಲಿ ತುಂಬಿ ಕೊಂಡಿತು. **ನೀನೊಲಿದರೆ ಕೊರಡು ಕೊನರುವದಯ್ಯಾ!** ಈ ವಚನವು ಇನ್ನೊಮ್ಮೆ**ಕಲ್ಯಾಣ**ದಲ್ಲಿ ಅರಳಿತು. **ಕಳಬೇಡ, ಕೊಲಬೇಡ** ಪಟದೀಪದಲ್ಲಿ ಬೆಳಗಿತು. **ಅಂದು ಇಂದು ಮತ್ತೊಂದೆನಬೇಡ** ಈ ವಚನ ದುರ್ಗಾ ರಾಗದಲ್ಲಿ ನಿನದಿಸಿತು. ಹಾಗೆಯೇ, ಅಕ್ಕಮಾಹಾದೇವಿಯವರ ಅಧ್ಯಾತ್ಮ ಶೃಂಗಾರಕ್ಕೆ ನಾನು ಸೋತುಹೋದೆ. **ಅಳಿಸಂಕುಳವೇ, ಮಾಮರವೇ,** ಬೆಳುದಿಂಗಳೇ, **ಕೋಗಿಲೆಯೇ,** ನಿಮ್ಮನಿಮ್ಮನೆಲ್ಲರನು ಒಂದು ಬೇಡುವೆನು. **ಎನ್ನೊಡೆಯ ಚೆನ್ನಮಲ್ಲಿಕಾರ್ಜುನದೇವರ ಕಂಡರೆ ಕರೆದು ತೋರಿರೆ ! ಸಾವಿಲ್ಲದ ಕೇಡಿಲ್ಲದ ಚಲುವಂಗಾನೊಲಿದೆ ಅವ್ವ** ಮುಂತಾದ ಅಕ್ಕಮಹಾದೇವಿಯರ ವಚನಗಳನ್ನು ಓದುವಾಗ, ಹಾಡುವಾಗ ನನ್ನ ಆತ್ಮವು ವೈರಾಗ್ಯದ ಸೋಪಾನದಿಂದ ಶ್ರೀಗಿರಿಯೆನ್ನೇರುತ್ತಿತ್ತು. **ಅಕ್ಕ ಕೇಳವ್ವಾ**

ರುಜುವಾತು

ನಾನೊಂದು ಕನಸು ಕಂಡೆ ಈ ವಚನವನ್ನು ಪಹಾಡಿಯಲ್ಲಿ ಎಷ್ಟೋಸಲ ಮೈಮರೆತು ನಾನು ಹಾಡಿದ್ದುಂಟು. ಸ್ವರಾಂಕಿತಗೊಳಿಸಿದ ವಚನಗಳನ್ನು ಮೃತ್ಯುಂಜಯಪ್ಪಗಳ ಮುಂದೆ ಮೊದಲು ನಿವೇದಿಸಿ ಅವರ ಒಪ್ಪಿಗೆಯನ್ನು ಪಡೆಯುತ್ತಿದ್ದೆ; ನಂತರ ಬೇರೆ ಕಡೆಗಳಲ್ಲಿ ಹಾಡುತ್ತಿದ್ದೆ.

ಸುಮಾರು ಮೂವತ್ತು ವರ್ಷಗಳ ಹಿಂದೊಮ್ಮೆ ಮೃತ್ಯುಂಜಯ ಅಪ್ಪಗಳನ್ನು ನನ್ನ ಸಣ್ಣದಾದ ಬಾಡಿಗೆಯ ಮನೆಗೆ ಕರೆದಾಗ ಅವರು ಬಂದು ಪಾದ ಪೂಜೆಯನ್ನು ಸ್ವೀಕರಿಸಿದರು.**ಮೋಳಿಗೆ ಮಾರಯ್ಯನವರ ಝೋಪಡಿ** ಎಂದು ಅವರು ನನ್ನ ಮನೆಯ ಬಗ್ಗೆ ಕೌತುಕದಿಂದ ಹೇಳಿದ್ದು ನೆನಪಿದೆ. ನಾನೊಮ್ಮೆ ಅವರ ಸನ್ನಿಧಿಯಲ್ಲಿ **ಈ ಬಂಧನದಿಂದ ನನಗೆ ಮುಕ್ತ ಮಾಡಿರಿ** ಎಂದು ಅರಿಕೆ ಮಾಡಿಕೊಂಡಾಗ, ಅವರು ನನಗೆ ಅಥಣಿಯ ಶಿವ ಯೋಗಿಗಳ ಸಾನ್ನಿಧ್ಯದಲ್ಲಿ ಒಯ್ಯುವೆನೆಂದು ಹೇಳಿದರು. ಆ ವರ್ಷ ಶಿವರಾತ್ರಿಯ ದಿನ ನನಗೆ ಅಥಣಿಗೆ ಕರೆದುಕೊಂಡು ಅಲ್ಲಿ ನನಗೆ ಸೇವೆ ಮಾಡಲಿಕ್ಕೆ ಹಚ್ಚಿದರು.

ಶಿವಯೋಗಿಗಳ ಸಮಾಧಿಯ ಹತ್ತಿರ ನಾನು ಮಲಗಿದ್ದಾಗ, ನನ್ನ ಕನಸಿನಲ್ಲಿ ಶಿವಯೋಗಿಗಳು ದರ್ಶನವಿತ್ತು ನನ್ನ ಬೇಡಿಕೆಯನ್ನು ಪೂರೈಸಿದರು. ಅಂದಿನಿಂದ ಮೃತ್ಯುಂಜಯಪ್ಪಗಳ ಹಾಗೂ ಶಿವಯೋಗಿಗಳ ಮೇಲೆ ನನ್ನ ಶ್ರದ್ಧೆ ಅಚಲವಾಯಿತು. ನನಗೆ ಮಾನಸಿಕ ವ್ಯಥೆಯಾದಾಗ ನಾನು ಮೃತ್ಯುಂಜಯ ಅಪ್ಪಗಳ ಹತ್ತಿರ ಹೋಗುತ್ತಿದ್ದೆ. ಅವರು ನನ್ನ ಅಸಮಾಧಾನದ ವಿಷಯವನ್ನೆಲ್ಲ ಕೇಳಿ **-ಏನೂ ಚಿಂತಿಸಬೇಡ. ಶಿವಯೋಗಿ ಕಾಯುತ್ತಾನೆ** ಎಂದು ಆಶೀರ್ವಾದ ಮಾಡುತ್ತಿದ್ದರು. ಇಷ್ಟಾದಾಗ ನನಗೆ ಮತ್ತೆ ಶಾಂತಿ ಸಿಗುತ್ತಿತ್ತು. ಅವರಿತ್ತ ಆಶ್ರಯದಲ್ಲಿ ನನ್ನ ಜೀವನ ಸಂಪನ್ನಗೊಂಡಿದೆ. ಅವರು ೧೯೭೪ರಲ್ಲಿ ಲಿಂಗೈಕ್ಯರಾಗುವ ತನಕವೂ ನನಗೆ ಅವರ ಸಹವಾಸದ ಸೌರಭವು ಪ್ರಾಪ್ತವಾಗಿತ್ತು. ಅವರ ಸ್ಮೃತಿಯಲ್ಲಿ ನಾನು ಕಟ್ಟಿಸಿದ **ಮೃತ್ಯುಂಜಯ**ದಲ್ಲಿ ನಾನಿನ್ನೂ ಅವರ ಸಾನ್ನಿಧ್ಯವನ್ನನುಭವಿಸುತ್ತೇನೆ.

ಮೃತ್ಯುಂಜಯ ಅಪ್ಪಗಳು ಸೂಚಿಸಿಹೋದಂತೆ ಪ್ರತಿ ಶಿವರಾತ್ರಿಗೆ ನಾನು ಅಥಣಿಗೆ ಹೋಗಿ ಸೇವೆ ಸಲ್ಲಿಸುತ್ತಾ ಬಂದಿದ್ದೇನೆ. ೧೯೭೭ರಲ್ಲಿ ಶಿವರಾತ್ರಿಯ ದಿನ ನಾನು ಕಾಯಿಲೆಯಾಗಿ ಹುಬ್ಬಳ್ಳಿಯಲ್ಲಿ ಆರ್. ಬಿ. ಪಾಟೀಲರ ದವಾಖಾನೆಯಲ್ಲಿ ಇರಬೇಕಾಗಿದ್ದ ಕಾರಣ ಅಂದು ಅಥಣಿಯ ಸೇವೆ ತಪ್ಪಿತು. ತಪ್ಪದ ಸೇವೆ ತಪ್ಪಿದ ತಪ್ಪಿಗಾಗಿ ನನಗೆ ಬಹಳ ದುಃಖವಾಯಿತು. ನಾನು ದವಾಖಾನೆಯಲ್ಲಿಯೇ ಶಿವಯೋಗಿಗಳ ಛಾಯಚಿತ್ರದೆದುರಿಗೆ ಐದು ವಚನಗಳನ್ನು ಹಾಡಿ ನನ್ನ ಸೇವೆಯನ್ನು ಅರ್ಪಿಸಿ ಸಮಾಧಾನಪಡಬೇಕಾಯಿತು.

ಮುರುಘಾಮಠದಲ್ಲಿ ನಾನು ಸಂಗೀತ ಸೇವೆಯನ್ನು ಮಾಡುತ್ತಿದ್ದಾಗ ಅಲ್ಲೊಮ್ಮೆ ಅರಭಾವಿ ಮಹಂತ ಶಿವಯೋಗಿಗಳು ವಿರಾಜಮಾನರಾಗಿದ್ದರು. ಅವರು ನನ್ನ ಸಂಗೀತವನ್ನು ಕೇಳಿ ಪ್ರಸನ್ನರಾಗಿ ನನ್ನನ್ನು ಹರಸಿದರು. ಮತ್ತು ಧಾರವಾಡದಿಂದ ೪೫ ಮೈಲು ಅಂತರದಲ್ಲಿರುವ ಮುರಗೋಡಕ್ಕೆ ಬರಲು ನನಗೆ ಅಪ್ಪಣೆ ಕೊಟ್ಟರು. ಪ್ರತಿವರ್ಷ ಶ್ರಾವಣಮಾಸದಲ್ಲಿ ನಾನು ಮುರಗೋಡಕ್ಕೆ ಹೋಗಿ ಈ ಮಹಾ ಸ್ವಾಮಿಗಳ ಸೇವೆಯನ್ನು ಮಾಡಹತ್ತಿದೆ. ನೂರು ವರ್ಷಗಳಿಗೂ ಮಿಕ್ಕಿದ ವಯಸ್ಸಾದರೂ ಸ್ವಾಮಿಗಳು ಸಣ್ಣ ಕೂಸಿನಂತೆ ಕಾಣುತ್ತಿದ್ದರು. ನಿರ್ಲಿಪ್ತವಾಗಿದ್ದು, ಎಲ್ಲರನ್ನೂ ತಮ್ಮ ನಿಸ್ಸೀಮವಾದ ಪ್ರೇಮದಿಂದ ಪುನೀತಗೊಳಿಸುವ ನಿರಾಡಂಭರದ ಕರುಣಾಮೂರ್ತಿ ಈ ಸ್ವಾಮಿಗಳು.

ನಾನು ಮುರಗೋಡಾ ಮಠಕ್ಕೆ ಸೇವೆಗೆ ಹೋದಾಗಲೆಲ್ಲ, ಎಲ್ಲರಿಗೂ ಪ್ರಸಾದ ಹಂಚಿದ ತರುವಾಯ ಬಾಗಿಲ ಹಾಕಿ ನನಗೆ ಉಪದೇಶ ಕೊಡುತ್ತಿದ್ದರು. ಸಮರ್ಪಣೆಯೇ ಪೂಜೆ ಎಂದು, ಸಮರ್ಪಣಭಾವದಿಂದಲೇ ವಾಸನಾಕ್ಷಯವಾಗಿ ಚಿತ್ತ ಶುದ್ಧಿಯಾಗುತ್ತೆಂದು ಅವರು ಸಾರಿ ರುಜುವಾತು

ಹೇಳುತ್ತಿದ್ದರು. ಅವರು ೧೯೭೨ರಲ್ಲಿ ಲಿಂಗೈಕ್ಯರಾದರು. ಅದಾದ ನಂತರ ಒಂದು ಸಲ ಕೆಲವೊಂದು ಅನಾನುಕೂಲತೆಗಳಿಂದಾಗಿ ಮುರಗೋಡಕ್ಕೆ ಹೋಗಲು ಆಗಲಿಲ್ಲ. ಆ ಸಲದ ಕೊನೆಯ ಶ್ರಾವಣ ಸೋಮವಾರ ಸಂದ ಮೇಲೆ, ಮರು ದಿನ ಬೆಳಗ್ಗೆ ನನ್ನ ಮಗಳು ಅಕ್ಕಮಹಾದೇವಿ ನನ್ನ ಹತ್ತಿರ ಬಂದು **ಅಪ್ಪಾ** ಎಂದು ಕರೆದಳು. ಅವಳ ನಿಲುವನ್ನು ನೋಡಿ ನನಗೆ ಆಶ್ಚರ್ಯವೇ ಆಯಿತು. 'ಏನಮ್ಮಾ, ಏನು ಮಾತು' ಅಂದೆ. "ಅಪ್ಪಾ, ನಿನ್ನೆ ರಾತ್ರಿ ನಾನು ಒಂದು ಕನಸು ಕಂಡೆ. ಕನಸಿನಲ್ಲಿ ನೀವು ಕೈಯಲ್ಲಿ ಲಿಂಗ ಹಿಡಿದು ಧ್ಯಾನ ಮಾಡುತ್ತಾ ಕುಳಿತಿದ್ರಿ. ಅಷ್ಟರೊಳಗ ಮುರಗೋಡದ ಮಹಂತ ಸ್ವಾಮಿಗಳು ಮೆಲ್ಲನೆ ನಿಮ್ಮ ಹತ್ತಿರ ಬಂದು, ಲಿಂಗದ ಮೇಲೆ ಒಂದು ಪತ್ರಿದಳ ಇಟ್ಟು 'ಯಾಕಪ್ಪಾ ಈ ಸಲ ಬರಲಿಲ್ಲ?' ಎಂದು ಕೇಳಿದರು" ಎಂದಳು.

ನನ್ನ ಮಗಳು ಹೇಳಿದ ಈ ಕನಸಿನ ಕಥೆ ಕೇಳಿ ನನ್ನ ಕಣ್ಣಿನಲ್ಲಿ ನೀರು ಚಿಮ್ಮಿದವು. ಇಂಥ ಮಹಾ ಸ್ವಾಮಿಗಳನ್ನು ನಾನಂತೂ ನನ್ನ ಹೃದಯ ಪೀಠದ ಮೇಲೆ ಕುಳ್ಳಿರಿಸಿ ಸದಾ ಗೌರವಿಸುತ್ತಲೇ ಬಂದಿದ್ದೇನೆ. ಆದರೆ ನಾನೊಂದು ಶ್ರಾವಣ ಸೋಮವಾರ ಸೇವೆ ಸಲ್ಲಿಸಲು ತಪ್ಪಿದಾಗ ಸ್ವಾಮಿಗಳೇ ನನ್ನನ್ನು ನೆನಸಿಕೊಂಡು ನನ್ನ ಮಗಳ ಕನಸಿನಲ್ಲಿ ಬಂದುದನ್ನು ಕೇಳಿದಾಗ ಶಿವನೇ ತನ್ನ ಸದ್ಭಕ್ತರನ್ನು ಅರಸಿಕೊಂಡು ಬಂದಷ್ಟು ನನಗೆ ಆನಂದ ಆಶ್ಚರ್ಯಗಳು ಉಂಟಾದವು.

ಸಿಂಡಿಕೇಟ್ ಬ್ಯಾಂಕ್

ಕರ್ನಾಟಕದ ಮಿಲಿಯಾಂತರ ಜನರ ಬೆಳವಣಿಗೆಯ ಜತೆಗಾರ

ತನ್ನೆಲ್ಲಾ ವಿನೂತನ ಜನಪರ ಯೋಜನೆಗಳ ಪ್ರಯೋಗಶಾಲೆಯಾದ ಕರ್ನಾಟಕದ ನೆಲದ ಮಕ್ಕಳಿಗೆ ಉಳಿತಾಯದ ಪ್ರಥಮ ಪಾಠ ಹೇಳಿದ ನಮ್ಮ ಬ್ಯಾಂಕು, ಯಾವುದೇ ಉದ್ಯಮದ ಅಭಿವೃದ್ಧಿಯನ್ನು ಸಹಕರಿಸದೇ ಉಳಿದಿಲ್ಲ. ತನ್ನ ಕಾರ್ಯಕ್ಷೇತ್ರದಲ್ಲಿರುವ ಸಮಾಜ ಹಿತವೇ ತನ್ನ ಹಿತವೆಂದು ನಂಬಿ ಬಂದ ಈ ಬ್ಯಾಂಕು " ಉಳ್ಳವರು -ಇಲ್ಲದವರು " ಎಂಬ ತಾರತಮ್ಯವಿಲ್ಲದೇ, ಬೇಸಾಯ, ಬೃಹತ್ ಕೈಗಾರಿಕೆ, ರಫ್ತು ಕ್ಷೇತ್ರ, ಸಣ್ಣ ಉದ್ದಿಮೆ, ಗುಡಿಕೈಗಾರಿಕೆ, ಸೇವಾ ಕ್ಷೇತ್ರ, ಸ್ವಉದ್ಯೋಗ ಮುಂತಾದ ಹತ್ತು ಹಲವು ಕ್ಷೇತ್ರಗಳ ಕ್ರಾಂತಿಕಾರೀ ಮಾರ್ಪಾಡಿಗೆ ಸಹಕಾರಿ ಆಗಿದೆ, ಮಾತ್ರವಲ್ಲದೇ ಅನಿವಾಸಿ ಭಾರತೀಯರಿಗೆ ಹತ್ತು ಹಲವು ವಿಧದ ನೆರವನ್ನು ನೀಡುತ್ತಿದೆ.

ಎಲ್ಲ ವರ್ಗದ ಜನರ ಪ್ರತಿಯೊಂದು ಬ್ಯಾಂಕಿಂಗ್ ಅವಶ್ಯಕತೆಯನ್ನು ಪೂರೈಸಲು ಶ್ರಮಿಸುತ್ತಾ ಪ್ರತಿಯೊಬ್ಬ ಪ್ರಜೆಯೂ "ನನ್ನ ಬ್ಯಾಂಕು" ಎಂದು ಆತ್ಮೀಯವಾಗಿ ಕರೆಯುವಂತಾಗಿದೆ. ಕ್ಷಣ ಕ್ಷಣಕ್ಕೂ ಬದಲಾಗುತ್ತಿರುವ ಅರ್ಥವ್ಯವಸ್ಥೆಯ ಬಗ್ಗೆ ಸಮರ್ಪಕ ಹಿಡಿತ ಸಾಧಿಸುವ ಈ ಬ್ಯಾಂಕು, ಗ್ರಾಹಕರ ಬೆಳೆಯುತ್ತಿರುವ ನಿರೀಕ್ಷೆಗೆ ಸರಿಯಾಗಿ ತನ್ನೆಲ್ಲ ವ್ಯವಹಾರಗಳನ್ನೂ ನಿತ್ಯನೂತನಗೊಳಿಸುತ್ತಾ " ಜನಮನದ ಗರ್ಭಗುಡಿಯಲ್ಲಿ ನೆಲೆನಿಂತ ನಮಗೆ ಸೇವೆಯೇ ಆರಾಧನೆ " ಎಂಬ ಪರಂಪರೆಯನ್ನು ನೆಚ್ಚಿಕೊಂಡಿದೆ.

ರಾಷ್ಟ್ರದ ಆರ್ಥಿಕ ರಂಗದಲ್ಲಿ ತನ್ನದೆ ಆದ ವೈಶಿಷ್ಟ್ಯದೊಂದಿಗೆ ಎದ್ದುನಿಂತಿರುವ ಬ್ಯಾಂಕ್ ೧೯೯೪ ಮಾರ್ಚ್ ಅಂತ್ಯದ ವೇಳೆಗೆ ೧೦,೦೦೦ ಕೋಟಿ ರೂಪಾಯಿ ಠೇವಣಿ ಸಂಗ್ರಹದ ಗುರಿ ಇಟ್ಟುಕೊಂಡಿದೆ.

ಅನಂತ ಜೀವನವು, ಅನಂತ ಸಂಗೀತವು.

ಅಶೋಕ್ ವಾಜಪೇಯಿ.

ಅನು : ಅಜಯ ಕುಮಾರ್ ಸಿಂಗ್

ಮನ್ಸೂರರಿಗೆ ಕಾಳೀದಾಸನ ಸನ್ಮಾನ ನೀಡಿ ಗೌರವಿಸಿತು ಮಧ್ಯ ಪ್ರದೇಶ ಸರ್ಕಾರ. ಮಧ್ಯ ಪ್ರದೇಶದ ಕವಿ ಅಶೋಕ್ ವಾಜಪೇಯಿ ಮನ್ಸೂರರ ಅಭಿಮಾನಿ. ಆತ ಆಗ, ಭಾರತ ಭವನದ ರೂವಾರಿಯೂ ಆಗಿದ್ದರು. ಅವರು ಮನ್ಸೂರರ ಬಗ್ಗೆ ಬರೆದ ಹಿಂದಿ ಲೇಖನವೊಂದರ ಅನುವಾದವನ್ನ ಇಲ್ಲಿ ಪ್ರಕಟಿಸುತ್ತಿದ್ದೇವೆ. ಮತ್ತೊಬ್ಬ ಹಿಂದಿ ಕವಿ ಹಾಗೂ ಕರ್ನಾಟಕದಲ್ಲಿ ಹಾಲಿ ಪೋಲೀಸ್ ಅಧಿಕಾರಿಯಾಗಿರುವ ಅಜಯ್ ಕಮಾರ್ ಸಿಂಗ್ ಹಿಂದಿ ಲೇಖನದ ಕನ್ನಡ ಅನುವಾದ ಮಾಡಿದ್ದಾರೆ.

ಶುದ್ದ ಪರಂಪರೆಯ ಮಲ್ಲಿಕಾರ್ಜುನ ಮನ್ಸೂರರ ಬಗ್ಗೆ ಅಂತರ್ ವಿರೋಧದ ಮಾತನ್ನಾಡಿ ಈ ಲೇಖನ ಆರಂಭಿಸುತ್ತಿದ್ದೇನೆ. ಸಂಗೀತ ಬಿಟ್ಟರೆ ಮತ್ತಾವುದೇ ಚಿಂತೆಯೂ ಮನ್ಸೂರರಿಗಿದ್ದಿಲ್ಲ ಎನ್ನುವ ಅಭಿಪ್ರಾಯವೊಂದು ಚಾಲತಿಯಲ್ಲಿದೆ. ಖ್ಯಾತ ಮರಾಠಿ ರಂಗಕರ್ಮಿ **ಪು. ಲ ದೇಶಪಾಂಡೆ**ಯವರು ಈ ಬಗ್ಗೆ ವಿಫುಲವಾಗಿ ಬರೆದಿದ್ದಾರೆ. ಮನ್ಸೂರರು ಊರುಗಳಲ್ಲಿ, ಗಲ್ಲಿ, ವಠಾರ, ಮನೆಗಳಲ್ಲಿ ಬದುಕುವುದಕ್ಕಿಂತ ಮಿಗಿಲಾಗಿ, ಸಂಗೀತದ ಗುಂಗಿನಲ್ಲಿ ಬದುಕಿಬಿಟ್ಟರು ಎನ್ನುತ್ತಾರೆ ದೇಶಪಾಂಡೆಯವರು. ಮನ್ಸೂರರ ಬದುಕೆಲ್ಲವೂ ಸಂಗೀತವೆ ಎನ್ನುವ ಈ ಮಾತು ವಿವರಣೆ ಬೇಡುತ್ತದೆ.

ಮನ್ಸೂರರಿಗೂ ಕಷ್ಟಗಳು ಬರುತ್ತಿದ್ದವು, ಕೊಂಚ ಹೆಚ್ಚಾಗಿಯೇ ಬಂದಿದ್ದವು. ಆದರೆ ಅವರ ಸಂಗೀತವನ್ನದು ತಾಕುತ್ತಿರಲಿಲ್ಲ. ತನ್ನ ಸುತ್ತ ಶಾಸ್ತ್ರೀಯತೆಯ ಅಬೇಧ್ಯ ಕೋಟೆಯೊಂದನ್ನ ನಿರ್ಮಿಸಿಕೊಂಡು, ಆತ ಮುಕ್ತರಾಗಿದ್ದಿರಬಹುದು. ಅಥವಾ ಕೊಟಳೆಗಳು ಸಂಚಾರೀಭಾವದಂತೆ ಸಂಗೀತದ ನಡು ನಡುವೆ ಸುಳಿದು ತನ್ಮಯತೆಗೆ ಧಕ್ಕೆ ತರದಂತೆ ಮುಂಜಾಗರೂಕತೆ ವಹಿಸಿದ್ದಿರಬಹುದು. ಒಮ್ಮೆ ಅವರು ಭೂಪಾಲಿಗೆ ಹಾಡಲು ಬಂದಿದ್ದರು. ಸಾಂಸಾರಿಕವಾದ ಕ್ಷೋಭೆಯಲ್ಲಿ ಸಿಕ್ಕು ನರಳುತ್ತಿದ್ದರು. ಅಂದು ಇಡೀದಿನ, ಸಂಗೀತ ಕಛೇರಿಗೆ ಬರೆ ಅರ್ಧಗಂಟೆ ಇದೆ ಎನ್ನುವವರೆಗೂ, ಅಪ್ಪರೊಟ್ಟಿಗೆ ಕೂತು ಗೋಳುಕರೆ ಹಂಚಿಕೊಂಡಿದ್ದರು. ಸಂಗೀತ ಕಛೇರಿ ಹೇಗಾದೀತಪ್ಪ ಎಂದು ಆತಂಕಗೊಂಡಿದ್ದೆ ನಾನು. ಮನ್ಸೂರರು ಹಾಡಲಿಕ್ಕೆ ಬಂದು ಕುಳಿತಾಗ ಮಾತ್ರ, ಎಲ್ಲ ಅನುಮಾನಗಳು, ಎಲ್ಲ ದ್ವಂದ್ವಗಳೂ ಮರೆಯಾಗಿ, ಆತನ ಭಾವ ಪ್ರಪಂಚ ಮತ್ತೊಮ್ಮೆ ಪ್ರಸನ್ನವಾಗಿಬಿಟ್ಟಿತು. ಅಂದು ಸಂಜೆ, ಒಂದೂವರೆಗಂಟೆ ಅದ್ಭುತವಾಗಿ, ಶಾಸ್ತ್ರೋಕ್ತವಾಗಿ, ಹಾಡಿ ನಮಗೂ ದಿವ್ಯ ಪ್ರಸನ್ನತೆಯನ್ನ ಹಂಚಿದ್ದರು ಮನ್ಸೂರರು. ಶಾಸ್ತ್ರೀಯತೆಯ ಕಠೋರ ಸಾಧನೆ ಎಂದು

ನಾನು ಕರೆದದ್ದು ಇದನ್ನೇ. ಜಗತ್ತು ಮನ್ಸೂರರನ್ನು **ಅಭಿಜಾತ ವ್ಯಕ್ತಿತ್ವ** ಎಂದು ಗುರುತಿಸುವುದೂ ಇದೇ ಕಾರಣಕ್ಕಾಗಿ; ಇಲ್ಲಿದ್ದೂ ಇಲ್ಲಿ ಇರದೆ ಹೋಗಬಲ್ಲ ಆತನ ಗುಣಕ್ಕಾಗಿ.

ಹಾಗೆಂದು ಮನ್ಸೂರರ ಸಂಗೀತಕ್ಕೆ ವೈಯಕ್ತಿಕತೆಯ ಛಾಪಿಲ್ಲವೆಂದಲ್ಲ. ಅವರದ್ದು ಅದೆಂಥ ಸಾಧನೆಯೆಂದರೆ, ಸಂಗೀತವನ್ನ ಎಲ್ಲಕ್ಕಿಂತ ಹಿರಿದಾದದ್ದು ಎಂದು ತಿಳಿದು, ಅದರ ಅಳತೆಗೆ ತನ್ನ ಬಡಕಲು ಖಾಸಗೀತನವನ್ನ ಬಗ್ಗಿಸಿ, ಬದಲಿಸಿ ಬಿಟ್ಟಿದ್ದರು ಮನ್ಸೂರರು. ಕಥ್ಯ ಹಾಗೂ ಶಿಲ್ಪ, ಅನುಭವ ಹಾಗೂ ಮಾಧ್ಯಮಗಳ ನಡುವಿನ ದ್ವಂದ್ವ ಮನ್ಸೂರರಿಗೆ ದ್ವಂದ್ವವೇ ಅಲ್ಲ. ಹಾಗಾಗಿ ಮನ್ಸೂರರ ಸಂಗೀತ ರಾಗವನ್ನ ನುಡಿಸುತ್ತದೆ ಎನ್ನುವ ಬದಲಾಗಿ ಮನ್ಸೂರರನ್ನೇ ನುಡಿಸುತ್ತದೇ ಎನ್ನುವುದು ಮೇಲು. ಹಾಗನ್ನುವುದು ಮನ್ಸೂರರ ಮಟ್ಟಿಗೆ ಬೊಗಳೆ ರೂಪಕ ಮಾತ್ರವಲ್ಲ. ಶಾಸ್ತ್ರೀಯ ಸಂಗೀತದಲ್ಲಿ ತನ್ನನ್ನು ತಾನೇ ನುಡಿಸಲು ಸಾಧ್ಯವಾಗುವುದು ಅತೀವ ಯಾತನೆಯ, ತುದಿಯ ಮಜಲು. ಏಕೆಂದರೆ ಶಾಸ್ತ್ರೀಯ ಸಂಗೀತದಲ್ಲಿ ಎಲ್ಲಕ್ಕೂ ನಿಯಮಗಳಿವೆ, ಎಲ್ಲಕ್ಕೂ ನೀತಿಗಳಿವೆ. ಯಾವುದನ್ನೂ ಮುರಿಯಲಾಗದು, ಯಾವುದನ್ನೂ ಮೀರಲಾಗದು. ಆದರೆ ಮನ್ಸೂರರಲ್ಲಿ ಕಠಿಣತಮ ಕ್ಷಮತೆಯಿತ್ತು, ಆತ್ಮರತಿ ಇರಲಿಲ್ಲ ; ಗಟ್ಟಿ ವ್ಯಕ್ತಿತ್ವವಿತ್ತು, ಅಹಂಕಾರವಿರಲಿಲ್ಲ; ಧೃಡತೆಯೂ ಇತ್ತು ವಿನಯವೂ ಇತ್ತು. ಹಾಗಾಗಿ ಅವರು ಶಾಸ್ತ್ರೀಯತೆಯ ನಿಯಮಗಳನ್ನ ಮುರಿಯದೆಯೇ ಮೀರುವಲ್ಲಿ ಸಫಲರಾದರು.

ಇಪ್ಪತ್ತನೆಯ ಶತಮಾನ ಅಧೀರರ ಯುಗ, ಪೈಪೋಟಿಯ ಯುಗ. ಇಂಥ ಕಾಲಘಟ್ಟದಲ್ಲಿ ಮನ್ಸೂರರ ಗಾಯನ ಅನಂತವೂ ಅವಿನಾಶವೂ ಆಗಿ ಕಾಣುತ್ತದೆ. ಕೂತು ಕೇಳುವ ನಮಗೂ ಅರೆಕ್ಷಣ ಅನಂತದಲ್ಲಿ, ಅವಿನಾಶದಲ್ಲಿ, ಪ್ರವೇಶ ದೊರಕಿಸಿಕೊಡುತಪ್ರ. ಹಾಗಾಗಿಯೇ ಮನ್ಸೂರರು ನಮ್ಮನ್ನು ಅಭಾರಿಗಳನ್ನಾಗಿ ಮಾಡಿಬಿಡುತ್ತಾರೆ.

ಮನ್ಸೂರರು ಈ ಶತಮಾನದ ಅಧಿಕಾಂಶವನ್ನ ಕಂಡು, ಅನುಭವಿಸಿ, ಹಾಡಿರುವವರು. ತಮ್ಮ ಜೀವಿತದ ಕಾಲವನ್ನ ಕೊಂಡಾಡಿದ್ದಾರೆಯೇ ಮನ್ಸೂರರು ?ಎಂಥ ಕಾಲವದು ? ನವೋದಯದ ಕಾಲ, ನಂತರದ ಸ್ವಾತಂತ್ರ ಹೋರಾಟ, ಅನಂತರದ ಗಾಂಧೀಜಿ ಹತ್ಯೆ, ಪ್ರಜಾತಂತ್ರ, ನೆಹರೂ ಯುಗ, ಇಂದಿರಾ ಗಾಂಧಿ.... ಇತ್ಯಾದಿಗಳವರೆಗೆ ? ಮನ್ಸೂರರನ್ನೇ ಕೇಳಿದ್ದರೆ, ನನ್ನ ಕೆಲಸ ಹಾಡುವುದಷ್ಟೆ, ಕಾಲ ಅಳೆಯುವುದಲ್ಲ ಅಂದು ಬಿಡುತ್ತಿದ್ದರೋ ಏನೋ. ಮನ್ಸೂರರ ಸಂಗೀತದಲ್ಲಿ ಸಮಕಾಲೀನದ ಸ್ವರ -ಅಪಸ್ವರ ಇಣುಕುವುದಿಲ್ಲ. ಕಾಲದೊಟ್ಟಿಗೆ ಬದುಕಿಯೂ ಕಾಲಾತೀತರು ಮನ್ಸೂರರು.

ಒಮ್ಮೆ ಯಾರೋ ಅವರನ್ನ ಶ್ರೋತೃಗಳ ಬಗ್ಗೆ ಕೇಳಿದ್ದರು. ಶ್ರೋತೃಗಳು ಸಹೃದಯರು ಇರಬೇಕೆ?ತಾಳ ತಿಳಿದು ತೊಡೆ ತಟ್ಟುತ್ತಿರಬೇಕೆ ?ತಲೆ ತೂಗುತ್ತಿರಬೇಕೆ ?ಸಂಗೀತಕ್ಕೆ ಕಳೆ ಕಟ್ಟಬೇಕಾದರೆ ಶ್ರೋತೃಗಳು ಹೇಗಿರಬೇಕು, ಎಂದೆಲ್ಲಾ ಪ್ರಶ್ನೆ ಮಾಡಿದ್ದರು. 'ಹಾಡುವುದು ನನ್ನ ಕಾಯಕ, ಹಾಡುತ್ತೇನೆ. ಕೇಳುವುದು ಅವರ ಧರ್ಮ ಕೇಳುತ್ತಾರೆ . ಮಿಕ್ಕ ಯಾವುದೂ ಮಹತ್ವದಲ್ಲ 'ಅಂದಿದ್ದರು ಮನ್ಸೂರರು. ಮುಂದುವರಿದು ತನ್ನ ಬಗ್ಗೆಯೇ ಹಾಸ್ಯ ಮಾಡಿಕೊಂಡು ನಕ್ಕಿದ್ದರು, 'ಹಿಂದೆಲ್ಲಾ ನನ್ನ ಹೆಸರು ಹಾಕಿ ಚೀಟಿ ಹಂಚಿದ್ದರೆ ಸಾಮಾನ್ಯವಾಗಿ ಬರುವ ಜನವೂ ಬರುತ್ತಿದ್ದಿಲ್ಲ. ಖಾಲಿ ಸಭೆಗಳಿಗೆ ಹಾಡಿ ನನಗೆ ಅಭ್ಯಾಸವಿದೆ 'ಎಂದು ಬಿಟ್ಟರು. ಮನ್ಸೂರರು ಹಾಸ್ಯಕ್ಕೆ ಈ ಮಾತನ್ನ ಹೇಳಿದ್ದರೂ, ಅದು ಅವರ ಪಾಲಿಗೆ ಅಕ್ಷರಶಃ ಸತ್ಯ. ಮನ್ಸೂರರ ಸಂಗೀತ ಆತ್ಮದೊಟ್ಟಿಗಿನ ಸಲ್ಲಾಪ. ಅಲ್ಲಿ ಪ್ರೇಕ್ಷಕರಿದ್ದರೂ ಅವರ ಅರಿವು ಅಹಂಕಾರವಾಗಿ ಪರಿಣಮಿಸುವುದಿಲ್ಲ.

ಮನ್ಸೂರರು, ತನ್ನ ಅರ್ಧಶತಮಾನಗಳಿಗೂ ಮಿಗಿಲಾದ ಸಂಗೀತ ಜೀವನದಲ್ಲಿ, ಯಾವುದೇ ಮುಲಾಜಿಗೂ ಬೀಳದೆ, ಯಾರೊಟ್ಟಿಗೆಯೂ ರಾಜಿಯಾಗದೆ ಬದುಕಿದರು; ರುಚಿಗಳು ಬದಲಾದವು, ಜನಗಳು ಬದಲಾದವು, ಧ್ವನಿ ಮುದ್ರಣ ಬಂತು, ಅದರೊಟ್ಟಿಗೆ ಜನಪ್ರಿಯತೆಯೂ ಬಂತು. ಮನ್ಸೂರರು ಮಾತ್ರ ಹೊಸ ರುಚಿಗೆ ಬಾಯಿಬಿಡದೆ ಅಚಲರಾಗಿ ನಿಂತರು. ಹಾಗಾಗಿಯೇ ಮನ್ಸೂರರ ಸಂಗೀತ ಕಾಲಾತೀತವಾಗಿ ಕಾಣುವುದು; ಸಮಕಾಲೀನವಲ್ಲದ ಹಲವು ಯುಗಗಳ ದರ್ಶನ ನಮಗಾಗುವುದು.

ಹಿಂದೆಲ್ಲಾ ದೀಪಿಕಾರಾಗ ಹಾಡಿ ದೀಪ ಹೊತ್ತಿಸುತ್ತಿದ್ದರಂತೆ, ಅಹುದೆ ?ಎಂದು ಒಮ್ಮೆ ಯಾರೋ ಮನ್ಸೂರರನ್ನ ಕೇಳಿದ್ದರು. 'ಒಳ್ಳೆಯ ಕಲ್ಪನೆ, ನನ್ನ ಅನುಭವಕ್ಕಂತೂ ಬಂದಿಲ್ಲ'ಅಂದಿದ್ದರು ಮನ್ಸೂರರು. ಅತಿ ಅಪರೂಪದ ರಾಗಗಳನ್ನ ಸರಾಗವಾಗಿ ಹಾಡಿ ಬಿಡುವುದು ಎಷ್ಟು ಸಹಜವೋ ಅಷ್ಟೇ ಸಹಜವಾಗಿತ್ತು ಮನ್ಸೂರರ ಈ ಸರಳತನ. ಮಿಕ್ಕ ಅನೇಕ ಸಂಗೀತಗಾರರಂತೆ ಬಾಹ್ಯಾಡಂಬರ ಮಾಡದೆ, ತನ್ನ ಪಾಡಿಗೆ ಸಂಗೀತ ಹಾಡಿ, ಅಷ್ಟೆ ಸಹಜವಾಗಿ ಪಕ್ಕಕೆ ಸರಿದು ಕೂತು ಬೀಡಿ ಸೇದುತ್ತಿದ್ದ ಮನ್ಸೂರರಿಗೆ ಕಡೆಯವರೆಗೂ, ಧಾರವಾಡದ ಅಕ್ಕಪಕ್ಕದ ಅಮಾಯಕ ರೈತನ ರೂಪ ಉಳಿದು ಬಂದಿತ್ತು. ಖಾಸಗಿ ಸಂಭಾಷಣೆಗಳಲ್ಲಿ ಕೂಡಾ ಮನ್ಸೂರರು, ತಪ್ಪಿಯೂ ಮತ್ತೊಬ್ಬ ಸಂಗೀತಗಾರನ ಬಗ್ಗೆ ಕೆಟ್ಟ ಮಾತು ಆಡಿದ್ದಿಲ್ಲ. ಮನ್ಸೂರರಿಗೆ ತನ್ನ ಕಾಲದ ಬಗ್ಗೆ ಯಾವ ದೂರೂ ಇದ್ದದ್ದಿಲ್ಲ.

ಆದರೂ ಆತನ ಜ್ಞಾನ ಅಪಾರವಾದದ್ದು. ಅಪರೂಪದ ರಾಗಗಳು, ಬಂದೀಷುಗಳು ಮನ್ಸೂರರಲ್ಲಿ ಮಾತ್ರ ಲಭ್ಯವಿದ್ದವು. ನನ್ನಂತಹ ಅನೇಕರು ಪ್ರಾಯಶಃ ಮೊದಲ ಬಾರಿಗೆ, ಅದು ಕಡೆಯ ಬಾರಿಯೂ ಹೌದು, ಅಪರೂಪದ ರಾಗಗಳನ್ನ ಅವರ ಬಾಯಲ್ಲಿ ಕೇಳಿ ಆನಂದಿಸಿದೆವು. ಮನ್ಸೂರರು ಪರಿಪೂರ್ಣತೆಯನ್ನು ಹುಡುಕಿಕೊಂಡು ಹೋಗಲಿಲ್ಲ. ಅದೇ ಆತನ ಬಾಗಿಲಿಗೆ ಬಂದು ನಿಂತಿತ್ತು.

ಮುಂದೆ ಎಂದಾದರೂ ಈ ಶತಮಾನದ ಸೃಜನಾತ್ಮಕತೆಯನ್ನ ಅಳೆಯ ಹೊರಟರೆ, ಅಲ್ಲಿ ಮನ್ಸೂರರು ನಗುವ ಸೂರ್ಯನಂತೆ ಮೇಲೆದ್ದು ಬರುತ್ತಾರೆ. ಭಾರತೀಯ ಪರಂಪರೆಯ ಗಟ್ಟಿತನಕ್ಕೆ ವ್ಯಕ್ತಿಗತ ದಾಖಲೆ ಬೇಕೆಂದಾದರೆ ಮನ್ಸೂರರನ್ನೇ ನೆನೆಯಬೇಕಾಗುತ್ತದೆ ನಾವು.

ರುಜುವಾತು

○ ಚಂದಾ ನವೀಕರಿಸಿ.

○ ವಿಳಾಸ ಬದಲಾದಾಗ, ನಮಗೆ ತಿಳಿಸಿ

ನಾಟಕಕಾರ ಗಿರೀಶ್ ಕಾರ್ನಾಡರು



ಒಂದು ಸಾಹಿತ್ಯ ಚರ್ಚೆ

ಕನ್ನಡದಲ್ಲಿ ಗಿರೀಶರಿಗೆ ಸಿಕ್ಕಷ್ಟು ಪುರಸ್ಕಾರಗಳು, ಖ್ಯಾತಿ, ಮತ್ತಾರಿಗೂ ಸಿಕ್ಕಿಲ್ಲ. ಹಾಗೆಂದು ಗಿರೀಶರ ಸಾಹಿತ್ಯ ಚರ್ಚಿತವಾಗಿರುವುದು ತೀರ ಕಡಿಮೆ. ಕೆಲವರಿಗೆ ತಮ್ಮ ಬಹುಮುಖ ವ್ಯಕ್ತಿತ್ವವೇ ತೊಡಕಾಗಿ ಬಿಡುತ್ತದೆ ಎಂದು ಕಾಣುತ್ತದೆ. ಗಿರೀಶರ ಮಟ್ಟಿಗೆ ಹೇಳುವುದಾದರೆ ಅವರ ಮುಖವೇ ಅವರಿಗೆ ತೊಡಕಾಗಿಬಿಟ್ಟಿದೆ. ಮೊನ್ನೆ ಸಾಹಿತ್ಯ ಸಮಾರಂಭವೊಂದರಲ್ಲಿ ಅವರೊಟ್ಟಿಗೆ ಕೂರಬೇಕಾದ ಪ್ರಮೇಯ ಬಂತು. ಅಭಿಮಾನಿಗಳು, ಕಿಕ್ಕಿರಿದು ನೆರೆದಿದ್ದರು. ಟರ್ನಿಂಗ್ ಪಾಯಿಂಟ್‌ನ ನಾಯಕನನ್ನ ಕಾಣಲೆಂದು ಕತ್ತು ಉದ್ದ ಮಾಡುತ್ತಿದ್ದರು. ಗೋಷ್ಠಿಯ ನಿರ್ವಾಹಕರೂ ಕೂಡಾ ಟರ್ನಿಂಗ್ ಪಾಯಿಂಟನ್ನೇ ವಿಶೇಷಣವಾಗಿ, ಉಪಮೆಯಾಗಿ, ಜೋಕಾಗಿ ಬಳಸಿ ಬಳಸಿ ಗಿರೀಶರ ಪರಿಚಯ ಮಾಡಿಕೊಟ್ಟರು. ಗಿರೀಶರು ಭಾರತೀಯ ಭಾಷೆಗಳ ಬಹು ಮುಖ್ಯ ನಾಟಕಕಾರ ಎನ್ನುವ ಸಂಗತಿ, ನಟನಿಗೆ ಸಿಕ್ಕುವ ಚಪ್ಪಾಳೆಯ ಗದ್ದಲದಲ್ಲಿ ಮುಳುಗಿ ಹೋಯಿತು.

ಗಿರೀಶರ ಸಾಹಿತ್ಯ ಕುರಿತಾದ ವಿಸ್ತೃತವಾದ ಚರ್ಚೆಯೊಂದನ್ನ ಕಳೆದ ತಿಂಗಳು ಹೆಗ್ಗೋಡಿನಲ್ಲಿ ಧ್ವನಿ ಮುದ್ರಿಸಲಾಗಿತ್ತು. ಧ್ವನಿ ಮುದ್ರಿತ ಚರ್ಚೆಯನ್ನ ಬರವಣಿಗೆಗೆ ಇಳಿಸಿದವರು ಶೈಲೇಂದ್ರ ಬಂದಗದ್ದೆ.

ಪ್ರಸನ್ನ : ಗಿರೀಶರ ಎರಡು ಪ್ರಮುಖ ನಾಟಕಗಳನ್ನ ನಮ್ಮ ಚರ್ಚೆಗೆ ಎತ್ತಿಕೊಂಡು ಚರ್ಚೆ ಪ್ರಾರಂಭಿಸಬಹುದು. ಒಂದು **ತುಘಲಕ್** ಹಾಗೂ ಇನ್ನೊಂದು **ತಲೆದಂಡ**. ನಾಟಕ ಪ್ರಕಾರದಲ್ಲಿ ಆಧುನಿಕ ಸಂವೇದನೆಯನ್ನು ಬಹಳ ಗಟ್ಟಿಯಾಗಿ ಒಳತಂದ ನಾಟಕಕಾರರು ಗಿರೀಶ್. ಗಿರೀಶರ ನಾಟಕದಲ್ಲಿ **ತುಘಲಕ**, ಆಧುನಿಕ ಜಗತ್ತಿನ ಎಲ್ಲಾ ತೊಳಲಾಟಗಳನ್ನೂ ಕಂಡು, ಅನುಭವಿಸಿ, ಕಡೆಗೆ ಪಾಪಿಯಾಗಿ, ಭ್ರಷ್ಟನಾಗಿ ಹೋಗುತ್ತಾನೆ. ನಾಟಕದ ಕಡೆಯಲ್ಲಿ **ತುಘಲಕ್**ನಿಗೆ ಬರುವ ನಿದ್ರೆ, ಅದು ನಿದ್ರೆಯೂ ಆಗಬಹುದು, ಸಾವೂ ಆಗಬಹುದು, ಅಥವಾ ಅಪಾರವಾದ ಸುಸ್ತು ಕೂಡ ಆಗಬಹುದು.

ನಂತರ ಗಿರೀಶರು **ತಲೆದಂಡ** ಬರೆದಾಗ, ಮತ್ತೊಮ್ಮೆ**ತುಘಲಕ್**ನಷ್ಟೆ Ambitious ಆದ ಪ್ರಯತ್ನ ಮಾಡುತ್ತಾರೆ. **ತುಘಲಕ್** ನಾಟಕದ ಪಾತ್ರಗಳು ಹಾಗೂ ಪರಿಸ್ಥಿತಿ, ಕನ್ನಡದ ಪರಿಸರಕ್ಕೆ ಹೊರಗಿನದ್ದಾದರೆ, **ತಲೆದಂಡ**ದಲ್ಲಿ, ಭಕ್ತಿ ಚಳುವಳಿಯಿಂದ ಪ್ರೇರಿತವಾದ ಒಂದು ಪ್ರಸಂಗವನ್ನು ಎತ್ತಿಕೊಂಡು, ಆಧುನಿಕತೆಯ ಅದೇ ಸಮಸ್ಯೆಯನ್ನು ಮತ್ತೆ ಎದುರಿಸುತ್ತಾರೆ ಗಿರೀಶ್.

ಅನಂತಮೂರ್ತಿಯವರು ಕಳೆದ ರುಜುವಾತುವಿನಲ್ಲಿ ಭಕ್ತಿಯ ಬಗ್ಗೆ ದಾಖಲಿಸಿದ ಒಂದು ಅಭಿಪ್ರಾಯದಿಂದ ನಮ್ಮ ಚರ್ಚೆಯನ್ನ ಶುರುಮಾಡಬಹುದು. ಅದೆಂದರೆ, ಆಧುನಿಕರು ಭಕ್ತಿಯ ಪ್ರಸಂಗವನ್ನು ಎತ್ತಿಕೊಂಡಾಗ ಕೂಡಾ, ಅದನ್ನು ಬರೀ ಪಠ್ಯವಾಗಿ ಗ್ರಹಿಸುತ್ತಾರೆಯೇ ಹೊರತು, ಅದರ ಒಟ್ಟು ಪರಿಸರವನ್ನ ಕಾಣಲಾರರು ಅಂತ. ಸರಳವಾಗಿ ಹೇಳುವುದಾದರೆ ಆಧುನಿಕರು ಭಕ್ತರಾಗಲಾರರು ಎಂದು ಅನಂತಮೂರ್ತಿಯವರ ಅಭಿಪ್ರಾಯ.

ಅನಂತಮೂರ್ತಿ : ಭಕ್ತಿ ಚಳುವಳಿ ಸಾಮಾಜಿಕ ಭೇಧಗಳನ್ನು ತೊಡೆದು ಹಾಕಿ ಕ್ರಾಂತಿಕಾರಕವಾಗಿ ಕೆಲಸ ಮಾಡಿತ್ತು ಎನ್ನುವ ಅಂಶ ಆಧುನಿಕರಿಗೆ ಮುಖ್ಯವಾಗುತ್ತದೆ. ನಾವುಗಳು ಅದಕ್ಕೆ Respond-ಮಾಡುತ್ತೇವೆ, ಭಕ್ತಿಗೆ ಅಲ್ಲ. ಇದು ನನಗೆ ನಿಮಗೆ ಮಾತ್ರವಲ್ಲ ಅಡಿಗರಿಗೆ ಕೂಡಾ ಸಾಧ್ಯವಾಗಲಿಲ್ಲ. ಭಕ್ತ ತನ್ನ ಸಂಪೂರ್ಣ ವ್ಯಕ್ತಿತ್ವವನ್ನು surrender ಮಾಡಿಕೊಳ್ಳುತ್ತಾನೆ.



ಗಿರೀಶ್ ಕಾರ್ನಾಡ್ : ಇರಬಹುದು. ನಾಟಕದಲ್ಲಿ ಒಂದು ಕಡೆ ಬಿಜ್ಜಳನೇ ಹೇಳುತ್ತಾನೆ. ಅವರ ಪಾದೋದಕ ಗೀದೋದಕ ನನಗೆ ಹಿಡಿಸೋದಿಲ್ಲ ಅಂತಾನೆ. ಪಾದೋದಕದ ಹಿಂದಿರುವ ಆಶಯವನ್ನ ಒಪ್ಪಿಕೊಳ್ಳೋದಕ್ಕೆ ಬಿಜ್ಜಳನಿಗೂ ಆಗುವುದಿಲ್ಲ.

ಅನಂತಮೂರ್ತಿ : **ಅಕ್ಕಮಹಾದೇವಿ** ಒಬ್ಬಳನ್ನು ಬಿಟ್ಟರೆ ಪ್ರಾಯಶಃ ಈ ತೊಳಲಾಟ ಭಕ್ತರಿಗೂ ಇತ್ತು. ಇದನ್ನ **ರಾಮಾನುಜನ್** ಒಂದು ಕಡೆ ಹೇಳ್ತಾರೆ. ನಾನು ಪೂರ್ತಿಯಾಗಿ ನಾನಿಷ್ಟಪಟ್ಟಂತೆ ಆಗಿಬಿಡಲಿಲ್ಲ ಆಗಲಿಲ್ಲ ಎನ್ನುವ ತೋಳಲಾಟ ಮೇಲ್ಜಾತಿಯವರಿಗೆ ಇದೆ. ಆದರೆ ಶೂದ್ರರಿಗೆ, ಸ್ತ್ರೀಯರಿಗೆ ಅದಿಲ್ಲ ಅಂತಾರೆ.

ಗಿರೀಶ್‌ರ ಎಲ್ಲ ನಾಟಕದಲ್ಲೂ ಒಂದು Lyrical ಗುಣ ಇದೆ. ನಿಮ್ಮ ನಾಟಕದ ಪಾತ್ರಗಳು, ತನ್ನ ತನ್ಮಯ ಸ್ಥಿತಿಯಲ್ಲಿ ತನ್ನೊಳಗೆ ಮಾತಾಡಿಕೊಳ್ಳುವ ಹಾಗೆ ಮಾಡಬಲ್ಲಿರಿ ನೀವು. **ತುಘಲಕ್** ತನ್ನೊಳಗೇ ಮಾತನಾಡಿಕೊಳ್ಳಬಲ್ಲ, **ಬಸವಣ್ಣ** ತನ್ನೊಳಗೇ ಮಾತನಾಡಿಕೊಳ್ಳಬಲ್ಲ. ಹೀಗೆ ಮಾತನಾಡಿಕೊಳ್ಳುತ್ತಲೇ ಅವರು ನಾಟಕದ ಪಾತ್ರಗಳೂ ಆಗಬಲ್ಲರು.

ಮ್ಯಾಕ್‌ಬೆತ್ ತನ್ನೊಳಗೇ ಮಾತಾಡಿಕೊಂಡಾಗ ಶೇಕ್ಸ್‌ಪಿಯರ್‌ನ ನಾಟಕಕ್ಕೆ ಒಂದು Lyrical ಗುಣ ಬರುತ್ತೆ. **ಲೇಡಿ ಮ್ಯಾಕ್‌ಬೆತ್** ಕೂಡಾ ಹಾಗೇನೆ. **ಬಸವಣ್ಣ** ಮಾತನಾಡಿಕೊಂಡಾಗ ಆ ಮೂಲಕ ಭಕ್ತಿ ಕಾಣಿಸೋದರಲ್ಲಿ ನಿಮಗೆ ತೊಡಕಾಗಿದೆಯೇ ಎಂದು ನನ್ನ ಪ್ರಶ್ನೆ.

ಪ್ರಸನ್ನ : ಭಕ್ತಿಯ ಒಟ್ಟಾರೆ ಗ್ರಹಿಕೆಯ ದೃಷ್ಟಿಯಿಂದ ಪ್ರಾಯಶಃ **ಲಂಕೇಶರ** ಇದೇ ವಸ್ತುವಿನ **ಸಂಕ್ರಾಂತಿ** ಹೆಚ್ಚು ಯಶಸ್ವಿ ನಾಟಕ ಅನ್ನಿಸುತ್ತದೆ. ಆದರೆ ಇದೇ ಕಾರಣಕ್ಕಾಗಿ ನನಗೆ ಗಿರೀಶರ **ತಲೆದಂಡ** ಹೆಚ್ಚು ಮಹತ್ವಾಕಾಂಕ್ಷಿ ನಾಟಕ ಎನಿಸುತ್ತದೆ. **ಲಂಕೇಶ್** ಕೆಲವು ಕಡೆ ಸ್ವಲ್ಪ ರೊಮ್ಯಾಂಟಿಕ್ ಆಗಿ ಬಿಡುತ್ತಾರೆ. ಅವರ **ಉಜ್ಜ** ಇತ್ಯಾದಿ ಪಾತ್ರಗಳ ಮೂಲಕ ಸಣ್ಣ ಸಣ್ಣ Romanticism ಹುಟ್ಟುತ್ತವೆ.

ಗಿರೀಶ್ ಕಾರ್ನಾಡ್ : **ತುಘಲಕ್** ಬರೆಯಲಿಕ್ಕೆ ಹೊರಟಾಗ ನಾನು ನಾಸ್ತಿಕ ಅಂದುಕೊಂಡಿದ್ದೆ. ನಾನಿನ್ನೂ ನಾಸ್ತಿಕನೇ. ಮನೆಯಲ್ಲಿ ದೇವರು, ಗೀವರು ಏನೂ ಇಟ್ಟಿಲ್ಲ. ಈಗಲೂ ದೇವರಲ್ಲಿ ನನಗೆ ಸಂಪೂರ್ಣ ವಿಶ್ವಾಸ ಇಲ್ಲ.

ಆದರೆ ಆಗ, ನಾಸ್ತಿಕ ಅಂದರೆ ಅದೊಂದು ಸೈದ್ಧಾಂತಿಕವಾದ ಹಟ. **ತುಘಲಕ್**‌ನನ್ನೇ ನಾಸ್ತಿಕನನ್ನಾಗಿ ಮಾಡಲು ಹೊರಟೆ ನಾನು. **ಸಾರ್ತ್**ನ ನಾಸ್ತಿಕವಾದ ತುಂಬಾ ಪ್ರಚಾರದಲ್ಲಿದ್ದ ಕಾಲ ಅದು. ಆದರೆ **ತುಘಲಕ್**‌ನ ಚರಿತ್ರೆಯನ್ನ ಗಮನಿಸಿದರೆ, ಆತನದ್ದು ದೇವರ ಜೊತೆಗೆ ಸಂಪೂರ್ಣವಾದ, ಆತ್ಯಂತಿಕವಾದ ತೊಡಗಿಕೊಳ್ಳುವಿಕೆ. ೭ ವರ್ಷ ಅವನು ಪ್ರಾರ್ಥನೆಯನ್ನೇ-ಗಡೀಪಾರು ಮಾಡುತ್ತಾನೆ. ಆನಂತರ ಖಲೀಫನ ಮೊಮ್ಮಗನನ್ನು ಕರೆಸಿ ಪುನಃ ಪ್ರಾರ್ಥನೆಯನ್ನ ಆರಂಭಿಸುತ್ತಾನೆ. ದೇವರು ಧರ್ಮದ ಬಗೆಗಿನ ಅವನ ವಿಶ್ವಾಸ ತುಂಬಾ fascinating ಆಗಿದೆ ಅನ್ನಿಸಿತು. ಆ fascination ನನ್ನಲ್ಲಿ ಒಂದು ರೀತಿಯ ಬದಲಾವಣೆಯನ್ನು ತಂದುಬಿಟ್ಟಿತು. ಒಮ್ಮೊಮ್ಮೆ ಹೀಗಾಗುತ್ತದೆ. ನಮ್ಮ ನಾಟಕವೇ ನಮ್ಮನ್ನ ಬದಲು ಮಾಡಿಬಿಡುತ್ತವೆ. ದೇವರು ಹಾಗೂ ಮನುಷ್ಯನ ಸಂಬಂಧ ನನ್ನ ನಾಟಕಗಳಲ್ಲಿ ನನ್ನನ್ನು ಬಾಧಿಸುವ ಒಂದು ಪ್ರಮುಖ ಅಂಶ.

ರಾಮಾನುಜನ್ ಯಾವಾಗಲೂ ಹೇಳುತ್ತಿದ್ದರು. I don't believe in god ; I believe in people who believe in God ಅಂತ. ಈ ರೀತಿಯ ಧರ್ಮ ಸಂಬಂಧವಾದ ಹುಡುಕಾಟ **ಹಿಟ್ಟಿನ ಹುಂಜ, ತಲೆದಂಡ,** ನಾಟಕಗಳಲ್ಲಿ ಕೂಡಾ ಇದೆ. ಆದರೆ ಎಷ್ಟರ ಮಟ್ಟಿಗಿನ Conviction ಇದೆ ಎಂದು ನೀವು ಕೇಳುತ್ತಿರುವುದಾದರೆ ನನಗೆ ಗೊತ್ತಿಲ್ಲ.

ಅನಂತಮೂರ್ತಿ : Conviction ಅನ್ನೋ ಮಾತನ್ನ ಕೃತಿಯ ಮಟ್ಟಿಗೆ ಸೀಮಿತಗೊಳಿಸಿ ಆಡುತ್ತಿದ್ದೇವೆ. ಗಿರೀಶರ ಖಾಸಗೀ ಬದುಕನ್ನ ಕೆದಕಿ ಅಲ್ಲ. ಶೇಕ್ಸ್‌ಪಿಯರ್ ಬಗೆಗೆ ಒಂದು ದೊಡ್ಡ ಚರ್ಚೆ ಇದೆ. ಅವನಿಗೆ ದೇವ್ರಗಳ ಬಗ್ಗೆ ನಂಬಿಕೆ ಇತ್ತೇ, ಇಲ್ಲವೆ ಅಂತ. **ಶೇಕ್ಸ್‌ಪಿಯರ್** ದೇವ್ರಗಳನ್ನು ನಂಬುತ್ತಿದ್ದನೋ ಇಲ್ಲವೋ, ಅಂತೂ ನಂಬುವವರ ಹಾಗೆ ಬರೆಯುತ್ತಿದ್ದ. **(ನಗು)** ಅಥವಾ ತನ್ನ

ಪಾತ್ರಗಳು ನಂಬಿದ್ದಾವೆ ತಿಳಿದು ಗೌರವದಿಂದ ಬರೆಯುತ್ತಿದ್ದ. ಇದು ನಾಟಕಕಾರನಲ್ಲಿ ಇರುವ ಒಂದು ವಿಶೇಷ ಗುಣ. ಇರುವುದನ್ನು ಇರುವ ಹಾಗೆ ನೋಡುವ ಶಕ್ತಿ.

ಗಿರೀಶ್ ಕಾರ್ನಾಡ್ : ನಾಟಕಕಾರ ತನ್ನ ನಾಟಕದ ಮೂಲಕ Persuade ಮಾಡುತ್ತಿರುತ್ತಾನೆ. ಒಂದು ಪಾತ್ರ ಇನ್ನೊಂದು ಪಾತ್ರವನ್ನು, ತಾನು ಹೇಳಿದ್ದೇ ಖರೆ ಎಂದು ಒಪ್ಪಿಸುತ್ತಾ ಇರುತ್ತೆ. ನೀವು ಹೇಳಿದ್ದೀರಲ್ಲಾ ತನ್ಮಯತೆ, ಹಾಗೆ. ಪ್ರತಿಯೊಂದು ಪಾತ್ರವು ಇನ್ನೊಂದು ಪಾತ್ರಕ್ಕೆ ತಾನು ಮಾಡಿದ್ದೆ ಸರಿ ಅಂತ ಒಪ್ಪಿಸಲಿಕ್ಕೆ ಪ್ರಯತ್ನಿಸುತ್ತದೆ. ನಾವು ನಮ್ಮ ಬದುಕಿನಲ್ಲಿ ಮಾಡುವ ಹಾಗೇನೇ. ಈಗ ಇಲ್ಲಿ ನಾವು ಮೂರು ಜನ ಮಾಡ್ತಾ ಇದೀವಲ್ಲ, ಹಾಗೇನೇ. ಈ ತರಹದ debate of persuation ನಾಟಕಕಾರ ಪ್ರೇಕ್ಷಕರ ಜೊತೆಗೂ ಮಾಡ್ತಾ ಹೋಗ್ತಾನೆ. ನನಗನ್ನಿಸುವುದು ಇದು, ಇದನ್ನು ನೀವು ಒಪ್ಪಿಕೊಳ್ಳ ಬೇಕು ಅಂತಾನೆ. ಹಾಗಾಗಿ ನಾಟಕ ಒಂದು ರೀತಿಯಲ್ಲಿ ಪ್ರೇಕ್ಷಕ ಹಾಗೂ ನಾಟಕಕಾರನ ನಡುವಿನ ವಾಗ್ವಾದವೂ ಹೌದು. ಪ್ರೇಕ್ಷಕ ಇದು ನನಗೆ Convince ಆಗ್ತಾ ಇಲ್ಲ ಅಂತಾನೆ. ನಾಟಕಕಾರ Persuade ಮಾಡ್ತಾನೆ.

ಹ್ಯಾಮ್ಲೆಟ್ನಲ್ಲಿ ಭೂತ ಇದೆಯಲ್ಲ. ಹ್ಯಾಮ್ಲೆಟ್ ಭೂತವನ್ನು ನಂಬಿದ್ದನೋ ಇಲ್ಲವೋ ಗೊತ್ತಿಲ್ಲ. ಆದರೆ ಶೇಕ್ಸ್‌ಪಿಯರ್ ಭೂತ ಹೇಳಿದ್ದನ್ನ ಬೆಂಬಿಡದೆ ಹಿಂಬಾಲಿಸುತ್ತಾನೆ. ಭೂತದ ಮಾತಿಗೂ ಒಂದು ಬೆಲೆ ಇದೆ ಅಂತ ಶೇಕ್ಸ್‌ಪಿಯರ್ ಹಟ ಹಿಡೀತಾನೆ. ಹ್ಯಾಮ್ಲೆಟ್ ಅದನ್ನ ನಂಬುತ್ತಾನೆ. **(ನಗು)** And the whole question of Hamlets revenge after all, is dependent on the word of the Ghost ಅಷ್ಟೆ ; ಇಲ್ಲದಿದ್ರೆ ನಾಟಕವೇ ಇಲ್ಲ ಅಲ್ಲಿ. ನಾವು ಭೂತವನ್ನ ನಂಬದೇ ಇದ್ರೆ, ಹ್ಯಾಮ್ಲೆಟ್ ಏನೂ ಅಲ್ಲ ಅಲ್ಲಿ. ಭೂತ ಹೇಳಿ ಹೋಗಿತ್ತು ಸೇಡು ತೀರಿಸಿಕೋ ಅಂತ. ನೀವು ಹೇಳಿದ ಹಾಗೆ ಶೇಕ್ಸ್‌ಪಿಯರ್‌ಗೆ ನಂಬಿಕೆ ಇತ್ತೋ ಇಲ್ಲವೋ ಅನ್ನುವುದು ಮುಖ್ಯ ಆಗುವುದಿಲ್ಲ.

ಪ್ರಸನ್ನ : ನಾವು ಈಗ ಚರ್ಚೆ ಮಾಡುತ್ತಿರುವ ಈ ಒಂದು ಮುಖದ ಜೊತೆಗೆ ಗಿರೀಶರ ನಾಟಕಗಳಿಗೆ ಇನ್ನೊಂದು interesting ಆದ ಮುಖವೂ ಇದೆ. ಉದಾಹರಣೆಗೆ ಗಿರೀಶರು ತಮ್ಮ ನಾಟಕಗಳಲ್ಲಿ ಒಂದೇ ವ್ಯಕ್ತಿಯನ್ನ ಒಡೆದು ಎರಡು ಮಾಡಿ, ಅಂದರೆ ಎರಡು ಪಾತ್ರಗಳನ್ನಾಗಿ ಮಾಡಿ, ಇಡುತ್ತಾರೆ.ಆ ಎರಡು ಪಾತ್ರಗಳು ಹೀರೋ, ವಿಲನ್ ಆಗಬಹುದು, ಮತ್ತೇನೋ ಆಗಬಹುದು. ತುಘಲಕ್‌ನಲ್ಲಿ, **ತುಘಲಕ್** ಮತ್ತು **ಅಜೀಜ್**, ತಲೆದಂಡದಲ್ಲಿ **ಬಿಜ್ಜಳ** ಮತ್ತು **ಬಸವಣ್ಣ**, ಯಯಾತಿಯಲ್ಲಿ **ತಂದೆ ಮಗ**, ಅಂಜುಮಲ್ಲಿಗೆಯಲ್ಲಿ **ಅಕ್ಕ ತಮ್ಮ**, ಹಯವದನದಲ್ಲಂತೂ ಈ ರೀತಿಯ ಒಡೆಯುವಿಕೆಯೇ ನಾಟಕದ ವಸ್ತು. **ಕಪಿಲ** ಮತ್ತು **ದೇವದತ್ತ**, **ದೇಹ** ಮತ್ತು ಮನಸ್ಸು, ಬದಲಾಗುವ **ತಲೆ**ಗಳು ಇತ್ಯಾದಿ.

ಗಿರೀಶ್ ಕಾರ್ನಾಡ್ : ಹೌದು ಅಲ್ಲಿ ಅದೇ ವಸ್ತು.

ಪ್ರಸನ್ನ : ಗಿರೀಶರ ಬೇರೆ ಬೇರೆ ನಾಟಕಗಳಲ್ಲಿ ಈ ತಂತ್ರ ಬೇರೆ ಬೇರೆ ಪರಿಸ್ಥಿತಿಗಳಲ್ಲಿ ಬಳಕೆಯಾಗುವುದರಿಂದ ಹೊಸ ಆಯಾಮಗಳನ್ನ ಕೊಡುತ್ತಾ ಹೋಗುತ್ತದೆ. **ಅಂಜು ಮಲ್ಲಿ**ಗೆಯಲ್ಲದು ಯಮಾ ಯಮಿಯ ಸಂವಾದದ ರೂಪ ಪಡೆದರೆ, **ತುಘಲಕ್**ನಲ್ಲಿ ಧಾರ್ಮಿಕ ರಾಜಕೀಯ ಸಂವಾದವಾಗುತ್ತದೆ. **ಯಾಯಾತಿ**ಯಲ್ಲಿ ಯೌವನದ ಆಶಯವಾಗುತ್ತದೆ. **ತಲೆದಂಡ**ದಲ್ಲಿ ಧಾರ್ಮಿಕತೆ ಹಾಗೂ ಸಾಮಾಜಿಕತೆಯ ಸಂವಾದವಾಗುತ್ತದೆ. ಇದು ನಾಟಕಕಾರರಾಗಿ ಗಿರೀಶರ ಯಶಸ್ಸಿನ ಗುಟ್ಟು. ಒಂದೇ ವ್ಯಕ್ತಿತ್ವ ಎರಡಾಗಿ ಒಡೆದು ಚರ್ಚೆಗೆ ಇಳಿದಾಗ, ಎರಡು ಪಾತ್ರಗಳ ನಡುವಿನ ಚರ್ಚೆ, ಒಂದೇ

ವ್ಯಕ್ತಿತ್ವದ ಅಂತರಂಗದ ಚರ್ಚೆಯೂ ಆಗಬಲ್ಲದು. ಕನ್ನಡದ ಹೊಸ ನಾಟಕಕಾರರಿಗೆ ಈ ರೀತಿ ನಾಟಕದ ಒತಾಸೆಯನ್ನ ಪಾತ್ರಗಳ ಒತ್ತಾಸೆಯಾಗಿ ಮಾಡಲಿಕ್ಕೆ ಬಂದಿಲ್ಲ.

ಗಿರೀಶ್ ಕಾರ್ನಾಡ್ : ಬರೆ statement ನಾಟಕ ಆಗುವುದಿಲ್ಲ. ಅದನ್ನೇ ನಾನು ಹೇಳಿದ್ದು. ಪ್ರತಿಯೊಂದು ಪಾತ್ರವೂ persuade ಮಾಡಬೇಕು ಅಂತ.

ಪ್ರಸನ್ನ : ಒಂದೇ ವ್ಯಕ್ತಿತ್ವವನ್ನ ಎರಡು ಪಾತ್ರವಾಗಿಸುವ ನಿಮ್ಮ ತಂತ್ರ, **ತಲೆದಂಡ** ನಾಟಕದಲ್ಲಿ ಮಾತ್ರ ನನಗಿನ್ನೂ ಗೂಢವಾಗಿಯೇ ಉಳಿದಿದೆ. ಹಾಗಾಗಿಯೇ **ತಲೆದಂಡ**ದಲ್ಲಿ ನೀವು ಯಶಸ್ವೀಯೋ ಅಲ್ಲವೋ ಎಂದು ನಿರ್ಧರಿಸುವುದು ಕಷ್ಟವಾಗುತ್ತದೆ. **ತಲೆದಂಡ**ದಲ್ಲಿನ ಸಂಬಂಧ ಬಹಳ ಮಹತ್ವದ್ದು. ಬಿಜ್ಜಳ ಬಸವಣ್ಣರಲ್ಲಿ ವೈರುಧ್ಯಗಳಿಲ್ಲ. ಅಂದರೆ ಅದು antagonistic relationship ಅಲ್ಲ. ಹಾಗಾಗಿಯೇ ನಿಮ್ಮ ನಾಟಕದಲ್ಲಿ **ಬಸವಣ್ಣ** ಒಂದು ಆದರ್ಶೀ ಕೃತ ಪಾತ್ರ ಆಗಿ ಬಿಡುವ ಅಪಾಯ ಇದೆ.

ಗಿರೀಶ್ ಕಾರ್ನಾಡ್ : ಇದೊಂದು ಸಮಸ್ಯೆ ಹೌದು. ಇದನ್ನ ಬೇರೆಯವರೂ ಹೇಳಿದ್ದಾರೆ. ಒಬ್ಬ ಸಂತನನ್ನ ನಾಟಕದ ಪಾತ್ರ ಮಾಡುವ ಬಗೆ ಹೇಗೆ ? ಎಲಿಯಟ್‌ನ **ಮರ್ಡರ್ ಇನ್ ದಿ ಕಥೀಡ್ರಲ್, ಸೇಂಟ್ ಜೋನ್ಸ್**ಗಳಲ್ಲಿ ಕೂಡಾ ಕಾಡುವ ಸಮಸ್ಯೆ ಇದು. How does one make a saint an interesting charecter. ರಾಮಾನುಜಂ **ತಲೆದಂಡ** ಓದಿದಾಗ, "ನನಗೆ ಬಸವಣ್ಣ week ಅನ್ನಿಸಿ ಬಿಡ್ತಾನೆ. ಯಾಕೆ ಅಂದ್ರೆ ಅಂವಾ ಸಿಟ್ಟಿಗೇಳೋದಿಲ್ಲ. ಅಂವಾ ಸಿಟ್ಟಿಗೆ ಏಳಬೇಕು. Condemn ಮಾಡಬೇಕು. ಅದನ್ನೆಲ್ಲಾ ನಿಮ್ಮ ಬಸವಣ್ಣ ಮಾಡೋದಿಲ್ಲ" ಅಂತ ಅಂದ್ರು. **ರಾಮಾನುಜಂ**ಗೆ ಬಸವಣ್ಣ ಆದರ್ಶೀಕೃತ ಪಾತ್ರ ಅನ್ನಿಸಲಿಲ್ಲ.

ಅನಂತಮೂರ್ತಿ : ಬಸವಣ್ಣನಲ್ಲಿ ವ್ಯವಹಾರಜ್ಞತೆ ಇದೆ, ಬಿಜ್ಜಳನಲ್ಲಿ ಆದರ್ಶವಿದೆ.

ಗಿರೀಶ್ ಕಾರ್ನಾಡ್ : ಹೌದು.

ಅನಂತಮೂರ್ತಿ : ಬಿಜ್ಜಳನಲ್ಲಿ ಗೊತ್ತಾದ ಒಂದು ಆದರ್ಶವಿದೆ. ಅದರಿಂದಾಗಿಯೇ ಆತ ಕೊನೆಯಲ್ಲಿ ತೊಳಲಾಟಕ್ಕೆ ಸಿಕ್ಕಿಹಾಕಿಕೊಳ್ಳಬೇಕಾಗುತ್ತದೆ. ನಿಮ್ಮ ಬಸವಣ್ಣನಲ್ಲಿ ವ್ಯವಹಾರಜ್ಞತೆಯಿದೆ. ಆ ಮದುವೆಯ ಸಂದರ್ಭವನ್ನೇ ತೆಗೆದುಕೊಳ್ಳಿ. ಆ ಮದುವೆ ತನ್ನ ಆದರ್ಶದ ಮೇಲೆ ಆಗುತ್ತಾ ಇದೆ ಅಂತಲೂ ಗೊತ್ತು, ಆ ಮದುವೆ ಆಗುವುದರಿಂದ ಅಪಾಯವಿದೆ ಅಂತಲೂ ಗೊತ್ತು. ಮದುವೆ ಆಗಲಿಕ್ಕೆ ಹೊರಟವರಿಗೆ ಇದು ಗೊತ್ತಿಲ್ಲ. ನಿಮ್ಮ ಬಸವಣ್ಣ, ತಾನು ಉಂಟು ಮಾಡಿದ ಅಲೆ ತನ್ನನ್ನೇ ಮೀರಿ, ಮುಳುಗಿಸಿ ಹೋಗುವ ಸಾಧ್ಯತೆ ಇದೆ ಎಂದು ಕಂಡುಕೊಳ್ಳ ಬಲ್ಲವ. ಆತ ಒಬ್ಬ ವ್ಯವಹಾರಸ್ಥನೂ ಹೌದು, ಸಂಸಾರಸ್ಥನೂ ಹೌದು,ಶರಣನೂ ಹೌದು. ಇವು ಮೂರೂ ಸೇರಿರುವುದರಿಂದಲೇ ನಾಟಕದ ಬಹಳ ದೊಡ್ಡ ವಸ್ತು ಅವನು.

ಗಿರೀಶ್ ಕಾರ್ನಾಡ್ : ನಿಜ. ನಿನ್ನೆ ನೀವು ಗಾಂಧಿಯ ಬಗ್ಗೆ ಹೇಳುತ್ತಿದ್ದ ಮಾತು ಬಸವಣ್ಣನಿಗೂ ಅನ್ವಯಿಸುತ್ತದೆ. ಆತ- a strict tactician ಕೂಡಾ ಹೌದು.

ಅನಂತಮೂರ್ತಿ : ಖಂಡಿತ. ಹಾಗೆ ಬಿಜ್ಜಳನಲ್ಲೂ ವ್ಯವಹಾರಜ್ಞತೆ ಇದೆ. ಶರಣರೆಲ್ಲ ಕಾಯಕ ಮಾಡುವುದರಿಂದಲೇ ತನ್ನ ರಾಜ್ಯದ ಆರ್ಥಿಕ ಸ್ಥಿತಿ ಉತ್ತಮವಾಗಿದೆ ಎಂದು ಅವನಿಗೆ ಗೊತ್ತು.



ಗಿರೀಶ್ ಕಾರ್ನಾಡ್ : ಹೌದು.ಶ'ರಣರು -Such a radical Philosophy, ಅವರು ಹೇಗೆ ಅಷ್ಟೊಂದು ಸಮೃದ್ಧಿಗೆ ಕಾರಣರಾದರು ಎಂದು ನಾನು ವಿಚಾರ ಮಾಡಿದ್ದೇನೆ.

ಅನಂತಮೂರ್ತಿ : ಖಂಡಿತ. ಗಿರೀಶ್‌ಗೆ ಈ ಸತ್ಯ ನಿರ್ವಹಿಸಲಿಕ್ಕೆ ಬರುತ್ತೆ. ಆದರೆ ಭಕ್ತಿ ಭಾವದ ಸಂಪೂರ್ಣ ಶರಣಾಗತಿಯನ್ನು ನಿರ್ವಹಿಸಲಿಕ್ಕೆ ಬರುತ್ತದೆಯೇ ? **(ನಗು)** ನಮಗ್ಯಾರಿಗೂ ಬರುವುದಿಲ್ಲ ಅಂತ ಕಾಣುತ್ತೆ. ಬೇಂದ್ರೆಗೆ ಅದು ಗೊತ್ತಾಗುತ್ತಾ ಇತ್ತೊ ಏನೊ. ಗೊತ್ತಾಗಿ ಭಯವಾಗುತ್ತಿತ್ತೋ ಏನೊ. ಅದು ಭಯವನ್ನು ಹುಟ್ಟಿಸುವ ವಿಷಯವೇ. **ದಾಸ್ತೋವ್‌ಸ್ಕಿ**ಯಲ್ಲಿ ಅದು ಕಾಣುತ್ತದೆ.

ಗಿರೀಶ್ ಕಾರ್ನಾಡ್ : ದಾಸ್ತೋವ್‌ಸ್ಕಿಯಲ್ಲಿ ಬಹಳ ಕಾಣುತ್ತದೆ. ಅದೇ ಆತನ ವಸ್ತು ಕೂಡಾ. The terror of faith.

ಅನಂತ ಮೂರ್ತಿ : ಹಾಂ ! the terror of faith.

ಗಿರೀಶ್ ಕಾರ್ನಾಡ್ : ಈಗ ನಾನು ಬರೀತಿರೋ ಹೊಸನಾಟಕ **ಯವಕ್ರೀತ,** ಅದರ ಕೇಂದ್ರ ವಸ್ತು ಯಜ್ಞ. ಒಂದು ಯಜ್ಞ ನಡೀತಿರುತ್ತೆ. ಅದರ ಸುತ್ತ ನಡೆಯೋ ಘಟನೆಯೇ ಈ ನಾಟಕದ ವಸ್ತು. ಮಹಾಭಾರತದ ಅರಣ್ಯ ಪರ್ವದಲ್ಲಿ ಈ ಘಟನೆ ಬರುತ್ತದೆ. ಈ ಘಟನೆಯ ಬಗ್ಗೆ ಓದುತ್ತಿದ್ದಾಗ ಮೀಮಾಂಸಕರುಗಳನ್ನು ಮತ್ತೆ ಓದಿದೆ. ಈ ಮೀಮಾಂಸಕರುಗಳದ್ದು ಒಂದು ರೀತಿಯ cold logic. ಕುಮಾರಿಲ ಭಟ್ಟ ಇತ್ಯಾದಿ. ಅವರಿಗೆ ಕ್ರಿಯಾ ವಿಧಿಗಳೇ ಕೇಂದ್ರ. ಅವರು ತಮ್ಮ ಕರ್ಮಠತೆಯನ್ನ ಸಮರ್ಥಿಸಿಕೊಳ್ಳುವ ರೀತಿ ಆಕರ್ಷಕವಾಗಿರುತ್ತದೆ. ಅವರೊಟ್ಟಿಗೆ ವಾಗ್ವಾದ ಸಾಧ್ಯ. ದೇವರನ್ನು

ಒಪ್ಪುವುದೇ ಇಲ್ಲ ಅವರು. ಈಶ್ವರ ಬೇಕಾಗಿಲ್ಲ ಅವರಿಗೆ. ಯಜ್ಞದಿಂದ ಅಪೂರ್ವವಾದದ್ದು ಸಾಧಿಸಲಿಕ್ಕೆ, ಯಜ್ಞದ ಫಲ ದೊರಕಲಿಕ್ಕೆ, ವಿಧಿಗಳು ಸಾಕು. ಒಂದು Formal Structure ಸಾಕು.

ಇಷ್ಟು ಯಜ್ಞ ಮಾಡಿದರೆ ಇಷ್ಟಿಷ್ಟು ಫಲಗಳು ಬರುತ್ತವೆ, ಯಜ್ಞಕ್ಕೆ ಇಂದ್ರ ಬೇಕು, ರುದ್ರ ಬೇಕು, ವರುಣ ಬೇಕು ನಿಜ. ಆದರೆ ಇವರೆಲ್ಲ ಯಜ್ಞದ ಹಂದರಕ್ಕೆ ಪ್ರತಿಮೆಗಳು ಮಾತ್ರ. ನಿಯಮಗಳು ಮಾತ್ರ. ಅಲ್ಲಿ ಅವರು ಭಕ್ತಿಯ ದೇವರಲ್ಲ. ನೋಡಿದ ಕೂಡಲೇ ಕಣ್ಣೀರು ಬರುವ, ಕಾಲಿಗೆ ಬೀಳಬೇಕು ಅನ್ನಿಸುವ, ಹೃದಯ ತಾಕುವ, ಭಕ್ತಿಯ ದೇವರುಗಳಲ್ಲವೇ ಅಲ್ಲ ಯಜ್ಞದ ಇಂದ್ರ, ವರುಣ, ರುದ್ರರು.

ಯಜ್ಞಗಳು ಒಂದು ತರಹ Electric plug point ಇದ್ದ ಹಾಗೆ. ಅಲ್ಲಿ Switch ಹಾಕಿದರೆ ಇಲ್ಲಿ ದೀಪ ಹತ್ತಬೇಕು. ಇವರೆಲ್ಲ ದೇವರಿಗೆ ಯಜ್ಞ ಮಾಡಿ ಆಹುತಿ ನೀಡಿ ಹವಿಸ್ಸನ್ನ ಸುರಿಯುತ್ತಿರಬೇಕಾದರೆ ಒಬ್ಬ ನಿರೀಶ್ವರ ವಾದಿ ಬಂದು **ಈಶ್ವರ** ಇಲ್ಲ ಅಂದು ಬಿಡುತ್ತಾನೆ.

ಇದು ನನಗೆ ಬಹಳ ಆಕರ್ಷಣೀಯವಾಗಿ ಕಾಣುತ್ತೆ. ನಮ್ಮಲ್ಲಿ, ಪಾಶ್ಚಿಮಾತ್ಯರಲ್ಲಿ ಇದ್ದ ಹಾಗೆ ಒಂದೇ ದೇವರು ಅಂತಿದ್ದಿದ್ದರೆ ಆಗ, ಒಂದು ಧರ್ಮ ಅಥವಾ ಒಂದೇ ಧರ್ಮ ಎನ್ನುವ ಗಟ್ಟಿ ನಂಬಿಕೆ ಬೇರೂರುತ್ತಿತ್ತೇನೋ. ಇವರು ನಾಸ್ತಿಕರೇನೂ ಅಲ್ಲ. ಆದರೂ ಈಶ್ವರನನ್ನು ನಂಬುತ್ತಿರಲಿಲ್ಲ.

ಅನಂತಮೂರ್ತಿ :ಆಗ ಬೇಕಾಗಿರಲಿಲ್ಲ. ಅಲ್ಲಿ ಈಶ್ವರ, ರಸಾಯನ ಶಾಸ್ತ್ರದಲ್ಲಿ ಹೇಳುವಂತೆ ವೇಗವರ್ಧಕ ಅಷ್ಟೆ. ಆದರೆ ಭಕ್ತಿಯಲ್ಲಿ ಹಾಗಲ್ಲ. ಭಕ್ತಿಮಾರ್ಗದಲ್ಲಿ ಅವನು ಇದ್ದಾನೆ. ನನ್ನ ಸರ್ವಸ್ವವನ್ನು ಅವನಿಗೆ ಕೊಟ್ಟುಕೊಳ್ಳಬಹುದು, ಅವನನ್ನು ಕಾಣಬಹುದು.

ದಾಸ್ತೋವ್‌ಸ್ಕಿಯನ್ನು ಒಬ್ಬನು ಒಂದು ಕಡೆ "ನೀನು ದೇವರನ್ನ ನಂಬುತ್ತೀಯಾ ?"-ಅಂತ ಕೇಳುತ್ತಾನೆ. ನಂಬುತ್ತೀಯ ಎನ್ನುವ ಪ್ರಶ್ನೆಯೇ ದಾಸ್ತೋವ್‌ಸ್ಕಿಗೆ ಭಯಾನಕವಾಗಿ ಕಾಣುತ್ತದೆ. Terror ಆಗಿ ಕಾಣುತ್ತದೆ. ದೇವರನ್ನು ನಂಬುತ್ತೀನಿ ಅನ್ನುವುದೇ ದೇವರನ್ನು ಹೊರಗಿಡಬಲ್ಲ, ಭಯ ಹುಟ್ಟಿಸಬಲ್ಲ ಪ್ರಶ್ನೆಯಾಗುತ್ತದೆ. ಬಹುಶಃ ಶರಣರ ಕಾಲದಲ್ಲಿ ಕೂಡಾ, ದೇವರು ಇದ್ದಾನೆ ಅನ್ನುವ ಉತ್ಕಟ ನಂಬಿಕೆ ಇಲ್ಲದಿದ್ದರೆ, ಆಗ ಸಾಮಾಜಿಕವಾಗಿ ಜಾರಿಯಲ್ಲಿದ್ದ ಅನೇಕ ವಿಚಾರಗಳನ್ನು ಸರಿಸಿ ಹಾಕಲಿಕ್ಕೆ ಸಾಧ್ಯವಾಗುತ್ತಿರಲಿಲ್ಲ.

Transcendental ಆದ ಇಂತಹ ಸತ್ಯಗಳನ್ನ ನಾಟಕ ಕೆದಕಬೇಕು ಎನ್ನುವುದಾದರೆ ಅದರ ಆಕಾರವೇ ಬದಲಾಗಬೇಕಾಗುತ್ತದೆ. ಕೊನೆಕೊನೆಗೆ ಶೇಕ್ಸ್‌ಪಿಯರ್ ಮಾಡಿಕೊಂಡಿದ್ದ ಒಂದು ಆಕಾರವನ್ನ - ಮೊದಲ ಆಕಾರಕ್ಕಿದ್ದ ವಾಸ್ತವಿಕ ಅಂಶಗಳನ್ನೆಲ್ಲ ತೆಗೆದು ಹಾಕಿ, Tempest ಮೊದಲಾದ ನಾಟಕಗಳಲ್ಲಿ ಆತ ಹುಡುಕಿಕೊಂಡಿದ್ದ ಆಕಾರ - ಅಂತಹ ಪ್ರಯತ್ನ ಗಿರೀಶರಿಗೆ ಕೂಡಾ ಸಾಧ್ಯವಿದೆ.

ಗಿರೀಶ್ ಕಾರ್ನಾಡ್ : ಅದನ್ನ ಈಗ ಯತ್ನಿಸುತ್ತಿದ್ದೇನೆ.

ಅನಂತಮೂರ್ತಿ : ಗಿರೀಶರ **ತುಘಲಕ್** ಓದಿದಾಗ ನನಗೆ ಮತ್ತೊಂದು ಸಂಗತಿ ಗೋಚರಿಸುತ್ತದೆ. ಅದು ತುಘಲಕ್‌ನ ಮಹತ್ವಾಕಾಂಕ್ಷೆ. ತನ್ನ ಕನಸಿಗೆ ಸರಿಗಟ್ಟುವ ಪ್ರಪಂಚ ಕಟ್ಟಬೇಕು ಅನ್ನುವ ಮಹತ್ವಾಕಾಂಕ್ಷೆ . ಅದು ಅಹಂಕಾರ ಜನ್ಯವೂ ಇರಬಹುದು, ಆದರ್ಶ ಜನ್ಯವೂ ಇರಬಹುದು. ಮಹತ್ವಾಕಾಂಕ್ಷಿಗಳಿಗೆ ಇರುವ ತೊಡಕು ಅದೇ. ತನ್ನ ಮಹತ್ವಾಕಾಂಕ್ಷೆ ಆದರ್ಶಜನ್ಯ ಎಂದು ತಿಳಿಯುತ್ತಿರುತ್ತೇವೆ, ಒಮ್ಮೊಮ್ಮೆ ಅದು ಅಹಂಕಾರ ಜನ್ಯವೋ ಎನ್ನುವ ಅನುಮಾನ ಕಾಡುತ್ತದೆ.

ಇದು ಗಾಂಧೀಜಿಯಲ್ಲೂ ಕಾಡಬಹುದಾದ ಪ್ರಶ್ನೆ. ಪ್ರಾಯಶಃ ಸ್ಟಾಲಿನ್ ಹಾಳಾದದ್ದು ಈ ದ್ವಂದ್ವವನ್ನ ಹಿಡಿಯಲಾರದೆಯೇ ಇರಬಹುದು. ರಾಜಕೀಯದಲ್ಲಿ ಬಹಳ ಮುಖ್ಯವಾದ ಈ ದ್ವಂದ್ವ ಗಿರೀಶರ ನಾಟಕದಲ್ಲಿ ಚೆನ್ನಾಗಿ ಬಂದಿದೆ.

ಗಿರೀಶರ ನಾಟಕದಲ್ಲಿ ನನಗೆ ಇಷ್ಟವಾಗುವ ಮತ್ತೊಂದು ಅಂಶ, ಅದರ Texture. ವ್ಯಕ್ತಿ ವ್ಯಕ್ತಿಗಳ ನಡುವಿನ ಸಂಬಂಧದಲ್ಲಿ ಅವರಿಗಿರುವ ಸೂಕ್ಷ್ಮವಾದ ಒಳ ನೋಟ. **ಹಯವದನ** ನಾಟಕದಲ್ಲಿ ಹೊಟ್ಟೆ ಕಿಚ್ಚು ಹುಟ್ಟುವ ರೀತಿ ಕಂಡು, ಎಷ್ಟು ಚೆನ್ನಾಗಿ ಬರೀತಾರೆ ಗಿರೀಶ್ ಅನ್ನಿಸಿತ್ತು ನನಗೆ. ಹೆಣ್ಣುಗಂಡಿನ ಸಂಬಂಧದಲ್ಲಿ, ಇಬ್ಬರು ಗಂಡುಗಳ ನಡುವೆ, ಅಸೂಯೆಯ ಬೀಜ ನಿಧಾನವಾಗಿ ಮೊಳೆಯುವ ಪರಿ, ಅಲ್ಲಿ ತುಂಬ ಚನ್ನಾಗಿ ಬಂದಿದೆ. ಕಾದಂಬರಿಕಾರನಿಗೆ, ಕಥೆಗಾರನಿಗೆ ಮೂಲ ವಸ್ತುವೇ ಅಸೂಯೆ. ಈ ತರಹದ ಸೂಕ್ಷ್ಮಗಳನ್ನ ಅವರು ಬೆಳಸಲಿಕ್ಕೆ ಪ್ರಯತ್ನಿಸಿದ ನಾಟಕ **ಅಂಜುಮಲ್ಲಿಗೆ**. ಅಲ್ಲಿ ಗಿರೀಶ್ ಮನಸ್ಸಿನ ಒಳ ಹೊಕ್ಕು Psychological ಆದ ಆಳಗಳಿಗೆ ಇಳಿಯಲು ಪ್ರಯತ್ನಿಸುತ್ತಾರೆ. **ಹಿಟ್ಟಿನ ಹುಂಜ** ನಾಟಕದಲ್ಲಿ ಅವರಿಗೆ ಒಂದು ಧಾರ್ಮಿಕ ಚೌಕಟ್ಟು ಸಿಕ್ಕಿಬಿಡುತ್ತದೆ. ಪಾಪಪ್ರಜ್ಞೆಯನ್ನು ಅಲ್ಲಿ ಶೋಧಿಸುತ್ತಾರೆ.

ಅಂಜು ಮಲ್ಲಿಗೆ ಇಂಗ್ಲೆಂಡಿನಲ್ಲಿ ನಡೆಯುವ ನಾಟಕ. ಅತ್ಯಂತ ಆಧುನಿಕವಾದ ನಾಟಕವಾಗುವ ಸಾಧ್ಯತೆ **ಅಂಜುಮಲ್ಲಿಗೆ**ಗೆ ಇದ್ದರೂ, ಕನ್ನಡದ ಮನಸ್ಸು ಅದೇಕೋ ಈ ನಾಟಕವನ್ನು ಒಪ್ಪಿಕೊಳ್ಳಲಿಕ್ಕೆ ತಯಾರಿಲ್ಲ. ಗಿರೀಶರು ಒಳ್ಳೆಯ ನಾಟಕ ಬರಿದಿದ್ದಾರೋ ಇಲ್ಲವೋ ಎನ್ನುವುದು ನನ್ನ ಪ್ರಶ್ನೆ ಅಲ್ಲ. ಬಹುಶಃ ಮರಾಠಿಗರು ಇಂತಹ, ಸಂಪೂರ್ಣ ವೈಯಕ್ತಿಕ ನೆಲೆಯಲ್ಲಿ ನಡೆಯುವ ಸಾಹಿತ್ಯವನ್ನ ಒಪ್ಪಿಕೊಳ್ಳುತ್ತಾರೋ ಏನೋ.

ಗಿರೀಶ್ ಕಾರ್ನಾಡ್ : ನಾನು, ಶಾಂತಿನಾಥ ದೇಸಾಯಿ ಈ ಬಗ್ಗೆ ಮಾತನಾಡಿದ್ದೇವೆ. ಮರಾಠಿ ಸಾಹಿತ್ಯದಲ್ಲಿ ನಗರ ಪ್ರಜ್ಞೆ ಮೂಡಿರುವ ಹಾಗೆ ಕನ್ನಡದಲ್ಲಿ ಮೂಡಿಲ್ಲ. ನಮ್ಮಲ್ಲಿನ್ನೂ ನಗರ ಒಂದು ವಸ್ತು ಆಗಿಲ್ಲ. ನಮ್ಮ ಯಾವ ಕಾದಂಬರಿಯಲ್ಲೂ ಆಗಿಲ್ಲ. ಚಿತ್ತಾಲರು ಪ್ರಯತ್ನ ಮಾಡಿದರು. ಆದರೆ ಕೊನೆಗೂ ಅವರ ಕಥೆಗಳಲ್ಲಿ ಬರುವವರು ಕುಮಟಾದ ಚಿತ್ತಾಲರೇ ಹೊರತು ಮುಂಬಯಿಯ ಚಿತ್ತಾಲರಲ್ಲ. (ನಗು)

ಅನಂತಮೂರ್ತಿ : (ನಗುತ್ತಾ) ಹಳ್ಳಿಯಿಂದ ಬಂದ ಚಿತ್ತಾಲ

ಗಿರೀಶ್‌ಕಾರ್ನಾಡ್ : ಮರಾಠಿಗರಿಗೆ ಮುಂಬಯಿ, ಪುಣೆ, ಕೊಲ್ಹಾಪುರ, ನಾಗಪುರ ಹೀಗೆ ಪಟ್ಟಣಗಳು ಸಹಜವಾಗಿವೆ. ಕನ್ನಡ ಲೇಖಕರಿಗೆ ಬೆಂಗಳೂರು ಸಹ ನಂತರದ ಅನುಭವವೇ ಹೌದು. ನಮ್ಮ ಲೇಖಕರಿನ್ನೂ ಧಾರವಾಡ ಶಿರಸಿಗಳಿಂದ ಬಂದು ಬೆಂಗಳೂರಲ್ಲಿ ಬೀಡು ಬಿಡುತ್ತಿರುವ ಮೊದಲ ಸಂತತಿಗಳು.

ಪ್ರಸನ್ನ : ಅಪ್ಪಟ ಆಧುನಿಕವನ್ನ ಕನ್ನಡದ ಮನಸ್ಸು ಸ್ವೀಕರಿಸುವುದಿಲ್ಲ ಎನ್ನುವ ಆತಂಕ ನಿಮ್ಮನ್ನ ಕೆಲವೊಮ್ಮೆ ದಾರಿತಪ್ಪಿಸಿರಬಹುದೆ ಎನ್ನುವ ಅನುಮಾನ ನನಗಿದೆ. **ಹಯವದನ**, **ನಾಗಮಂಡಲ** ಇತ್ಯಾದಿ, ಜಾನಪದದ ಭ್ರಮೆ ಹುಟ್ಟಿಸುವ ನಾಟಕಗಳನ್ನು ಬರೆಯುವುದು ನಿಮಗೆ ನೀರು ಕುಡಿದ ಹಾಗೆ. (ನಗು) ಪ್ರಾಯಶಃ ಭಾರತೀಯ ಭಾಷೆಗಳಲ್ಲೇ ನಾಟಕ ಕಟ್ಟುವ ಕೌಶಲ್ಯದಲ್ಲಿ ಪಳಗಿದವರು ನೀವೇ ಹೌದು. ಅದರಲ್ಲಿ ಅನುಮಾನವಿಲ್ಲ. ಹಾಗಾಗಿಯೇ **ಹಯವದನ**, **ನಾಗಮಂಡಲ** ನಾಟಕಗಳು ನಿಮಗೆ

ಸುಲಭದ ಹಾದಿಗಳು ಎಂದು ನಾನನ್ನುವುದು. ಇಂಥಹ ನಾಟಕಗಳನ್ನು ಬರೆಯುವಾಗ ನಿಮ್ಮ ಮಹತ್ವಾಕಾಂಕ್ಷೆಗೆ ನೀವೇ ಕಟ್ಟುಪಾಡುಗಳ ಹಾಕಿಕೊಳ್ಳುತ್ತಿರೇನೋ ಎನ್ನುವ ಅನುಮಾನವಿದೆ ನನಗೆ.

ಗಿರೀಶ್ ಕಾರ್ನಾಡ್ : (ನಗು)

ಅನಂತಮೂರ್ತಿ : ಅಡಿಗರ ಕಾವ್ಯದ ಒಂದು ಘಟ್ಟದಲ್ಲಿ ಅಪ್ಪಟ ಆಧುನಿಕ ಪ್ರತಿಮೆಗಳು, ಅಂದರೆ ನಗರದ ಪ್ರತಿಮೆಗಳು ತುಂಬಾ ಬರುತ್ತವೆ. ಆನಂತರ ಬಂದ ಅವರ **ಭೂಮಿಗೀತ** ನಡೆಯುವ ಜಾಗ ಹಳ್ಳಿ. ಅಡಿಗರ ಹತ್ತಿರ ಒಂದು ಸಾರಿ ನಾನು ಈ ಪ್ರಶ್ನೆ ಎತ್ತಿದ್ದೆ. ಅದಕ್ಕೆ ಅವರು ಹೇಳಿದ್ದು,"ನೋಡಿ, ನಮ್ಮ ಕನ್ನಡ ಬದುಕುತ್ತಾ ಇರುವುದು ಹಳ್ಳಿಗಳಲ್ಲಿ. ನೀವು ಪೇಟೆಗೆ ಬಂದೊಡನೆ ಅರ್ಧ ಕನ್ನಡ ಬಳಸುತ್ತೀರಿ, ಅರ್ಧ ಇಂಗ್ಲಿಷ್ ಬಳಸುತ್ತೀರಿ. ಪೇಟೆಯಲ್ಲಿ ಸ್ಥಿರವಾದ ಒಂದು ಭಾಷೆ ಅಂತ ಇರುವುದಿಲ್ಲ".

ಗಿರೀಶ್ ಒಂದು ಅತ್ಯಾಧುನಿಕವಾದ ನಾಟಕ ಬರೆದರೆ ಆ ನಾಟಕದ ಪಾತ್ರಗಳು ನಿಜವಾಗಿಯೂ ಇಂಗ್ಲಿಷ್‌ನಲ್ಲಿ ಮಾತನಾಡಬೇಕು. ಆದರೆ ಗಿರೀಶ್ ಅದನ್ನು ಕನ್ನಡದಲ್ಲಿ ಬರೆದಿರುತ್ತಾರೆ. **ಅಂಜುಮಲ್ಲಿಗೆ**ಯಲ್ಲಿ ಈ ದ್ವಂದ್ವ ಸ್ಪಷ್ಟವಾಗಿ ಕಾಣುತ್ತದೆ.

ಗಿರೀಶ್ ಕಾರ್ನಾಡ್ : ಹೌದು. ರಾಮಾನುಜನ್ ಹಾಗೇ ಅಂದಿದ್ದರು. ನೀನು ಈ ನಾಟಕವನ್ನ ಇಂಗ್ಲಿಷ್‌ನಲ್ಲಿ ಬರೆಯಬೇಕಿತ್ತು ಅಂದಿದ್ದರು. ಆದರೆ ಸಮಸ್ಯೆ ಏನೆಂದರೆ, ಇಂಗ್ಲಿಷ್‌ನಲ್ಲಿ ಬೇಕಾದ್ದನ್ನ ಬರೆಯಬಹುದು. ನನ್ನ ಪ್ರಕಾರ ಈ ಸಮಸ್ಯೆಯನ್ನ ನಾವು ಕನ್ನಡದಲ್ಲೇ ಎದುರಿಸಬೇಕು.

ಅನಂತಮೂರ್ತಿ : ಹೌದು. **ಚೋಮನ ದುಡಿ** ನೋಡಿ. ಅಲ್ಲಿ ಅರ್ಧ, ಮುಕ್ಕಾಲು ಘಟನೆ ನಡೆಯುವುದು ತುಳುವಿನಲ್ಲಿ. ಕಾರಂತರು ಕಾದಂಬರಿಯನ್ನ ಬರೆದಿರುವುದು ಕನ್ನಡದಲ್ಲಿ. ಆದರೆ ಕಾರಂತರ ಕಾದಂಬರಿ, ಒಡೆದು ನಿಂತಂತೆ ಕಾಣುವುದಿಲ್ಲ. ಇಂಗ್ಲಿಷ್‌ನಲ್ಲಿ ನಡೆದ ಸಂಭಾಷಣೆಗಳನ್ನ ಕನ್ನಡದಲ್ಲಿ ಬರೆದಾಗ ಮಾತ್ರ ಅದು ಒಡೆಯುತ್ತದೆ.

ಗಿರೀಶ್ ಕಾರ್ನಾಡ್ : ಲೇಖಕನಿಗೆ ಇದೂ ಒಂದು ಸವಾಲು. ನಾನೊಂದು ಚೀನೀ ಪಾತ್ರವನ್ನು ಕನ್ನಡದಲ್ಲಿ ತಂದೆ ಎನ್ನಿ. ಕನ್ನಡಕ್ಕೆ ಅದಿನ್ನೂ ಸಹಜವಲ್ಲದ್ದರಿಂದ, ಭಾಷೆ ಅನುವಾದದ ತರಹ ಕಾಣಿಸುತ್ತದೆ. ಅದೇ ಚೀನೀ ಪಾತ್ರವನ್ನ ಇಂಗ್ಲಿಷ್‌ನಲ್ಲಿ ಬರೆದಿದ್ದರೆ ಹಾಗೆ ಅನ್ನಿಸುತ್ತಿರಲಿಲ್ಲ. English can take everything.

ಅನಂತಮೂರ್ತಿ : ಶೇಕ್ಸ್‌ಪಿಯರ್ ಗ್ರೀಕ್ ನಾಟಕಗಳನ್ನ ಇಂಗ್ಲಿಷ್‌ನಲ್ಲಿ ಬರೆದನಲ್ಲಪ್ಪ ! **ಜೂಲಿಯಸ್ ಸೀಸರ್** ಇಂಗ್ಲಿಷ್‌ನಲ್ಲಿ ಮಾತನಾಡುತ್ತಾನೆ. ಯಾರೂ, **ಜೂಲಿಯಸ್ ಸೀಸರ್** ಇಂಗ್ಲಿಷ್‌ನಲ್ಲಿ ಮಾತನಾಡಬಹುದಾ ಎಂದು ಕೇಳುವುದಿಲ್ಲ (ನಗು)

ಕನ್ನಡ ಇಲ್ಲಿಯವರೆಗೂ ಕನ್ನಡತನವನ್ನು ಮಾತ್ರ ಸ್ವೀಕರಿಸುವ ಭಾಷೆಯಾಗಿ ಉಳಿದಿದೆ. ಕನ್ನಡೇತರವನ್ನ ಸಹಜವಾಗಿ ಸ್ವೀಕರಿಸುವ ಸ್ಥಿತಿಗೆ ಕನ್ನಡವನ್ನ ನಾವು ಲೇಖಕರು ಸಿದ್ಧಗೊಳಿಸಬೇಕು.

ಪ್ರಸನ್ನ : ಭಾಷೆಯ ದೃಷ್ಟಿಯಿಂದ **ತಲೆದಂಡ** ಕುತೂಹಲಕಾರಿ ಪ್ರಯೋಗ. ರಾಜರು ಮಾತನಾಡಲ್ಲಿಕ್ಕೆಂದೇ ಒಂದು ರೀತಿಯ ಕನ್ನಡವನ್ನ ಹುಟ್ಟು ಹಾಕಿದರು ಸಂಸರು. ಸಂಸರ ನಂತರ ಕಂಪನಿ ನಾಟಕಗಳು ಚಾರಿತ್ರಿಕ ನಾಟಕಗಳಿಗೆಂದು ಮತ್ತೊಂದು ರೀತಿಯ ಕನ್ನಡವನ್ನು ಬೆಳೆಸಿದವು.

ಆಮೇಲೆ ಬಂದದ್ದು **ತುಘಲಕ್**. ತುಘಲಕ್ ಆಧುನಿಕ ನಾಟಕ ಸಾಹಿತ್ಯದಲ್ಲಿ, ಚಾರಿತ್ರಿಕ ಪಾತ್ರಗಳಿಗೆಂದು ಮತ್ತೊಂದು ರೀತಿಯ ಕನ್ನಡವನ್ನ ಒದಗಿಸಿತು. ಅಲ್ಲಿಂದ ಮುಂದೆ **ತಲೆದಂಡ.** ಗಿರೀಶ್ ಈ ನಾಟಕದಲ್ಲಿ ಚಾರಿತ್ರಿಕ ಪಾತ್ರಗಳ ಭಾಷೆಯನ್ನ ತಲೆಕೆಳಗು ಮಾಡುತ್ತಾರೆ. **ತಲೆದಂಡದ** ರಾಜ ಗ್ರಾಮೀಣ ಬಳಸುತ್ತಾನೆ. ನನ್ನ ಪ್ರಕಾರ ಈ ಬದಲಾವಣೆ, ಅಥವಾ ತಲೆಕೆಳಗು ಮಾಡುವಿಕೆ, ಬರಿಯ ಭಾಷೆಗೆ ಸೀಮಿತವಾದ ಕೈಚಳಕವಲ್ಲ. ಗಿರೀಶರು ತನ್ನ ಒಟ್ಟು ನಿಲುವಿನಲ್ಲೇ ತಂದುಕೊಂಡ ಮೂಲಭೂತ ಬದಲಾವಣೆ ಇದು. ಅಂದರೆ **ತುಘಲಕ್** ನಾಟಕದ architypal ದೊರೆ ಮರೆಯಾಗಿ, **ತಲೆದಂಡದಲ್ಲಿ** ಜಾನಪದದ ರಾಜ ತಲೆ ಎತ್ತುತ್ತಾನೆ..

ಅನಂತಮೂರ್ತಿ : ಇಲ್ಲಿ ಇನ್ನೊಂದು ಅಂಶ ಇದೆ ಪ್ರಸನ್ನ. ಅದು ಬಿಜ್ಜಳನ ಜಾತಿ. ಅತ ಕ್ಷೌರಿಕ. ಅದು ನಾಟಕದ ಮುಖ್ಯ ಅಂಶ. ಪ್ರಾಯಶಃ ಇಂಡಿಯಾದ ಅನೇಕ ರಾಜರು ಈ ರೀತಿ ಕೆಳ ಜಾತಿಯಿಂದ ಬಂದ ರಾಜರಾಗಿರಬಹುದು. ಅವರ ಭಾಷೆಯಲ್ಲಿ ದ್ವಂದ್ವ ತಲೆದೂರಿರಬಹುದು. ಮನೆಯಲ್ಲಿ ಮಾತನಾಡುವಾಗ ಜಾತಿಯ ಭಾಷೆಯನ್ನೇ ಆಡುತ್ತಿದ್ದಿರಬಹುದು. ಹಾಗೆ ಮಾತನಾಡಲಿಕ್ಕಾಗದ ಕಡೆ, ಅಂದರೆ ಆಸ್ಥಾನದಲ್ಲಿ, ಒಂದು ರೀತಿಯ ಕೃತಕ ಕನ್ನಡ ಮಾತನಾಡಿರಬಹುದು. ನಾನಿದನ್ನ ನಮ್ಮ ಮೈಸೂರು ಮಹರಾಜರಲ್ಲಿ ಗಮನಿಸಿದ್ದೆ. ಗಿರೀಶ್ **ಬಿಜ್ಜಳನಲ್ಲಿ** ಇದನ್ನ ತುಂಬ ಚೆನ್ನಾಗಿ ಬಳಸುತ್ತಾರೆ. **ಬಸವಣ್ಣ** ನೋಡಿ, ಬ್ರಾಹ್ಮಣನಾಗಿ ಬಂದವನು, ಸಂಸ್ಕಾರ ಗಿಂಸ್ಕಾರಗಳೆಲ್ಲ ಬಹಳ ಸಹಜವಾಗಿದ್ದವನು. ಅವನ ಭಾಷೆಯಲ್ಲಿ ಅದು ಕಾಣುತ್ತದೆ. ಯುರೋಪಿಯನ್ ನಾಟಕಗಳಲ್ಲಿ ಇವೆಲ್ಲ ಸಾಧ್ಯವೇ ಇಲ್ಲ. ನಮ್ಮ ಮಟ್ಟಿಗೆ ಒಂದೊಂದು ಜಾತಿಗೆ ಒಂದೊಂದು ಭಾಷೆ, ಉಪಭಾಷೆ ಇರುತ್ತದೆ.

ಗಿರೀಶ್ ಕಾರ್ನಾಡ್ : ಅದೇ. ಜಾತಿ ಬೇಧ ತೊಡೆಯಬೇಕು, ನಾವೆಲ್ಲ ಒಂದಾಗಬೇಕು ಅನ್ನುತ್ತೇವೆ. ಬಾಯಿ ತೆಗೆದರೆ ಅವರವರ ಜಾತಿ ಹೊರಬರುತ್ತದೆ. ಇವ ಬ್ರಾಹ್ಮಣ, ಇವ ಲಿಂಗಾಯಿತ, ಇವ ಇಂತಹವನು ಇತ್ಯಾದಿ. you know every one is born in a language. ಆದ್ದರಿಂದ ಭಾಷೆ ಬಿಡದೆ ಜಾತಿ ಬಿಡಲಿಕ್ಕೆ ಸಾಧ್ಯವೇ ಎನ್ನುವುದು ಸಮಸ್ಯೆ. ಇದೇ ಸಮಸ್ಯೆ ಕಾಯಕಕ್ಕೆ ಕೂಡಾ ಸಲ್ಲುತ್ತದೆ. ಸಾಮಾಜಿಕವಾಗಿ ನಮಲ್ಲಿ ಕಸುಬು ಮತ್ತು ಜಾತಿ ಎಷ್ಟೊಂದು ಹೆಣೆದುಕೊಂಡು ಬಿಟ್ಟಿದೆ ಎಂದರೆ ...... ಒಬ್ಬ ಕ್ಷೌರಿಕ ಅಂದಾಗ, ಅವನ ಜಾತಿಯ ಬಗ್ಗೆ ಹೇಳುತ್ತಿದ್ದೇವೋ ಅವನ ಉದ್ಯೋಗದ ಬಗ್ಗೆ ಹೇಳುತ್ತಿದ್ದೇವೋ ಎಂದು ವ್ಯತ್ಯಾಸ ಮಾಡಲಿಕ್ಕೆ ಕಷ್ಟವಾಗಿ ಬಿಡುತ್ತದೆ. ಹಾಗಾಗಿ ಶರಣರು, ಕಾಯಕವನ್ನ ಎತ್ತಿ ಹಿಡಿದು ಜಾತಿಗಳನ್ನು ಬಿಡಬೇಕು ಅಂದಾಗ ಒಂದು ಸಾಂಸ್ಕೃತಿಕ ದ್ವಂದ್ವ ಶುರುವಾಗುತ್ತದೆ.

ಅನಂತಮೂರ್ತಿ : ಬಸವಣ್ಣನ ಕ್ರಾಂತಿಕಾರತೆ ಇರುವುದು ಇಲ್ಲಿಯೇ. ನೀನು ಒಮ್ಮೆ ಶರಣನಾದರೆ ಶರಣನ ಸ್ಥಿತಿಯಲ್ಲಿ ನಿನ್ನ ಜಾತಿ ತಿಳಿಯುವುದಿಲ್ಲ, ಆದ್ದರಿಂದ ಜಾತಿಯ ಕಸುಬಿನಲ್ಲಿದ್ದೂ ಜಾತಿಯವನಲ್ಲವಾಗಬಹುದು ಅನ್ನುತ್ತಾನೆ ಬಸವಣ್ಣ. ಇದು ಚಾರಿತ್ರಿಕವಾಗಿ ಗಮನಿಸಬೇಕಾದ ಅಂಶ. ಈ ಹೊತ್ತಿನ ಮಾರ್ಕ್ಸ್‌ವಾದಿಗಳು ಇದೇ ಮಾತನ್ನ, ಇದಕ್ಕೆ ವಿರುದ್ಧವಾದ ರೀತಿಯಲ್ಲಿ ಹೇಳುತ್ತಾರೆ. ಮೊದಲು ಉತ್ಪಾದನಾ ಸಂಬಂಧಗಳು ಬದಲಾಗಲಿ, ಅದರ ಮೂಲಕ ವ್ಯಕ್ತಿಗತ ಸಂಬಂಧ ಬದಲಾಗುತ್ತದೆ, ಕ್ರಾಂತಿಯಾಗುತ್ತದೆ ಅನ್ನುತ್ತಾರೆ.

ಮಾರ್ಕ್ಸ್‌ವಾದಿಗಳದ್ದು ಒಂದು ಬಗೆಯಾದರೆ, ಗಾಂಧಿ ಟಾಲ್‌ಸ್ಟಾಯ್ ಬಸವಣ್ಣ ಮುಂತಾದವರದ್ದು ಮತ್ತೊಂದು ಬಗೆ. ಇವರು ಮೊದಲು ಹೃದಯವನ್ನು ಬದಲಿಸು, ಅನಂತರ ಉತ್ಪಾದನಾ ಸಂಬಂಧಗಳು ತಾನೇ ಬದಲಾಗುತ್ತವೆ ಅನ್ನುತ್ತಾರೆ.

ಪ್ರಸನ್ನ : ಗಿರೀಶರು, ನೀವು ಹೇಳುವ (ಅನಂತಮೂರ್ತಿ) ಸಾಮಾಜಿಕ ಪರಿವರ್ತನೆಯ ಸಾಂಸ್ಕೃತಿಕ ದ್ವಂದ್ವದ ಕಡೆಗೆ ನಮ್ಮ ಗಮನ ಹರಿಸುತ್ತಿದ್ದಾರೆ ಎಂದು ನನ್ನ ಅನ್ನಿಸಿಕೆ. ಅವರ ನಾಟಕದಲ್ಲಿ ಬ್ರಾಹ್ಮಣ ತಾಯಿ, ಮಗಳು ಹರಿಜನನ್ನ ಮದುವೆಯಾಗುವ ಬಗ್ಗೆ ಆತಂಕ ವ್ಯಕ್ತ ಪಡಿಸುತ್ತ ಹೀಗೆ ಹೇಳುತ್ತಾಳೆ. "ಅಯ್ಯೋ! ಅದೆಲ್ಲಾ ಸರಿ. ನನ್ನ ಮಗಳಿಗೆ ಕರ್ಪೂರದ ವಾಸನೆ ಬಂದರೇನೆ ವಾಂತಿ ಬರುತ್ತದೆ. ಅಂತಹದರಲ್ಲಿ ಸಮಗಾರರ ಮನೆಯಲ್ಲಿ ಹೇಗೆ ಬದುಕಿಯಾಳು ಅವಳು " ಅಂತಾಳೆ. ಗಿರೀಶರ ಪ್ರಕಾರ ಭಾಷೆ ಮತ್ತು ಜಾತಿ, ಕಸುಬು ಮತ್ತು ಜಾತಿ, ಸಮುದಾಯಗಳು ಮತ್ತು ಜಾತಿ ಒಂದಕ್ಕೊಂದು ಅಂಟಿಕೊಂಡಿರುವಾಗ, ಒಂದನ್ನ ಬಿಡದೆ ಇನ್ನೊಂದನ್ನ ಹೇಗೆ ಬಿಡುತ್ತೀರಿ ? ಅಂದರೆ ಸಾಮಾಜಿಕವಾಗಿ ಜಾತಿಯನ್ನ ಬಿಟ್ಟರೂ ಬಿಡಬಹುದು, ಸಾಂಸ್ಕೃತಿಕವಾಗಿ ಹೇಗೆ ಬಿಡುತ್ತೀರಿ ?

ಅನಂತಮೂರ್ತಿ : ಅದು ಬಿಜ್ಜಳ ಕೇಳೋ ಪ್ರಶ್ನೆ. ಬಸವ, " ಇದು ಯಾವುದೂ ನಿಜವಲ್ಲ. ಇದನ್ನ ನೀವು ಮೀರಬಹುದು" ಅಂತಾನೆ. ಇದನ್ನೆ ನಾನು ಭಕ್ತಿ ಎನ್ನುತ್ತೀನಿ. ಭಕ್ತಿ ಎಲ್ಲವನ್ನೂ ಕರಗಿಸಿಬಿಡುತ್ತದೆ ಎಂದು ಭಕ್ತರು ನಂಬುತ್ತಾರೆ.

ಗಿರೀಶ್ ಕಾರ್ನಾಡ್ : **ತಲೆದಂಡದ** ಕಡೆಯಲ್ಲಿ ನಾನೊಂದು ದೃಶ್ಯ ಬರೆದಿದ್ದೇನೆ. ಕೆಳಜಾತಿಯ ಕೆಲಸದ ಹುಡುಗನೊಬ್ಬನನ್ನ ತನ್ನ ಹೆಗಲ ಮೇಲೆ ಏರಿಸಿಕೊಂಡು ಬಿಜ್ಜಳ, ಹುಡುಗನ ಕಣ್ಣಿಂದ ನಡೆಯುತ್ತಿರುವುದನ್ನು ಗ್ರಹಿಸಲು ಪ್ರಯತ್ನಿಸುತ್ತಾನೆ. ಬಸವಣ್ಣ ಬಂದನಾ, ಬಸವಣ್ಣ ಬಂದನಾ, ಹೇಳು ಅಂತ ಕೇಳುತ್ತಾ ಇರುತ್ತಾನೆ. ಈ ದೃಶ್ಯದಲ್ಲಿ ನಾನು ಸಾಧಿಸಲು ಹೊರಟಿದ್ದು, ನೀವು (ಅನಂತಮೂರ್ತಿ) ಹೇಳುತ್ತಿರುವ ಸ್ಥಿತಿಯನ್ನೇ. ರಾಜನ ಹೆಗಲಮೇಲೆ ಕೆಳಜಾತಿಯವನು ಏರಿದ ಅನ್ನುವ ಸಾಮಾನ್ಯ

ರಾಜಕೀಯ ಅರ್ಥವಷ್ಟೇ ನನಗೆ ಮುಖ್ಯವಲ್ಲ. ಬಸವಣ್ಣ ಬರಬೇಕಾಗಿರುವುದು ಬಿಜ್ಜಳನ ಬಿಡುಗಡೆಗಾಗಿ. ಹಾಗಾಗಿ ಅಲ್ಲಿ ಎಷ್ಟು ಜನ ಇದ್ದಾರೆ, ಏನು ಆಗ್ತಾ ಇದೆ, ಬಸವಣ್ಣ ಯಶಸ್ವಿ ಆಗಬಲ್ಲನೇ, ಎನ್ನುವ ಎಲ್ಲಾ ಸಂಗತಿಗಳೂ ಬಿಜ್ಜಳನ ಬಿಡುಗಡೆಗೆ ಮುಖ್ಯವಾದುವುಗಳೇ. ಅದನ್ನವನು, ಹಗಲ ಮೇಲೆ ಹೊತ್ತ ಕೆಳಜಾತಿಯ ಹುಡುಗನಿಂದ ತಿಳಿಯುವುದು ಕೂಡಾ ಮುಖ್ಯವಾದದ್ದು. Not just politically.....

ನನ್ನ ನಾಟಕ ನೋಡಿದ ಎಚ್. ವೈ . ಶಾರದಾಪ್ರಸಾದ್ **ತಲೆದಂಡ**ದಲ್ಲಿ ರಾಜಕೀಯ ಚೆನ್ನಾಗಿ ಮೂಡಿಬಂದಿದೆ ಎಂದರು. ಇಂದಿರಾಗಾಂಧಿಯವರ ಬಲಗೈಯಾಗಿದ್ದು, ರಾಜಕೀಯದಲ್ಲಿ ನುರಿತ ಶಾರದಾಪ್ರಸಾದ್ ಹೀಗೆ ಹೇಳಿದರು ಅಂದಮೇಲೆ ನನಗೂ ನಂಬಬೇಕು ಅನ್ನಿಸಿತು. ಶಾರದಾ ಪ್ರಸಾದರು ಅಲ್ಕಾಜಿಯವರ ಪ್ರದರ್ಶನವನ್ನ ನೋಡಿ ಹೇಳಿದ ಮತ್ತೊಂದು ಮಾತು ಕುತೂಹಲಕಾರಿಯಾಗಿದೆ. ಅಲ್ಕಾಜಿಯವರಿಗೆ ನಾಟಕದ betraya ಅರ್ಥವಾಗಲಿಲ್ಲ ಅಂದರು.

ಅನಂತಮೂರ್ತಿ : **ತಲೆದಂಡ** ನಾಟಕವನ್ನ ಮೆಚ್ಚಿಕೊಳ್ಳುತ್ತಲೇ, ನನಗೆ ಆ ನಾಟಕದಲ್ಲಿ ಅರ್ಥವಾಗದ ಕೆಲವು ವಿಷಯಗಳು ಉಳಿದುಬಿಟ್ಟಿದೆ ಎಂದು ಹೇಳಬೇಕಾಗುತ್ತದೆ. ಉದಾಹರಣೆಗೆ **ತಲೆದಂಡ**ದ ಎರಡು ಮುಖ್ಯ ಪಾತ್ರಗಳು ಒಂದು ರೀತಿಯಲ್ಲಿ ವಿರೋಧಿಗಳು. ಆದರೆ ಇಬ್ಬರೂ ಒಳ್ಳೆಯ ಪಾತ್ರಗಳೇ. ಬಿಜ್ಜಳನೂ ಕೆಟ್ಟವನಲ್ಲ, ಬಸವಣ್ಣನೂ ಕೆಟ್ಟವನಲ್ಲ. ಹಾಗಾಗಿ ಕೆಟ್ಟತನವನ್ನ ಆಚೆ ಹಾಕ್ತೀರಿ ನೀವು. ಜಗದೇವನಲ್ಲಿ ತರ್ತೀರಿ. ಜಗದೇವನಲ್ಲಿರುವ ಕೆಟ್ಟತನ ಅಷ್ಟೊಂದು Convincing ಆಗಿ ಬಂದಿಲ್ಲ. ಅವನು ಕೆಟ್ಟವನೋ ಅಥವಾ ದುಷ್ಟನೋ ? ಜಗದೇವ ಬೇಕಂತಲೇ ದುಷ್ಟತನವನ್ನು ಆವಿರ್ಭವಿಸಿಕೊಳ್ಳುತ್ತಾನೆ ತನ್ನಲ್ಲಿ. ಹಟ ಮಾಡಿ ಬಿಜ್ಜಳನನ್ನು ಕೊಲ್ಲುತ್ತಾನೆ. ಹೆಂಡತಿಯ ಹತ್ತಿರ ದುಷ್ಟತನ ಮಾಡುತ್ತಾನೆ.

ಪ್ರಾಯಶಃ ಎಲ್ಲ ಮಹಾನ್ ಚಳುವಳಿಗಳಲ್ಲೂ ಈ ರೀತಿಯ ಅತಿವಾದಿಗಳು ಹುಟ್ಟಿಕೊಂಡು ಬಿಡುತ್ತಾರೆ ಅಂತ ಕಾಣುತ್ತದೆ. ಮಾರ್ಕ್ಸ್‌ವಾದಿಗಳ ನಡುವಿನಿಂದ ನಕ್ಸಲ್‌ವಾದಿಗಳು ಹುಟ್ಟಿಕೊಂಡ ಹಾಗೆ.

ಪ್ರಸನ್ನ : ಯಾವುದೇ ಚಳುವಳಿಗಳ ಕಾರ್ಯಕರ್ತನಿರಲಿ, ಆತ ಬೇಕೆಂದೇ ದುಷ್ಟತನವನ್ನ ಆವಿರ್ಭವಿಸಿಕೊಳ್ಳುತ್ತಾನೆ ಎನ್ನುವುದನ್ನು ನಾನು ಸಂಪೂರ್ಣ ಒಪ್ಪಲಾರೆ. ನೀವು ಕೆಟ್ಟತನ ದುಷ್ಟತನ ಬೇರೆ ಮಾಡಿ ಮಾತನಾಡಿದಿರಿ. ಆ ಅರ್ಥದಲ್ಲಿ ದುಷ್ಟತನವನ್ನು fascism ಎಂದು ಕರೆಯಬಹುದು. fascism is not political activism. Political activism ಕಾಣೆಯಾದಾಗ ಮಾತ್ರ fascism ಕಂಡು ಬರುತ್ತದೆ. ನಕ್ಸಲೀಯರನ್ನ ದುಷ್ಟರು ಎಂದು ಕರೆಯಲಾರೆ. ಅತಿವಾದಿಗಳು ಎಂದು ಕರೆಯಬಲ್ಲೆ.

ಗಿರೀಶ್ ಕಾರ್ನಾಡ್ : ತಲೆದಂಡದಲ್ಲಿ ಯಾವುದೇ ಒಂದು ವ್ಯಕ್ತಿ ಅಥವಾ ಪಾತ್ರವನ್ನ fascist ಎಂದು ಕರೆಯಬಹುದಾದರೆ, ಅದು **ಸೋವಿದೇವ**ನನ್ನ ಹೊರತು ಜಗದೇವನನ್ನಲ್ಲ.

ಪ್ರಸನ್ನ : ತಲೆದಂಡದ **ಜಗದೇವ** ಜೀವ ವಿರೋದಿ. ಸಾಯುತ್ತಾ ಬಿದ್ದಿರುವ ತಂದೆಯನ್ನು ಕಡೆಗಣಿಸುತ್ತಾನೆ. ಹೆಂಡತಿಯನ್ನು ಬೇಕೆಂದೇ ಗೋಳು ಹೊಯ್ಯುಕೊಳ್ಳುತ್ತಾನೆ. ಬಿಜ್ಜಳನನ್ನು ವಿನಾ ಕಾರಣ ಕೊಲ್ಲುತ್ತಾನೆ. ಜಗದೇವನನ್ನು ಜೀವವಿರೋಧಿಯನ್ನಾಗಿ ಮಾಡಿ, ಅತಿವಾದಿ

ಕಾರ್ಯಕರ್ತರುಗಳನ್ನು ಜೀವವಿರೋಧಿಗಳು ಎಂದು ತಾಳೆ ಹಾಕುತ್ತಿದ್ದಿರೇನೋ ಎಂದು ನನಗೆ ಅನುಮಾನವಿದೆ. ರಾಜಕೀಯ ಕಾರ್ಯಕರ್ತರುಗಳು, ಅದರಲ್ಲೂ ಅತಿವಾದಿಗಳು romantic ಗಳು.

ಗಿರೀಶ್ ಕಾರ್ನಾಡ್ : ಇಲ್ಲ, abstract ಆದ ವಾದಗಳ ಬೆನ್ನು ಹತ್ತಿದವರಿಗೆ ಜೀವ ವಿರೋಧಿಯಾಗುವ ಅಪಾಯ ಇದ್ದೇ ಇರುತ್ತದೆ. ಮಹಾತ್ಮಾ ಗಾಂಧಿಯನ್ನೇ ಜೀವ ವಿರೋಧಿ ಎಂದು ಕರೆದವರಿದ್ದಾರೆ. ಆತ ಹೆಂಡತಿಯ ಜೊತೆ ಮಲಗಿಕೊಳ್ಳುವುದಿಲ್ಲ ಎಂದು ಹೇಳಿದಾಗ, ಆಕೆಗೆ ಏನನ್ನಿಸಿರಬಹುದು ಎನ್ನುವ ಪ್ರಶ್ನೆಯನ್ನ ಅನೇಕ ಪಾಶ್ಚಿಮಾತ್ಯರು ಎತ್ತಿದ್ದಾರೆ. abstract ವಿಚಾರಗಳ ಮೋಹ ಅತಿಯಾದರೆ, ಜೀವ ತೃಣವಾಗಿ ಕಾಣುತ್ತದೆ.

ಜಗದೇವನಿಗ? ಶರಣನಾಗುವುದೆಂದರೆ ಬ್ರಹ್ಮಚರ್ಯೆ ಪಾಲಿಸುವುದು ಎನ್ನುವ ಭ್ರಮೆಯಿದೆ. ಬಸವಣ್ಣ ಬ್ರಹ್ಮಚಾರಿಯಲ್ಲ. ಬ್ರಹ್ಮಚರ್ಯವನ್ನ ಬೋಧಿಸಲೂ ಇಲ್ಲ. ಪಂಜಾಬಿನ ಆತಂಕವಾದಿಗಳ ಹಲವು ದೌರ್ಬಲ್ಯಗಳು ಜಗದೇವನಲ್ಲೂ ಇದೆ. ಹೆಣ್ಣುಮಕ್ಕಳನ್ನು ಕೀಳಾಗಿ ಕಾಣುವುದು, ಬೆರಳು ಕೊಯ್ದುಕೊಂಡು ರಕ್ತ ಹಚ್ಚಿಕೊಳ್ಳುವುದು, ಬ್ರಹ್ಮಚರ್ಯೆ ಪಾಲಿಸುವುದು, ಹೆಂಡತಿಯ ಜೊತೆ ಮಾತನಾಡದೇ ಇರುವುದು, ಇದೆಲ್ಲ ಒಂದು ರೀತಿಯ Standard Pattern ಗಳು. ಗಂಡಸುತನ ಶ್ರೇಷ್ಠ. ಹೆಣ್ಣು ಗಂಡಸನ್ನ ಕೆಡಿಸಲಿಕ್ಕೆ ಇರುವ ವಸ್ತು..... ಇತ್ಯಾದಿ.

ಈಗ ಮತ್ತೆ ಬ್ರಹ್ಮಚರ್ಯದ ಗದ್ದಲ ಎದ್ದಿದೆ. (ನಗು)

ಅನಂತಮೂರ್ತಿ : ಹೌದಾ ?

ಗಿರೀಶ್ ಕಾರ್ನಾಡ್ : ಹೌದು ಅದೇ ಎಂ. ಎಂ. ಕಲಬುರ್ಗಿ ಅವರ ಬಗ್ಗೆ ಎದ್ದ ಗದ್ದಲ.

ಅನಂತಮೂರ್ತಿ : ನೀಲಾಂಬಿಕೆಯ ಬಗ್ಗೆ....

ಹೆಚ್. ಜಿ ಸೋಮಶೇಖರ್ : ಪ್ರಸಾದದಿಂದ ಹುಟ್ಟಿದವನು ಮನುಷ್ಯ ಸಂಬಂಧದಿಂದ ಹುಟ್ಟಿದ ಎಂದು ಕಲ್ಬುರ್ಗಿಯವರು ಹೇಳಿದರು ಎಂದು ಆತನ ಮೇಲೆ ಸಿಟ್ಟು.

ಗಿರೀಶ್ ಕಾರ್ನಾಡ್ : ನೀಲಾಂಬಿಕೆಯ ಬಗ್ಗೆ ಇನ್ನೊಂದು ಸುಂದರವಾದ ಕಥೆಯಿದೆ. ಶಿವ ಬಸವಣ್ಣನನ್ನು ಪರೀಕ್ಷಿಸಲಿಕ್ಕಾಗಿ ಜೋಗಿಯ ರೂಪದಲ್ಲಿ ಬರುತ್ತಾನೆ. ಬಂದು, ನನಗೊಂದು ಹೆಣ್ಣು ಬೇಕು, ಕೊಡು ಎನ್ನುತ್ತಾನೆ. ಬಸವಣ್ಣ ಹೆಣ್ಣಿಗಾಗಿ ಎಲ್ಲ ಕಡೆಗೂ ಹುಡುಕುತ್ತಾನೆ. ಆದರೆ ಯಾರೂ ಲಭ್ಯವಿರುವುದಿಲ್ಲ, ವೇಶ್ಯೆಯರೂ ಯಾರೂ ಕೂಡಾ! (ನಗು) ಜಂಗಮ ಕೇಳಿದಾಗ ಇಲ್ಲ ಅನ್ನಲಾರದ ಬಸವಣ್ಣ ತನ್ನ ಎರಡನೆಯ ಹೆಂಡತಿಯಾದ ನೀಲಾಂಬಿಕೆಯನ್ನೇ ಕೊಟ್ಟುಬಿಡುತ್ತಾನೆ. ಶಿವ ಪ್ರಸನ್ನನಾಗಿ ನೀಲಾಂಬಿಕೆಯನ್ನ ತಿರುಗಿ ಕೊಡುತ್ತಾನೆ. ಆದರೆ ಬಸವಣ್ಣ ನೀನು ನನ್ನ ತಾಯಿಯ ಹಾಗೆ, ನಿನ್ನ ದೆಸೆಯಿಂದ ನನಗೆ ಶಿವ ಪ್ರತ್ಯಕ್ಷನಾದ, ನಿನ್ನನ್ನ ಹೆಂಡತಿಯಾಗಿ ಹೇಗೆ ನೋಡಲಿ? ಅನ್ನುತ್ತಾನೆ.

ಕಲ್ಬುರ್ಗಿಯವರು ನೀಲಾಂಬಿಕೆಯ ವಚನಗಳನ್ನ ಅರ್ಥೈಸುತ್ತ, ಆಕೆಯ ಧ್ವನಿಯಲ್ಲಿ ಕಹಿಯನ್ನ ಗುರುತಿಸುತ್ತಾರೆ. ಕಲ್ಬುರ್ಗಿಯವರು ಹಾಗೆ ಮಾಡುವ ಮೂಲಕ ನೀಲಾಂಬಿಕೆಗೂ ಬಸವಣ್ಣನವರಿಗೂ ದೈಹಿಕ ಸಂಬಂಧ ಗುರುತಿಸಿದ್ದಾರೆ ಎಂಬ ಕಾರಣಕ್ಕೆ ಗದ್ದಲ ಎದ್ದಿತ್ತು.

ಅನಂತಮೂರ್ತಿ : ಬ್ಲೇಕ್‌ನಿಗೆ, ತನ್ನ ತಮ್ಮ ಮೃತನಾದಾಗ, ಅವನು ಸ್ವರ್ಗಕ್ಕೆ ಏರಿದ ಹಾಗೆಯೂ, ಚಪ್ಪಾಳೆ ತಟ್ಟಿಕೊಂಡು ಏರಿದ ಹಾಗೆಯೂ ಕಂಡಿತಂತೆ. ಬ್ಲೇಕ್‌ನನ್ನು ಕೇಳಿದರೆ, ಹೌದು

ನಿಜವಾಗಿ ಹಾಗೆ ಕಂಡೆ ಎನ್ನುತ್ತಿದ್ದನಂತೆ. ಇವು ಬರೇ ಪ್ರತಿಮೆಗಳು ಮಾತ್ರವಲ್ಲ, ಸಾಕ್ಷಾತ್ಕಾರಗಳು ಅನ್ನ ಬಹುದೋ ಏನೋ. ಏಟ್ಸ್ ಒಂದು ಕಡೆ ಇದನ್ನ Literality of imagination ಅಂತಾನೆ. ಭಕ್ತಿಯಲ್ಲಿ ಈ ಒಂದು ಅಂಶ ಇದೆ. ಅಕ್ಕ ಮಹಾದೇವಿಗೆ ಯಾವುದೂ ಪ್ರತಿಮೆಯಲ್ಲ, ಎಲ್ಲವೂ ಸಾಕ್ಷಾತ್ಕಾರಗಳೇ.



ಪರಮಹಂಸರಿಗೆ ಕೂಡಾ ಈ ರೀತಿಯ ಸಾಕ್ಷಾತ್ಕಾರ ಸಾಧ್ಯವಾಗಿತ್ತು. ಅವರು ಒಂದು ಸಾರಿ, ಕಾಳಿಪೂಜೆ ಮಾಡಿ ದೇವರಿಗೆ ಪ್ರಸಾದ ನೀಡುತ್ತಾರೆ. ಕಾಳಿಯ ಪ್ರತಿಮೆ ಪ್ರಸಾದ ತಿನ್ನುವುದಿಲ್ಲ. ಪರಮ ಹಂಸರು ದೊಡ್ಡ ಗದ್ದಲ ಮಾಡುತ್ತಾರೆ. ಅಳುತ್ತಾರೆ. ಆಗ ಒಂದು ಕಪ್ಪು ಬೆಕ್ಕು ಬಂದು ಪ್ರಸಾದ ತಿಂದುಕೊಂಡು ಹೋಗುತ್ತದೆ. ಪರಮ ಹಂಸರು, ಕಪ್ಪು ಬೆಕ್ಕೇ ಕಾಳಿ ಎಂದು ತಿಳಿದು ಸಂತೋಷ ಪಡುತ್ತಾರೆ. (ನಗು)

ಗಿರೀಶ್ ಕಾರ್ನಾಡ್ : ಪರಮ ಹಂಸರಿಗೆ ಕಪ್ಪು ಬೆಕ್ಕು ಕಾಳಿಯೇ.

ಅನಂತಮೂರ್ತಿ : ಇದೊಂದು ಅದ್ಭುತವಾದ ಸಂಗತಿ. ಇದು ಬರೀ ಹಾಸ್ಯಾಸ್ಪದ ಅಲ್ಲ. ಮನುಷ್ಯನ ಮನಸ್ಸಿಗೆ ಇದು ಹೇಗೆ ಸಾಧ್ಯಾವಾಗುತ್ತೆ ಎನ್ನುವುದೇ ನನಗೆ ಅರ್ಥವಾಗುವುದಿಲ್ಲ. ನನಗೆ ಸಾಧ್ಯವಿಲ್ಲ.

ಪ್ರಸನ್ನ : ನಿಮ್ಮ ವಾರಿಗೆಯ ಹಿಂದೀ ಲೇಖಕ **ನಿರ್ಮಲ ವರ್ಮ** ಹೇಳಿಕೊಳ್ಳುವುದನ್ನ ಕೇಳಿದ್ದೀರಲ್ಲ ನೀವು. ಅವರು ಹಾಗೂ ಆತನ ಸ್ನೇಹಿತರೊಬ್ಬರು **ಮಥುರಾಕ್ಕೆ** ಹೋಗಿದ್ದಾಗ, ಮಥುರಾದ ಬೀದಿಗಳಲ್ಲಿ ದಾರಿ ತಪ್ಪಿ ಬಿಟ್ಟರಂತೆ. ಆಗ ಬಾಲಕೃಷ್ಣ ಬಂದು ಬಸ್‌ಸ್ಟ್ಯಾಂಡ್ ತೋರಿಸಿ ಹೋದನಂತೆ. (ನಗು) ಪರಮಹಂಸರವರೆಗೂ ಪ್ರತಿಮೆ ಸಾಕ್ಷಾತ್ಕಾರವಾಗುವ ಮಾತನ್ನ ಒಪ್ಪಿಕೊಳ್ಳಬಹುದೋ ಏನೋ **ನಿರ್ಮಲ ವರ್ಮ** ಅವರಿಗೆ ಮುದ್ದುಕೃಷ್ಣ ಹಾದಿ ತೋರಿಸಿದ ಎಂಬ ಮಾತನ್ನು ಒಪ್ಪಿಕೊಳ್ಳುವುದು ಕೊಂಚ ಕಷ್ಟ.

ಅನಂತಮೂರ್ತಿ : ಹಿಂದೆಯೂ ಹೀಗೆಯೇ ಇತ್ತು ಪ್ರಸನ್ನ. ಬ್ಲೇಕ್ ನ್ಯೂಟನ್ನನನ್ನ ತುಂಬಾ ಬಯ್ತಾನೆ. ಈ ಶನಿ ಬಂದು ನಮ್ಮನ್ನೆಲ್ಲಾ ಹಾಳು ಮಾಡಿದ ಅನ್ನುತ್ತಾನೆ. ಏಟ್ಸ್ ಕೂಡಾ ಆಧುನಿಕ ಯುಗ ನಂಬುವ ಶಕ್ತಿಯನ್ನೇ ಕಳೆದುಬಿಟ್ಟಿದೆ ಎಂದು ಹಳಹಳಿಸುತ್ತಾನೆ. ಆದರೆ ಏಟ್ಸ್‌ನಿಗೆ ನಿಮಗಿರುವಂತೆ ಅನುಮಾನವಿತ್ತು. ಅವನು ತನ್ನ ಅನುಮಾನದ ಬಗ್ಗೆ ಸುಖಪಡುತ್ತಿರಲಿಲ್ಲ ಅಷ್ಟೆ.

ಗಿರೀಶ್ ಕಾರ್ನಾಡ್ : ಹೌದು, Torture of faith. ನಮ್ಮ ನಂಬಿಕೆಗಳನ್ನು ಉಳಿಸಿಕೊಳ್ಳುವುದೇ ಒಂದು ದೊಡ್ಡ Torture.

ಒಂದು ಕತೆಯಿದೆ. **ಗುರು - ಶಿಷ್ಯರ** ಕತೆ . ಶಿಷ್ಯನಿಗೆ ಸದೇಹವಾಗಿ ವೈಕುಂಠ ಸೇರಬೇಕು ಎನ್ನುವ ಆಸೆ ಆಗುತ್ತದೆ. ಗುರುವನ್ನು ಕೇಳುತ್ತಾನೆ. ಗುರು, ನಾಲ್ಕು ರಸ್ತೆ ಸೇರುವ ಒಂದು ಜಾಗ ತೋರಿಸಿ, 'ಇಲ್ಲಿ ನೀನು ಹತ್ತು ವರ್ಷ ಕೂತುಕೊಂಡಿದ್ರೆ, ಸದೇಹವಾಗಿ ವೈಕುಂಠಕ್ಕೆ ಹೊಗುತ್ತೀಯಾ' ಎಂದು ಹೇಳಿ ಹೋಗಿಬಿಡ್ತಾನೆ. ಹತ್ತು ವರ್ಷ ಎಲ್ಲೆಲ್ಲೋ ಸುತ್ತು ಹಾಕಿಕೊಂಡು ಗುರು, ತಿರುಗಿ ಅದೇ ಸ್ಥಳಕ್ಕೆ ಬಂದು ನೋಡುತ್ತಾನೆ - ಶಿಷ್ಯ, ಇನ್ನೂ ಅಲ್ಲೇ, ನಾಲ್ಕು ರಸ್ತೆ ಸೇರುವಲ್ಲೇ ಕೂತಿರುತ್ತಾನೆ. ಗುರುವಿಗೆ ಆ ದೃಶ್ಯ ಕಂಡು ಬಹಳ ದುಃಖವಾಗುತ್ತದೆ. 'ಅರೆ, ಇವನನ್ನು ಹುಚ್ಚನನ್ನಾಗಿ ಮಾಡಿಬಿಟ್ಟೆನಲ್ಲಾ' ಅನ್ನಿಸಿ, ತನ್ನ ತಪ್ಪಿಗೆ ಕ್ಷಮೆ ಕೇಳಬೇಕೆಂದು ಅವನತ್ತ ಹೊರಡುತ್ತಾನೆ. ಆ ಕ್ಷಣಕ್ಕೆ ವೈಕುಂಠದಿಂದ ವಿಮಾನವೊಂದು ಇಳಿದು ಬಂದು, ಶಿಷ್ಯನನ್ನೆತ್ತಿಕೊಂಡು ಹೊರಡಲು ಸಿದ್ಧವಾಗುತ್ತದೆ. ಅದನ್ನು ನೋಡಿದ ಗುರು, ಶಿಷ್ಯನ ಕಾಲು ಹಿಡಿದುಕೊಂಡು ತಾನೂ ಸದೇಹವಾಗಿ ವೈಕುಂಠ ಸೇರಬೇಕೆಂದು ಓಡುತ್ತಾನೆ (ದೊಡ್ಡ ನಗು)

ಅನಂತಮೂರ್ತಿ : ಸ್ವಲ್ಪ ವಿಷಯ ಪಲ್ಲಟಮಾಡಬಹುದು ಅಂತ ಕಾಣುತ್ತೆ. ಗಿರೀಶರ **ವಿಮರ್ಶಾ** ಲೇಖನಗಳ ಬಗ್ಗೆ ಪ್ರಸ್ತಾಪ ಮಾಡಬೇಕು. ಹೆಚ್ಚಿನವರ ವಿಮರ್ಶೆ ಕೇವಲ Judgemental ಆಗ್ಬಿಡುತ್ತೆ.

ಗಿರೀಶ್ ಕಡಿಮೆ ಬರೆದಿದ್ರೂನೂ ಅವರಿಗೆ ಕೃತಿಯೊಳಗಿನ ಸೃಜನಾತ್ಮಕ ಪ್ರಕ್ರಿಯೆಯನ್ನು ಗುರುತಿಸಲಿಕ್ಕೆ ಸಾಧ್ಯವಾಗಿದೆ. ರುಜುವಾತುವಿನಲ್ಲಿ ಈ ಹಿಂದೆ ಪ್ರಕಟವಾಗಿತ್ತಲ್ಲ **ಹಿಟ್ಟಿನ ಕೋಳಿ** ಅನ್ನುವ ಲೇಖನ......

ಗಿರೀಶ್ ಕಾರ್ನಾಡ್ : ಹೌದು, ಆ ಲೇಖನ ನನ್ನ ನಾಟಕದ ಬಗ್ಗೆ ಅಲ್ಲಾ ಎಂದು ತೋರಿಸಲಿಕ್ಕೆ **ಹಿಟ್ಟಿನ ಕೋಳಿ** ಎಂದು ಕರೆದಿದ್ದೆ.

ಅನಂತಮೂರ್ತಿ : ಆ ಲೇಖನ ತುಂಬಾ ಚೆನ್ನಾಗಿದೆ. ಹಾಗೇನೇ, **ಕಾಕನಕೋಟೆ** ನಾಟಕದ ಬಗ್ಗೆ ನೀವು ಬರೆದಿರೋ ವಿಮರ್ಶೆ. ನೀವು ಇನ್ನೊಂದು ಲೇಖನ ಬರೆದಿದ್ದೀರಂತೆ, ನಾನು ಓದಿಲ್ಲ.

ಗಿರೀಶ್ ಕಾರ್ನಾಡ್ : ಶ್ರೀರಂಗರ **ಹರಿಜನ್ವಾರ** ಕುರಿತ ಲೇಖನವದು. **ಮನ್ವಂತರ**ದಲ್ಲಿ ಬಂದಿದೆ.

ಪ್ರಸನ್ನ : ನನಗೊಂದು ಪ್ರಶ್ನೆ ಕಾಡುತ್ತದೆ. ಗಿರೀಶರು, ಕನ್ನಡದಲ್ಲಿ ಇಷ್ಟೆಲ್ಲಾ ನಾಟಕ ಬರೆದಿದ್ದಾರೆ, ಇತರ ಕನ್ನಡ ಲೇಖಕರ ಕೃತಿಗಳ ವಿಮರ್ಶೆಮಾಡಿದ್ದಾರೆ, ಸಂವಾದ ನಡೆಸಿದ್ದಾರೆ. ಆದರೂ, ಎಲ್ಲೋ ಕನ್ನಡದ ಜಾಯಮಾನದಿಂದ ಹೊರಗೆ ಉಳಿದು ಬಿಡುತ್ತಾರೆ. infact, he dosn't want to be an insider in kannada. ಚಂಪಾ, ಈ ಮಾತನ್ನು ಅತಿರೇಕಕ್ಕೆ ಒಯ್ದು, ಗಿರೀಶರು ಕನ್ನಡದಲ್ಲಿ ಬರೆಯುವುದೇ ಇಲ್ಲ ಅನ್ನುತ್ತಾರೆ.

ಗಿರೀಶ್ ಕಾರ್ನಾಡ್ : ನನ್ನ ತಲೆಮಾರಿನ **ಅನಂತಮೂರ್ತಿ, ಲಂಕೇಶ್** ಅಥವಾ **ತೇಜಸ್ವಿ,** ಕನ್ನಡ ಸಂಸ್ಕೃತಿಯೊಳಗೆ involve ಆದ ಹಾಗೆ ನಾನು ಆಗಿಲ್ಲ. ಏಕೆ ಎಂದು ನನಗೆ ಗೊತ್ತಿಲ್ಲ. ಆಗೋಕೆ ಸಾಧ್ಯವೂ ಆಗಿಲ್ಲ. ಪ್ರಾಯಶಃ ಅನಂತಮೂರ್ತಿ, ಲಂಕೇಶ್ ಅವರೆಲ್ಲಾ ಯುನಿವರ್ಸಿಟಿಗಳಲ್ಲಿ ಕಳೆದರು ಅನ್ನುವುದು ಕಾರಣವಿರಬಹುದು.

ಪ್ರಸನ್ನ : ಇಲ್ಲ. ಇದು ಬರೀ ವೃತ್ತಿಯ ಸಮಸ್ಯೆ ಮಾತ್ರ ಅಲ್ಲ. ನಿಮ್ಮ ಕೃತಿಯ ಸಮಸ್ಯೆಯೂ ಹೌದು. ಕೃತಿಯ ವಸ್ತುವಿನ ಆಯ್ಕೆಯ ಸಮಸ್ಯೆಯೂ ಹೌದು. ಅನಂತಮೂರ್ತಿ, ನಿಮಗಿಂತ ಹೆಚ್ಚು westernise ಆಗಿದ್ದಾರೆ, ನಿಮಗಿಂತ ಹೆಚ್ಚು ಪರದೇಶಗಳಲ್ಲಿ ಓಡಾಡುತ್ತಾರೆ. ಆದರೂ ಅವರಿಗೆ ಹೊರಗಿನವನಾಗುವ ಸಮಸ್ಯೆ ಇಲ್ಲ.

ಗಿರೀಶ್ ಕಾರ್ನಾಡ್ : **ಯಾಯಾತಿ** ಬರೆಯುವ ತನಕ, ನಾನು ಕನ್ನಡದಲ್ಲಿ ಬರೆಯುತ್ತೇನಿ ಅಂದುಕೊಂಡಿರಲೇ ಇಲ್ಲ. ಇಂಗ್ಲಿಷ್‌ನಲ್ಲಿ ಬರೆಯುತ್ತೇನೆ, ಅಂತರರಾಷ್ಟ್ರೀಯ ಕವಿಯಾಗುತ್ತೇನೆ ಎನ್ನುವ ಆಸೆ ನನಗಿತ್ತು. (ನಗು) ಇಂಗ್ಲೆಡಿಗೆ ಹೋಗುವವರೆಗೆ, ನಾನು ತಿರುಗಿ ಬರುವುದಿಲ್ಲವೆಂದೇ ತಿಳಿದಿದ್ದೆ. ಆದರೆ ಅಲ್ಲಿ, ಬರೀ ಎಲಿಯಟ್, ಆಡೆನ್‌ಗಳನ್ನು ಓದುವ ದೇಶದಲ್ಲಿ, ನಾನು ಬರೆಯಲು ಶುರು ಮಾಡಿದಾಗ, ಇದ್ದಕ್ಕಿದ್ದಂತೆ ಕನ್ನಡ ಬಂತು. so, ಯಯಾತಿ ನಾಟಕ ಬರೆಯಲು ಕೂತಾಗ, ಅದು ಕನ್ನಡದಲ್ಲಿ ಬಂದು ಬಿಟ್ಟಿತು. Suddenly, I realised that I am condemned to my language. ಇದಕ್ಕೆ ಬಿಡುಗಡೆ ಇಲ್ಲ....

ಅನಂತಮೂರ್ತಿ : ಈ ನಿಮ್ಮ ನಿಶ್ಚಯಕ್ಕೆ **ರಾಮಾನುಜನ್** ಕಾರಣರೇನು ?

ಗಿರೀಶ್ ಕಾರ್ನಾಡ್ : ಇಲ್ಲ, ಆಗಿನ್ನೂ ರಾಮಾನುಜನ್ Influence ಆಗಿರಲಿಲ್ಲ. ಅದೂ ಅಲ್ಲದೆ ಅವರೂ ಕೂಡಾ ಆಗ ಇಂಗ್ಲಿಷಿನಲ್ಲಿ ಬರೆಯುತ್ತಿದ್ದರಲ್ಲ. ಅವರೂ ಕೂಡಾ ಅಮೇರಿಕೆಗೆ ಹೊರಟಿದ್ದರು.

ನನಗೆ ಈಗಲೂ ನಾಟಕ ಅಂದ್ರೆ ಕಂಪೆನಿ ನಾಟಕವೇ ! ಸಣ್ಣಂದಿನಿಂದಲೂ ಕಂಪನಿ ನಾಟಕ ನೋಡಿ ನೋಡಿ ಅದೇ Image ಉಳಿದುಬಿಟ್ಟಿದೆ. ಆಧುನಿಕ ನಾಟಕ ಎಂದು ಯೋಚನೆ ಮಾಡಿದರೂ, ಕಂಪೆನಿ ನಾಟಕದಿಂದಲೇ ಹೋರಟು ಬರಬೇಕು ನಾನು. ನಾಟಕ ಬರೆಯಬೇಕು ಅನ್ನುವುದೇ ನನ್ನ ಜಾಯಮಾನವಾಗಿದ್ರಿಂದ, ಹಾಗೂ ನಾನು ನೋಡಿದ ಅಷ್ಟೂ ನಾಟಕಗಳು ಕನ್ನಡದವೇ ಆಗಿದ್ದರಿಂದ, ಬುಹುಶಃ ಯಯಾತಿ ಕನ್ನಡದಲ್ಲೇ ಘಟಿಸಿರಬಹುದು. ಇಂಗ್ಲೇಂಡಿನಿಂದ ಬಂದೆ, ಬಂದ ಮೇಲೆ ಕನ್ನಡದಲ್ಲಿ **ತುಘಲಕ್** ಬರೆದೆ.

ನನ್ನ, outsider ಎನ್ನುವ ಭಾವನೆಗೆ, ನಾನು **ಸಾರಸ್ವತ** ಎಂಬುದೂ ಕಾರಣವಿರಬಹುದು. ಸಾರಸ್ವತರ Community ಯೆ ಹಾಗೆ. It has always remained peripheral **ಪಂಜೆ ಮಂಗೇಶರಾಯರ** ಪೀಳಿಗೆಯನ್ನು ಬಿಟ್ಟರೆ, ಉಳಿದವರೆಲ್ಲಾ ಅರ್ಧ ಮರಾಠೀ, ಅರ್ಧ ಕನ್ನಡ - ಜತೆಗೆ ಮನೆ ಮಾತು ಕೊಂಕಣಿ. ಈ ಜನಾಂಗ ಇಡಿಯಾಗಿ ಕನ್ನಡ ಚಳುವಳಿಯ ಭಾಗ ಆಗಿಯೇ ಇಲ್ಲ. ನನಗೆ ನಿಜವಾಗಿ ಕನ್ನಡ ಸಂಸ್ಕೃತಿ ಮೊದಲು ಪರಿಚಯವಾಗಿದ್ದು, **ಸಂಸ್ಕಾರದಲ್ಲಿ** Involve ಆದಾಗ. **ಸಂಸ್ಕಾರ** ಸಿನಿಮಾ ಮಾಡಬೇಕೆಂದು, ಸಂಸ್ಕಾರ ಪುಸ್ತಕ ಓದಿದ ಮೇಲೆ. ಆನಂತರವೇ ನನ್ನ ಓದು, ಒಡನಾಟ ಶುರುವಾದದ್ದು. ಧಾರವಾಡದಲ್ಲಿ ಮನೋಹರ ಗ್ರಂಥಮಾಲೆಯ ಕೆಲವರ ಪರಿಚಯವಿತ್ತಷ್ಟೆ. ಇಲ್ಲದಿದ್ದರೆ, ಮದರಾಸಿನಲ್ಲಿ ಇರ್‍ತಿದ್ದೆ ನಾನು. ಸಂಸ್ಕಾರ ನನ್ನ ಮೇಲೆ ತುಂಬ ಪರಿಣಾಮ ಬೀರಿದೆ.

ಅನಂತಮೂರ್ತಿ : ನನಗೆ ಜಾತಿ ಬಿಟ್ಟು ಮದುವೆಮಾಗುವ ಸಂದರ್ಭದಲ್ಲಿ ತುಂಬ ಕಷ್ಟವಾಯ್ತು. ಗಿರೀಶರಿಗೆ ಅವರ ತಂದೆಯ ಕಾಲದಿಂದಲೇ ಈ ರೀತಿಯ ಬಿಡುಗಡೆಗಳು ಆಗಿಹೋಗಿದ್ದವು. ನಾಳೆ, ನನ್ನ ಮಗನಿಗೆ ಏನೊಂದು ಸ್ಥಿತಿ ಸಾಧ್ಯವೋ ಅದನ್ನು ಗಿರೀಶರು ಆಗಲೇ ದಾಟಿ ಬಿಟ್ಟಿದ್ದರು.

ಗಿರೀಶ್ ಕಾರ್ನಾಡ್ : ನನ್ನ ತಾಯಿ ಒಬ್ಬ ವಿಧವೆ. ೧೯ ನೆಯ ವಯಸ್ಸಿಗೇ ಗಂಡನನ್ನು ಕಳೆದುಕೊಂಡರು. ಆಕೆ ೧೯೨೧ ರಲ್ಲಿ ವಿಧವೆಯಾದರು, ೧೯೩೧ ರಲ್ಲಿ ನನ್ನ ತಂದೆಯನ್ನು ಲಗ್ನವಾದರು. ಅವರ ಮೊದಲ ಮದುವೆಯ ಮಗ, ನನ್ನ ದೊಡ್ಡಣ್ಣ ಇದ್ದಾನೆ. ಅವನೂ ಕಾರ್ನಾಡ್ ಎಂದೇ ಕರೆದುಕೊಳ್ಳುತ್ತಾನೆ. ನಿಜವಾಗಿಯೂ ಅವನು ಗೋಕರ್ಣ ಎಂದಾಗಬೇಕು. ನನ್ನ ತಾಯಿಯ ಎರಡನೆಯ ಲಗ್ನವಾಗಿ, ನಾವೆಲ್ಲಾ ಹುಟ್ಟಿದ ಮೇಲೆ, ಅಣ್ಣತಮ್ಮಂದಿರಲ್ಲಿ ಗದ್ದಲ ಬ್ಯಾಡಾ ಅಂತ, ಅವನೂ ಕಾರ್ನಾಡ್ ಎಂದೇ ಹೇಳಿಕೊಳ್ಳಲಾರಂಭಿಸಿದ. ಬಾಲಚಂದ್ರ ರಘುನಾಥ್ ಕಾರ್ನಾಡ್ ಎಂದವನ ಹೆಸರು. ನಮ್ಮ ತಂದೆ ತೀರಿಕೊಂಡಾಗ ಒಂದು ದೊಡ್ಡ ಸಮಸ್ಯೆ ಎದುರಾಯ್ತು. ತಂದೆಯ ಚಿತಗೆ ದೊಡ್ಡಮಗ ಅಗ್ನಿ ಕೊಡಬೇಕು, ಇಲ್ಲವೇ ಸಣ್ಣವನು ಕೊಡಬೇಕು. ಸಣ್ಣವನು ಅಂದ್ರೆ ನಾನು ಕೊಡಬೇಕು. ನಾನು ಕೊಡುವುದಿಲ್ಲ ಅಂದೆ. ಯಾಕೆಂದರೆ, ನಮ್ಮ ತಂದೆಗೆ ಇದರಲ್ಲೆಲ್ಲಾ ವಿಶ್ವಾಸ ಇದ್ದಿರಲಿಲ್ಲ. ತಿಥಿ - ಗಿಥಿ ಎಲ್ಲಾ ಮಾಡೂದಿಲ್ಲ ಅಂತಿದ್ರು ಅವರು. ಆದರೆ ನಮ್ಮ ತಾಯಿಗೆ Ritual ಬೇಕಿತ್ತು. ಆಗ ದೊಡ್ಡ ಮಗ ಯಾರು ಅನ್ನುವ ಪ್ರಶ್ನೆ ಬಂತು. ಆಗ ನಾನು, ಬಾಲಚಂದ್ರನೇ ಮಾಡಲಿ ಅಂದೆ. ಪುರೋಹಿತರೆಲ್ಲಾ ಬಹಳ ಗದ್ದಲ ಎಬ್ಬಿಸಿದರು. ಪುರೋಹಿತರ ದೃಷ್ಟಿಯಲ್ಲಿ ಅಂವಾ ಮಗ ಅಲ್ಲ, ನಮ್ಮ ದೃಷ್ಟೀಲಿ ಅಂವಾ ಮಗಾ ಅಷ್ಟೇ ; ಕಾರ್ನಾಡ್ ಅಷ್ಟೇ. ಸಾರಸ್ವತ ಜನಾಂಗ ಸಾಕಷ್ಟು Urbanise ಆಗಿಬಿಟ್ಟಿದೆ. ಜಾತಿ, orthodoxy ಗಳ ಕಟ್ಟು ಸಡಿಲಾಗಿದೆ.

ಹಾಗಾಗಿ ನಾನು ಕನ್ನಡದ ಒಳಗೆ ಬಂದದ್ದು ತೀರಾ ತಡವಾಗಿ ; **ಸಂಸ್ಕಾರ** ಒಂದು ರೀತಿಯ ಕನ್ನಡ ಸಮಾಜದ ಚಿತ್ರಣವಾದರೆ, **ಕಾಡು** ಮತ್ತೊಂದು ಸಮಾಜದ ಚಿತ್ರಣ. ಅಬ್ರಾಹ್ಮಣ ಸಮಾಜ ಒಕ್ಕಲಿಗರು, ಗೌಡರು ...



ಆ ಸಿನಿಮಾ ಮಾಡುತ್ತಿದ್ದಾಗ ಕೃಷ್ಣ (ಕೃಷ್ಣ ಆಲನ ಹಳ್ಳಿ) ಎದುರಿಗೇ ಇರ್ತಿದ್ದ. ಒಂದು ದಿನ ಮೇಕಪ್ ನಡೀತಿದ್ದಾಗ ಬಂದು, ಬಸಕ್ಕ ವಿಭೂತಿ ಹಾಕ್ಕೋಬೇಕು ಅಂದ. ಆಮೇಲೆ ಶಿವಗಂಗನೂ ಹಾಕ್ಕೋಬೇಕು ಅಂದ. ನಾನು, ಇಲ್ಲ ಬಸಕ್ಕ ಯಾಕೆ ವಿಭೂತಿ ಹಾಕ್ಕೋಬೇಕು ಅಂತ ಕೇಳಿದೆ. ಅದಕ್ಕವನು - ಆಕೆ ಲಿಂಗವಂತೆ, ವೀರಶೈವಳು ಅಂದ. ನಾನಂದೆ - ಇಲ್ಲ ಕೃಷ್ಣ, clear ಆಗಿ ಹೇಳು - ಇದರಲ್ಲಿ ಯಾರು, ಎಷ್ಟು ಜನ ಲಿಂಗಾಯಿತರು, ಎಷ್ಟು ಜನ ಗೌಡರು ಅಂದ್ರೆ, ಅಂವಾ ಅಂತಾನೆ - ‘ ಒಳ್ಳೆ Charcters ಎಲ್ಲಾ ಗೌಡ್ರು ’ (ದೊಡ್ಡ ನಗು). ಆ ಕಥೆಯಲ್ಲಿ ಬರುವ, ಸೂಳೆಯಾಗಿ ಇಟ್ಟುಕೊಂಡಿರುವಾಕೆ, ರೇಪ್ ಮಾಡುವ ಶಿವಗಂಗಾ ಇವರೆಲ್ಲಾ ಲಿಂಗಾಯಿತರು, ಕೃಷ್ಣನ ಪ್ರಕಾರ. ನಾನೆಂದೆ, ‘ಇದು ನಿನ್ನ Socialogy ಇರಬಹುದು, ನಾನಿದನ್ನು Film ನಲ್ಲಿ ಹಾಕಿಕೊಳ್ಳೋದಿಲ್ಲ’ ಅಂತ. ಎಲ್ಲಾ ಪಾತ್ರಗಳನ್ನೂ ಗೌಡರನ್ನಾಗಿಯೇ ಮಾಡಿದೆ. Krishna was to some extent, simple minded in his notions.

ಅನಂತಮೂರ್ತಿ : A Part of him ......

ಗಿರೀಶ್ ಕರ್ನಾಡ್ : **ಕಾಡು** ಕಾದಂಬರಿಯ ಜಾತಿಗಳ ಒಳಸುಳಿಗಳನ್ನು ಮರೆತು ನೋಡಿದರೆ, ಆಗ ಅದರಲ್ಲಿಯೇ ಒಂದು ವರ್ಗಶ್ರೇಣಿ ಗೋಚರಿಸುತ್ತದೆ. ಉದಾ - ಚಂದ್ರೇಗೌಡನನ್ನು Attack ಮಾಡಬೇಕಾದ್ರೆ ಶಿವಗಂಗ, ಚಂದ್ರೇಗೌಡನ ಕಾಳುಕಡಿ ಸುಡುವುದಿಲ್ಲ, ಚಂದ್ರೇಗೌಡನ ಆಳು ಮಕ್ಕಳಿಗಾಗಿ ಇಟ್ಟಿರುವ ಕಾಳು ಕಡಿ ಸುಡುತ್ತಾನೆ. ಹಾಗೇನೇ, ಶಿವಗಂಗ, ಚಂದ್ರೇಗೌಡನನ್ನು Attack ಮಾಡುವುದಿಲ್ಲ, ಅವನ ಹೆಂಡತಿಯನ್ನು Attack ಮಾಡುತ್ತಾನೆ. ಆ ಕಾದಂಬರಿಯಲ್ಲಿ ಬರುವ ಬಲಾತ್ಕಾರದ ದೃಶ್ಯವನ್ನೇ ಗಮನಿಸಿ - ಶಿವಗಂಗನಿಗೆ ಗೌಡತಿಯ ಮೇಲೆ ಮೋಹವೇನೂ ಇರುವುದಿಲ್ಲ. It's not a sexual rape, It's one way of humiliating Chandregowda.

ಅನಂತಮೂರ್ತಿ : ಆರ್. ಕೆ ನಾರಾಯಣರ ಕಾದಂಬರಿಗಳಲ್ಲಿ ಕೂಡಾ ಹೀಗೇನೆ. ಅಲ್ಲಿ ಜಾತಿಗಳಿಲ್ಲ. ಹಾಗಾಗಿಯೇ **ಮಾಲ್ಗುಡಿ**ಯನ್ನ, ಇಡೀ ಭಾರತದೇಶಕ್ಕೇ ಅನ್ವಯಿಸುವ ಮಾದರಿ ಹಳ್ಳಿ ಎಂದು ನಂಬಿಸುವುದು ಸುಲಭವಾಗುತ್ತದೆ. ನಾರಾಯಣ್, ಜಾತಿ - ಉಪಜಾತಿಗಳ ಪ್ರಪಂಚವನ್ನು Suppress ಮಾಡಿ, ಮತ್ತೊಂದು ರೀತಿಯ ಸತ್ಯ ಎದ್ದು ಕಾಣುವಂತೆ ಮಾಡುತ್ತಾರೆ.

ಪ್ರಸನ್ನ : ಹೀಗೆ Suppress ಮಾಡುವ ತಂತ್ರ, ಕೆಲವೊಮ್ಮೆ ಕೃತಿಯ ಸಂಕೀರ್ಣತೆಗೆ ಅಡ್ಡಬರುತ್ತದೆ. ಉದಾ - **ವಿಜಯ ತೆಂಡೋಲ್ಕರ್‌ರ ಘಾಸೀರಾಂ ಕೊತ್ವಾಲ್** ನಾಟಕ ತೆಗೆದುಕೊಳ್ಳಿ - ಇಡೀ ನಾಟಕದಲ್ಲಿ ಎಲ್ಲರೂ ಬ್ರಾಹ್ಮಣರೇ; Chorus ನ ಹಾಡುಗಾರರೂ ಬ್ರಾಹ್ಮಣರೇ, ಗೋಡೆಯೂ ಬ್ರಾಹ್ಮಣರೆ, ರಾಜನೂ ಬ್ರಾಹ್ಮಣನೆ, ಕೆಟ್ಟವನು - ಒಳ್ಳೆಯವನು ಎಲ್ಲಾ ಬ್ರಾಹ್ಮಣರೇ. ಹೀಗಾಗಿ ; ಅದೊಂದು ವಿಚಿತ್ರವಾದ, ಅಸಹಜವಾದ ಪರಿಸ್ಥಿತಿ. ಪೇಶ್ವೆಗಳ ಕಾಲ ನಿಜವಾಗಿಯೂ ಹಾಗಿರ್ಲಿಲ್ಲ. ಪೇಶ್ವೆಗಳ ಕಾಲದಲ್ಲಿ Decadency ಯಾವ ರೀತಿಯದ್ದಾಗಿತ್ತು ಅಂತ ನೋಡಬೇಕಾದರೆ, ಬೇರೆ ಜಾತಿಗಳ ಜತೆಗೆ, ಬ್ರಾಹ್ಮಣ ಆಳುವ ವರ್ಗವನ್ನು ಇಟ್ಟು ನೋಡಬೇಕು.

ಗಿರೀಶ್ ಕಾರ್ನಾಡ್ : ಜತೆಗೆ, ಬ್ರಾಹ್ಮಣರೂ ಕೂಡಾ ಒಂದು monolyth ಅಲ್ಲ. ಆ ನಾಟಕದಲ್ಲಿ ಎಲ್ಲರೂ ಚಿತ್‌ಪಾವನ ಬ್ರಾಹ್ಮಣರೇ ಎನ್ನುವಂತೆ ತೆಂಡೂಲ್ಕರ್ ತೋರಿಸಿಬಿಟ್ಟಿದ್ದಾರೆ. ಮರಾಠಿ ಬ್ರಾಹ್ಮಣರಲ್ಲೂ Internal tension ಬಹಳ ಇತ್ತು.

ಅನಂತಮೂರ್ತಿ : ನಮ್ಮಲ್ಲಿ ನೋಡಿ - ಮೈಸೂರಿನಲ್ಲಿ ಮೊದಲು ಮೀಸಲಾತಿಯನ್ನು ಕೇಳಿದವರು ಮೈಸೂರು ಬ್ರಾಹ್ಮಣರು, ಮೈಸೂರಿನ ಶೂದ್ರರಲ್ಲ ! ಏಕೆಂದರೆ, ತಮಿಳುನಾಡಿನಿಂದ ಬಂದ ಬ್ರಾಹ್ಮಣರು ಇಲ್ಲಿ ಆಳ್ತಾ ಇದ್ರಲ್ಲ, ಸ್ಥಳೀಯರಿಗೊಂದು ಮೀಸಲಾತಿ ಬೇಕು ಅಂತ ಮೈಸೂರು ಬ್ರಾಹ್ಮಣರ ವಾದ. (ನಗು) ಸಮಾಜದಲ್ಲಿ ಇಷ್ಟೊಂದು ಒಳಸುಳಿಗಳಿರುವಾಗ, ಲೇಖಕ ಈ ಒಳಸುಳಿಗಳ ಬಗ್ಗೆ, ಎಷ್ಟು specific ಆಗಿರ್ಬೇಕು, ಎಷ್ಟು General ಆಗಿ ಬರೆಯಬೇಕು ಎಂದು ನಿರ್ಧರಿಸಬೇಕಾಗುತ್ತದೆ.

ಪ್ರಸನ್ನ : ಗಿರೀಶರು ಸಾರಸ್ವತರ ಬಗ್ಗೆ ಹೇಳುತ್ತಾ ಇರುವ ಮಾತುಗಳು ನನಗೆ ಯಹೂದ್ಯ ಜನಾಂಗದ ನೆನಪನ್ನು ತರುತ್ತಿದೆ.

ಅನಂತಮೂರ್ತಿ : ನೀವು ಏನನ್ನು ಗಿರೀಶರ ಸಮಸ್ಯೆ ಎಂದು ಗುರ್ತಿಸ್ತೀರೋ ಅಥವಾ ಏನನ್ನು ನನ್ನಲ್ಲಿ, ಲಂಕೇಶರಲ್ಲಿ, ತೇಜಸ್ವಿಯಲ್ಲಿ ಗುಣ ಎನ್ನಬಹುದೋ, ಅದೇ ನನಗಿವತ್ತು ಸಮಸ್ಯೆಯಾಗಿದೆ. ಆ ಗುಣವನ್ನು ಬಿಟ್ಟು ಬರೆಯದೇ ಹೋದರೆ, ನನಗೆ ಹೊಸದನ್ನು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ.

ಗಿರೀಶ್ ಕಾರ್ನಾಡ್ : ನಾನು ಈಗ ಯೋಚನೆ ಮಾಡುತ್ತಿರುವ ಹೊಸ ನಾಟಕ, ನನ್ನದೇ ಸಮಾಜಕ್ಕೆ ಸಂಬಂಧಿಸಿದ್ದು. ಸುಮಾರು ೨೦ ವರ್ಷಗಳ ಹಿಂದೆ, ನನ್ನ ತಂದೆಯ ತಂಗಿಯ ಲಗ್ನ ಆಗಬೇಕಿತ್ತು. ಅಮೇರಿಕೆಯಿಂದ ಬಂದ ಸಾರಸ್ವತರ ಹುಡುಗ ; ಅವನು ಸುಶಿಕ್ಷಿತ, ನಮ್ಮ ಮನೆಯಲ್ಲೂ ಸುಶಿಕ್ಷಿತರು. ಯಾವುದೇ ಸಮಸ್ಯೆ ಇಲ್ಲದೆಯೇ ಮದುವೆ ಆಗ ಬೇಕಿತ್ತು. ಆದರೆ, ಆಗಲಿಲ್ಲ. ವರದಕ್ಷಿಣೆ ಕೇಳ್ತಿರಲಿಲ್ಲ, ಮತ್ತಾವುದೇ ಸಮಸ್ಯೆ ಇರಲಿಲ್ಲ. ಮದುವೆ ಅಂದಾಕ್ಷಣ, ಒಂದು ಪರಿಸರ ಸೃಷ್ಟಿಯಾಗುತ್ತದೆ ನೋಡಿ; - ಭಯಂಕರ Tension ನ, ಗೌಜು - ಗದ್ದಲದ ಪರಿಸರ. ಅದರಲ್ಲಿ, ಯಾರಿಗೋ ಚಾ ಸಿಗ್ಲಿಲ್ಲ, ಇನ್ಯಾರಿಗೋ ಮನೆತನದ ಹೊಟ್ಟೆಕಿಚ್ಚುಗಳು ತಲೆ ಹಾಕಿತು ಅನ್ನುವ, ಇಂತಹದ್ದೇ ಸಣ್ಣ ಪುಟ್ಟ ವಿಷಯಗಳು ಬೆಳೆದು, ದೊಡ್ಡ ವಾಸ್ತವವಾಗಿ ಬಿಟ್ಟಿತು. ಅದನ್ನೇ ಬರೆಯೋಣ ಅಂತಿದ್ದೇನೆ. ನೀವಂದದ್ದು ನಿಜ. ನಾವೆಲ್ಲರೂ ಒಂದು ಸಲ Break - out ಆಗಬೇಕು. ನಮ್ಮದೇ ಚೌಕಟ್ಟುಗಳಿಂದ ಹೊರಬರಬೇಕು.

ಪ್ರಸನ್ನ : ಇದನ್ನ ಹೇಗೆ ಮಾಡಬೇಕು ಅಂತಿದೀರಿ.

ಗಿರೀಶ್ ಕಾರ್ನಾಡ್ : ಭಾರತೀಯ ರಂಗಭೂಮಿಯನ್ನೇ ತೆಗೆದುಕೊಳ್ಳಿ. ನಾವು **ತೆಂಡೂಲ್ಕರ್** ಅವರನ್ನ, **ಶ್ರೀರಂಗ**ರನ್ನ ಅಥವಾ ಒಟ್ಟಾರೆಯಾಗಿ ವಾಸ್ತವವಾದಿ ಪರಂಪರೆಯನ್ನ ಹಾಗಂತ ವಾಸ್ತವವಾದವನ್ನ ಭಾರತೀಯ ರಂಗಭೂಮಿಯಲ್ಲಿ ಪೂರ್ತಿಯಾಗಿ ದುಡಿಸಿಕೊಂಡೂ ಇಲ್ಲ. ಒಬ್ಬ **ಚೆಕಾಫ್** ಓದಿದರೆ ಹೇಗೆ ರಷಿಯಾದ ವಾಸ್ತವ ನಮ್ಮ ಮುಂದೆ ಸೃಷ್ಟಿಯಾಗುತ್ತೋ ಆ ಅರ್ಥದಲ್ಲಿ ನಾವು ಯಾರೂ ಮಾಡೋದಕ್ಕೆ ಆಗಿಲ್ಲ. ಭಾರತೀಯ ರಂಗಭೂಮಿಯನ್ನ ಸ್ವಲ್ಪ ಮಟ್ಟಿಗೆ ದಾರಿತಪ್ಪಿಸಿದವನು **ಬರ್ನಾಡ್‌ಷಾ.** ಬ್ರಿಟೀಷರು ನಮ್ಮನ್ನ ಆಳ್ತಾ ಇದ್ದರು. ಆಳುವ ಜನ ಬರ್ನಾಡ್‌ಷಾನೇ ಮಹಾನ್ ನಾಟಕಕಾರ ಅಂದು ಬಿಟ್ಟರು. ನಾವು ಒಪ್ಪಿಕೊಂಡು ಬಿಟ್ಟೆವು. **ಷಾ** ನಮ್ಮನ್ನ ಎಷ್ಟರ ಮಟ್ಟಿಗೆ ಹಿಡಿದುಬಿಟ್ಟಿದ್ದಾನೆ ಅಂದರೆ , ಇಬ್ಸನ್ನನ ಡಾಲ್ಸ್ ಹೌಸನ್ನು ಕೂಡಾ, ಷಾನ ಮುಖಾಂತರವೆ ಅರ್ಥ ಮಾಡಿಕೊಂಡೆವು. ಬಹಳಷ್ಟು ವರ್ಷ ನಮಗೆ ಚೆಕಾಫ್ ಇತ್ಯಾದಿ ನಾಟಕಕಾರರು ಗೊತ್ತೇ ಇರಲಿಲ್ಲ.

ಷಾನಲ್ಲಿ ಎಲ್ಲರೂ ನಿರಾಳವಾಗಿ, ನಿರರ್ಗಳವಾಗಿ, ಆಕರ್ಷಕವಾಗಿ, haunting ಆಗಿ ಕನಿಷ್ಠ ಅರ್ಥಪುಟ, ಮಾತನಾಡುತ್ತಾರೆ. ಆ ಮಾತುಗಳು ಒಂದು ರೀತಿಯ ಆರ್ಕೆಸ್ಟ್ರಾ ಇದ್ದ ಹಾಗೆ. ಆದರೆ **ಚೆಕಾಫ್**ನಲ್ಲಿ ಹೆಚ್ಚಿನವರಿಗೆ ಮಾತೆ ಸಾಧ್ಯವಾಗುವುದಿಲ್ಲ. ಅದು ನಮ್ಮ ಇಂದಿನ ವಾಸ್ತವ ಕೂಡಾ. ಮಾವನ ಎದುರಿಗೆ ಸೊಸೆಗೆ ಮಾತು ಬರುವುದಿಲ್ಲ, ಗಂಡನ ಎದುರಿಗೆ ಹೆಂಡತಿಗೆ ಮಾತು ಬರುವುದಿಲ್ಲ. ನಮ್ಮ ಸಮಾಜ ಅಸಾದಾರಣ ಅಡೆತಡೆಗಳ ಸಮಾಜ. ಇಲ್ಲಿ ಎಲ್ಲವೂ ಪೂರ್ವ ನಿರ್ಧಾರಿತ. ಯಾರೂ ಎಲ್ಲಿ ಮಾತನಾಡಬಹುದು, ಎಲ್ಲಿ ಮಾತನಾಡಬಾರದು, ಮೊದಲು ಆತ, ಅನಂತರ ಆಕೆ ಇತ್ಯಾದಿ ಎಲ್ಲವೂ ಪೂರ್ವ ನಿರ್ಧಾರಿತ. ಅಡಿಗೆ ಮನೆಯಲ್ಲಿ ಯಾರು ಮಾತನಾಡಬಹುದು, ಹೊರಗೆ ಯಾರು ಮಾತನಾಡಬಹುದು..... ಇಂತಹ ಸೂಕ್ಷ್ಮಗಳನ್ನ ಇನ್ನು ಯಾವ ನಾಟಕಕಾರನು ಗ್ರಹಿಸಿಲ್ಲ.

ನಮ್ಮ ಮನೆಗಳಲ್ಲಿ ಹೆಣ್ಣು ಮಕ್ಕಳು ಬಡಿಸಬೇಕಾದರೆ ತುಂಬಾ ಮಾತನಾಡುತ್ತಾರೆ. ಅಡಿಗೆ ಮನೆಯಲ್ಲಿ, ಮಲಗುವ ಮನೆಯಲ್ಲಿ ಹೆಂಗಸರಿಗೆ ಮಾತನಾಡಲಿಕ್ಕೆ ಸ್ವಾತಂತ್ರ್ಯ ಇದೆ. ಅವರು ಊಟ ಕೊಡುತ್ತಾರೆ, ಸೆಕ್ಸ್ ಕೊಡುತ್ತಾರೆ ಅನ್ನೋ ಕಾರಣಕ್ಕೆ ಇರಬಹುದು. ಅಲ್ಲಿ ಮಾತ್ರ ಗಂಡಸು ಕೆಳಗೆ ಕೂತಿರುತ್ತಾನೆ ; ಪಡೆಯುತ್ತಿರುತ್ತಾನೆ. ಹೆಂಗಸು ನೀಡುತ್ತಿರುತ್ತಾಳೆ. ಆಗ ಮಾತ್ರ ಹೆಂಗಸಿಗೆ ತನಗೆ ಅನ್ನಿಸಿದ್ದನ್ನ ಹೇಳಲಿಕ್ಕೆ ಸ್ವಾತಂತ್ರ್ಯ ಇರುತ್ತದೆ. ಅದಕ್ಕೇ ಅಂತ ಕಾಣುತ್ತೆ, ನಮ್ಮಲ್ಲಿ ಊಟ ಬಿಟ್ಟು

ಹೋಗಿ ಬಿಡುವುದು ಅಂದರೆ ಅಂತಿಮ ಬಂಡಾಯ. ಗಂಡಸು ಆ ಕ್ಷಣದಲ್ಲಿ ಅಷ್ಟು ಮಾತ್ರ ಮಾಡಬಲ್ಲ. ಹೆಚ್ಚೆಂದರೆ ಊಟ ಅರ್ಧಕ್ಕೆ ಬಿಟ್ಟು ಹೋಗಿ ಬಿಡಬಲ್ಲ.

ನಮ್ಮ ನಾಟಕದಲ್ಲಿ ಈ ರೀತಿಯ ಸೂಕ್ಷ್ಮಗಳು ಇನ್ನೂ ಬರಬೇಕಾಗಿದೆ.

ರುಜುವಾತು ಚಂದಾದಾರರಿಗೆ ವಿಶೇಷ ರಿಯಾಯಿತಿ ಯೋಜನೆ
ವಿಮರ್ಶಾ ಲೇಖನಗಳ ಸಂಗ್ರಹ

ಎಂ. ಜಿ. ಕೃಷ್ಣಮೂರ್ತಿಯವರ

ಕೃತಿ ಸಂಸ್ಕೃತಿ

ಮಾರಾಟಕ್ಕೆ ಲಭ್ಯವಿದೆ. **ಪುಟ ಸಂಖ್ಯೆ ೩೪೫**

ಕ್ಯಾಲಿಕೋ ಪ್ರತಿ ರೂ. ೧೨೦ /-

ರುಜುವಾತು ಬಳಗಕ್ಕೆ ರಿಯಾಯಿತಿ ಉಂಟು.

ಅಂಚೆವೆಚ್ಚ, ಬ್ಯಾಂಕ್ ಕಮಿಷನ್ ಸೇರಿ. ೧೦೦ /- ಮಾತ್ರ

ಹಣವನ್ನು ಚೆಕ್ / ಡ್ರಾಫ್ಟ್ / ಎಂ. ಓ. ಮೂಲಕ ಈ ವಿಳಾಸಕ್ಕೆ ಕಳಿಸಿ

ಕವಿ - ಕಾವ್ಯ ಟ್ರಸ್ಟ್, ಹೆಗ್ಗೋಡು ೫೭೭ ೪೧೭

ಶಿವಮೊಗ್ಗ, ಕರ್ನಾಟಕ.

ಅತಿಥಿ ಕವಿ ಅಂಕಣ

ಒರಿಯಾ ಕವಿ

ಶುಭೇಂದು ಮುಂಡ್

ಕನ್ನಡಾನುವಾದ

ಎಚ್. ಎಸ್. ಶಿವಪ್ರಕಾಶ್

ಶುಭೇಂದು ಮುಂಡ್ ಒರಿಯಾದಲ್ಲಿ ಇತ್ತೀಚೆಗೆ ಪ್ರಭಾವಶಾಲಿಯಾಗಿ ಬೆಳೆಯುತ್ತಿರುವ ಕವಿ.

ಕಟಕ್‌ನಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿರುವ ಮುಂಡ್ ಅವರ ಕಾವ್ಯದಲ್ಲಿ ಸಂಗೀತವಿದೆ. ಶುಬೇಂದು ಮುಂಡ್ ಅವರ ಪತ್ನಿ, ಶ್ರೀಮತಿ ಮುಂಡ್ ಅವರು ಒಡಿಯಾ ಶಾಸ್ತ್ರೀಯ ಗಾಯಕಿಯಾಗಿ ಸುಪ್ರಸಿದ್ಧರು.

ಈಗಾಗಲೇ ಮೂರು ಸಂಕಲನ ಹೊರತಂದಿರುವ ಮುಂಡ್ ಅವರ ಕಾವ್ಯದಲ್ಲೂ ಹಿರಿಯ ಕವಿ ರಮಾಕಾಂತ ರಥ್‌ರ ಕಾವ್ಯದ ರೀತಿಯ ಅಧಿಭೌತಿಕ ತುಡಿತ ಮತ್ತು ಉತ್ಕಟ ಪ್ರಾರ್ಥನೆಯ ಧ್ವನಿ ಮಿಳಿತವಾಗಿವೆ. ಆದರೆ ಮುಂಡ್ ಅವರಲ್ಲಿ ನಿರಾಶೆಯ ನೆಳಲು ಅಷ್ಟು ದಟ್ಟವಾಗಿಲ್ಲ. ಇಲ್ಲಿನ ಧ್ವನಿಗೆ ಆಶಾವಾದಿತ್ವ ಸಹಜವಾಗಿದೆ.

ಈ ಕವಿತೆಗಳನ್ನು ಮೂಲ ಒರಿಯಾ ಮತ್ತು ಹಿಂದಿ ಅನುವಾದಗಳ ನೆರವಿನಿಂದ ಕನ್ನಡಿಸಲಾಗಿದೆ.

೧

ಕವಿಯ ಬೆಳಗು

ನಾಳೆ ಪುನಃ ಇದೇ ಬೆಳಗು ಬಹುಶಃ
ಹಿಂದಿರುಗುವುದು ನವ ಸಂವತ್ಸರ, ಬೆಳಗುಗಳ ತರಹ
ಪ್ಲಾನೆಟೋರಿಯಂನಿಂದ ಕಾಣುವ ಆಕಾಶದ
ಯಾವುದೋ ಖಾಲಿ ಖಾಲಿ ಜಾಗದಿಂದ
ಏಳುವನು ಸೂರ್ಯ, ಅರಳಿ ಕೆಂಪಾಗಿ.

ಎಲ್ಲ ರೀತಿ ವಿರೋಧಾಭಾಸ ಇದ್ದರೂ ಕೂಡ
ರಸ್ತೆ ಮೇಲೆ ಚಲ್ಲಿದಂಥ ರಕ್ತಸಮ ಬೆಳಗು,
ಕೆಂಪು ಬೆಳಗು !

ಎಲ್ಲಾಥರ ಅಂಧಕಾರ ಪೂರ್ತಿ ಹರಿಯುವುದೆ
ಯುಗ ಪುರುಷರ ಮುಗುಳು ನಗುವ ಮುಖಗಳಿಂದ,
ಅರ್ಧ ನಿಮೀಲಿತ ನೇತ್ರ ಪ್ರಭೆಯಿಂದ ?
ಜ್ವಲಿಸತೊಡಗುವುದೇನು, ಹೇಳು,
ಈ ಸಮಗ್ರ ದ್ಯಾವಾ ಪೃಥಿವಿ ?

ಯಾವ ಮಂತ್ರದ ಆವಾಹನೆಯ ಶಕ್ತಿಯಿಂದ
ಜೀವರಾಶಿಗೆ ಧೈರ್ಯ ಬರುವುದೊ ?
ಯಾವ ನೂತನ ಪ್ರಾತಃಕಾಲದ ಮಂತ್ರದಿಂದ
ಯಾವ ಸ್ವಪ್ನದ
ಯಾವ ಬೀಪ್ಸೆಯ
ಯಾವ ಸ್ಮೃತಿಯಲ್ಲಿ
ಹುಟ್ಟಿ ಬಂತೋ ಕವಿತೆ, ಎಲ್ಲ ದೂಷಿಸುತ ?

ಪಿಸುಮಾತಲಿ ನನ್ನ ಕಿವಿಯಲಿ, ಋತ್ವಿಕ, ಉಸುರೋ
ಯಾವ ಶ್ಲೋಕದ
ಯಾವ ಕವಿತೆಯ
ಯಾವ ಮಂತ್ರದ
ಶಕ್ತಿ ಬಲದಿಂದ
ಪ್ರತಿ ಬಾಂಬೂ ಆಗಬಲ್ಲುದು
ಮುಗುದ ಕೋಮಲ ಹೂ ?

೨

ಸ್ವಪ್ನಸ್ಥ ಕವಿ

ಏನು, ಸಮಯ ಈಸು ಸ್ವಾರ್ಥಪರವೆ, ದೇವಿ,
ಕಂಡೂ -ಕಾಣದ ಚಹರೆ ಹಾಗೆ ಕರಗಿ ಹೋಗುವುದೆ
ರಸ್ತೆ ನೆರವಿಯಲಿ ?
ಸಮಯ ಏನು ದೂರ ಹೋಯಿತೆ
ನೆರಳ ಹಾಗೇ ಸರಿದು ಹೋಯಿತೆ ? ನಾವು ಇಬ್ಬರೂ
ಎರಡು ಪುರಾತನ ಗಿರಿಗಳಂತೆ ಪರಸ್ಪರ ದಿಟ್ಟಿಸುತ್ತಾ
ಹೀಗೇ ನಿಂತಿರುವೆವು ಶತಶತಮಾನದಿಂದ ?

ಕವಿಯ ಸ್ವಪ್ನ ಬಹುಶಃ ಹಾಸ್ಯಾಸ್ಪದ ;
ಅವನ ಮಾತು ಕತೆಗಳಿಂದ ಬದಲೇ ಆಗದೀ ಪೃಥ್ವಿ
ಸವೆದು ಹೋಗುವುದಿಲ್ಲ ಸಮಯ
ಅವನ ಕವಿತೆಯ ಎಳೆಗಳಿಂದ
ನಡೆಯಲಾರದು ರಾಜನೀತಿಯ ನೇಣಿನಾಟ ;
ಕವಿ ಆದರೂ ಸ್ವಪ್ನ ಕಾಣುವ
ಒಂಟಿ ಬೆಟ್ಟದ ಹಾಗೆ
ಮೌನವಾಗಿ
ಆಕಾಶ ಪೃಥ್ವಿ ಎರಡನೂ ಸೋಕಿ
ಸ್ವಪ್ನ ಕಾಣುತ ನಿಂತೇ ಇರುವ.

೩

ನಿನ್ನ ಸಿಂಹಾಸನ

ನಿನ್ನ ಕೈಮುಷ್ಟಿಯಲ್ಲಿ ನನ್ನ ದುಃಖ
ನಿನ್ನ ಕೈ ಮುಷ್ಟಿಯಲ್ಲಿ ನನ್ನ ಸ್ವಪ್ನ
ಕೂತಿದೀಯ ನೀನು ಅಲ್ಲಿ ನಿನ್ನ ಸಿಂಹಾಸನದ ಮೇಲೆ
ನನ್ನ ಮಣ್ಣಿಂದ - ತೀರಾ ದೂರ
ಸ್ವಪ್ನದಾಚೆಯ ದೂರ

ಇಷ್ಟು ದುಃಖ ಇದ್ದರೂ ಸಹಿತ
ರಾಣಿ ಹಾಗೇ ನಿನ್ನನಲಂಕರಿಸುವುದರಲ್ಲೇ ನನ್ನ ಆನಂದ
ಸಿಂಹಾಸನದ ಮೇಲೆ ನಿನ್ನ ಕೂರಿಸುವುದರಲ್ಲೇ
ನಿನ್ನ ಬಳಿ ಬಳಿ ಬರುವ ಸ್ವಪ್ನ ಕಾಣುವುದರಲ್ಲೇ
ಮುಕ್ಕಾಲುವಾಸಿ ಎಲ್ಲ ಕವಿಗಳಿಗೂ ಉಂಟು ಆನಂದ !

ನೀನು ಅಲ್ಲೇ ಕುಳಿತಿರೇ, ದೇವಿ,
ನಿನ್ನ ಸಿಂಹಾಸನದಲ್ಲೇ
ಎಲ್ಲ ಲೋಕದ ದುಃಖ ಚೂರೂ ತಾಕದಂಥ ದೂರದಲ್ಲೇ
ಝುಗ ಝುಗ ಉರಿವ ಬೆಂಕಿಯಿಂದ ದೂರದಲ್ಲೇ
ವಿಕರಾಳ ಸ್ಪರ್ಶದಿಂದ
ಹೂವು ನಲುಗದ ಜಾಗದಲ್ಲೇ
ಗೋಲೀಬಾರ್ ಶಬ್ದ ಕೇಳಿ
ಕೊಂಬೆಯಿಂದ ಹಕ್ಕಿ ಪಕ್ಷಿ ಚದುರಿಹೋಗದ ಜಾಗದಲ್ಲೇ.

೪.

ಅನ್ಯ ಮನಸ್ಕ ಕವಿ

ಇವತ್ತು ಬೆಳಗ್ಗೆಯಿಂದ ನಿನ್ನ ಚಿಂತೆಯೇ ಮನಸ್ಸು ಹೊಕ್ಕಿದೆ, ದೇವಿ
ನೀನು ಹೋಗೇಬಿಟ್ಟಿರಬೇಕು, ಖಂಡಿತಾ
ನನ್ನ ಉದ್ವೇಗದ ತರಂಗಗಳು ತಲುಪಿರಲೇ ಬೇಕು
ನಿನ್ನ ದಂಡೆಗೆ

ನಾನಿನ್ನು ನಕ್ಷತ್ರ ಚಂದ್ರ ಮರ ಸೊಲ್ಲು
ಎತ್ತುವುದಿಲ್ಲ ನನ್ನ ಕವಿತೆಯಲ್ಲಿ;
ಬಾಯಿ ಬಿಟ್ಟು ಮಾತನಾಡುವುದಿಲ್ಲ
ಹೇಗೆ ಮೊಗ್ಗು ಹೂವಾಗಿ ಅರಳುತ್ತದೆ ಎಂದು;
ಹೇಗೆ ಅದರ ಸುಗಂಧ ಅದೃಶ್ಯ ರೆಕ್ಕೆ ಬೀಸಿ
ಹಬ್ಬುತ್ತದೆ ಎಂದು
ಆಕಾಶದಿಂದ ಸಮುದ್ರದವರೆಗೂ
ಮರಳು ಗಾಡಿಂದ ಅರಣ್ಯದವರೆಗೂ

ಪ್ರತಿ ಬೆಳಗ್ಗೆ ಹೊಸಾ ಹೊಸಾ ರಂಗು ತಾಳಿದರೂ ಸಹಿತ
ಹಾಡುವುದಿಲ್ಲ ಒಂದೇ ಒಂದು ಸ್ತೋತ್ರವನ್ನೂ
ಸೂರ್ಯನ ಬಗ್ಗೆ;
ಪ್ರತಿ ಮುಹೂರ್ತ ರೂಪ ಬದಲಿಸೊ ಚಿತ್ರಪಟ ಕಂಡೂ
ಭಾವಪರವಶನಾಗಲಾರೆ.
ಮತ್ತೆ ಮತ್ತೆ ನಿನ್ನ ಬಗ್ಗೆ ಅನ್ಯಮನಸ್ಕನಾದರೂ ಸಹಿತ
ನಿಂತೇ ಇರಬೇಕು ನಾನು ಹೀಗೇ
ಹೆಗಲ ಮೇಲೆ ಹೊತ್ತು ಪೆಟ್ಟಿಗೆ, ಒಬ್ಬ ಕಲ್ಪಿತ
ಶತ್ರುವಿನ ಪ್ರತೀಕ್ಷೆಯಲ್ಲಿ.
ನನ್ನ ಬಂದೂಕೊಳಗಿನೀ ಅಸಹಾಯಕ ಗೋಲಿ ಕೂಡಾ
ಉಸಿರುಹೊಯ್ಯದೆ ಕಾತರಿಸುತಿದೆ ಒಬ್ಬ ಕಲ್ಪಿತ
ಶತ್ರುವಿನ ನಿಶ್ಶಬ್ದ ಹೆಜ್ಜೆ ಸಪ್ಪುಳಕೆ.

ನೀನಿಲ್ಲಿ ಬರುವುದು ಮನ್ನಾ ಆಗಿದೆ, ದೇವಿ,
ನಿನ್ನ ಮೋಹಕ ಮಂತ್ರದಿಂದ ಆಗಲಾರ ಯಾರೂ ಇಲ್ಲಿ
ಶಿಲಾಮೂರ್ತಿ;
ಸಿಡಿಮದ್ದಿನ ಗಂಧ ಹಾಗೂ ಸೋಕಿನಲ್ಲಿ
ನಿಂತೇ ಇರುವೆ ನಾನಿಲ್ಲಿ-
ಅನ್ಯಮನಸ್ಕನಾಗೇ

ಕನ್ನಡ ಕಾವ್ಯ

○ ಪ್ರೊ. ಜಿ. ಎಸ್. ಸಿದ್ಧಲಿಂಗಯ್ಯ
○ ಪ್ರತಿಭಾನಂದಕುಮಾರ್
○ ಎಸ್. ಮಂಜುನಾಥ್

ಹುಡುಕಾಟ

ಪ್ರೊ ಜಿ. ಎಸ್. ಸಿದ್ದಲಿಂಗಯ್ಯ

ಅಂಗೈಯಲ್ಲಿ ಬಯಲ ಹಿಡಿದವರು
ಬಟ್ಟೆಯ ಹಂಗಿಲ್ಲದೆ ಬಯಲಾದವರು
ಪ್ರಸಾದದ ಗುಂಡಿಯಿಂದಲೆ ಶಿವನೊಳಗಿಳಿದವರು
ಮಾತನೆ ಸೂತಕ ಮಾಡಿದ ಮಹಾಂತರು
-ಈ ಕಲ್ಯಾಣವೆಂದರೆ ಬಸವಣ್ಣನಿಗೆ
ಯಾವಾಗಲೂ ಹುಡುಕಾಟವೇ.

೨

ಅವತ್ತು ಮಧ್ಯಾಹ್ನ ಪ್ರಸಾದವಾಗುತ್ತಲೇ
ತೂಕಡಿಕೆ ಬಂದಂತಾಗಿ
ನಗುಬಂತು.
ಬೊಜ್ಜೇನಾದರೂ ಬರುತ್ತಿದೆಯೇ ಅನ್ನಿಸಿ

ಕಾಲಾಡಲು ಹೊರಟ.

ಅಗ್ರಹಾರವನ್ನು ಹೊಗುವಾಗಲೆ

ಕ್ಷೀಣಿಸುತ್ತಿದ್ದ ವೇದದ ಘೋಷ

ಸಕ್ಕರೆ ನಿದ್ದೆಯ ಹೊತ್ತಲ್ಲವೆ

ಎದ್ದಿದ್ದ ಕೆಲವರು ಪಗಡೆಯಾಡುತ್ತಿದ್ದರು.

ಮಡಿ ಹೆಂಗಸರು ಆಕಳಿಸುತ್ತ

ಬತ್ತಿ ಹೊಸೆಯುತ್ತಿದ್ದರು

ಪಕ್ಕದಲ್ಲಿ ಊರನ್ನೆ ವಿಂಗಡಿಸುವಂತಿದ್ದ ಒಂದು ದೊಡ್ಡ ಬೋರೆ.

ಅದನ್ನೇರುತ್ತಿದ್ದಂತೆ

ಸ್ವರ್ಗೀಯವಾಗಿ ಬೀಸಿತು ತಂಗಾಳಿ

ಅದರ ಹೆಗಲಿನ ಮೇಲೆ ಮಾಡಿ ಸವಾರಿ

ಬೀಸುವ ಕಲ್ಲಿನ ಪದ

ಗೋಪುರ ಗೋಪುರವರಳುತ್ತಿತ್ತು.

ಕೆಳಗೆಲ್ಲಾ ಗುಡಿಸಲು ಗುಡಿಸಲುಗಳ ಸಾಲು

ಅದರೊಳಗೊಂದಂತೂ ಸುಶುಭ್ರ

ಸೆಳೆಯುತ್ತಿತ್ತು

ಹತ್ತಿರ ಹತ್ತಿರ ಹೋದಂತೆಲ್ಲ

ಗುಣುಗುಣಿಸುವ ವಚನ ತಂಗಾಳಿಯ ಜೊತೆಗೆ

ಹಾಗೇ ಕಣ್ಣಾಡಿಸಿದ

ಹರಳಯ್ಯನವರು ಪಾದರಕ್ಷೆಗೆ

ಚರ್ಮವನ್ನು ಕುಯ್ಯುತ್ತಿದ್ದರು

ಗುಣುಗುಣಿಸುತ್ತಿದ್ದರು

ಅನುಭವ ಮಂಟಪವನ್ನೆ ಹೊಕ್ಕಂತಾಯಿತು.

ಕೆಂಪು

" ಹಸಿರಿನಾ ಮಲೆ ಹಸಿರು ಕಣಿವೆ
ಹಸಿರು ಗದ್ದೆಯಾ ಬಯಲು "
ಗೊತ್ತು ಬಿಡಿ ಅದರಿಂದೇನು
ನನಗೆ ಕೆಂಪಿನ ಹುಚ್ಚು.

ಆ ಉಗ್ರ ಗೂಳಿಯ ಆವೇಶ ಕೆರಳಿಸುವ ಚೌಕ
ಮಾವಿನ ಚಿಗುರಿನ ಅಪಾಯ ಸೂಚನೆ. ಸ್ಫೋಟಕ
ಸರಿಯಾಗಿ ನಡುರಾತ್ರಿಗೆ ಎಲ್ಲಕಿತ್ತೊಗೆಯುವ
ಕ್ಯಾಬರೆ ನರ್ತಕಿಯ ಬ್ರಾ. ಮತ್ತು ಬರಿಸುವ ಪೇಯ
ಆ ದಿನ ಧಿಗ್ಗನೆ ಹೊತ್ತಿ ಉರಿದ ಬೆಂಕಿಯ ನೆನಪು.

ಹುಬ್ಬಿನ ನಡುವೆ ಚಾಮುಂಡೇಶ್ವರಿಯ ಕುಂಕುಮ
ರಕ್ತ ಬೀಜಾಕ್ಷರಿಯ ಪಟ್ಟೆ ಸೀರೆಯ ರೇಶ್ಮೆ
ಸಾಣಿ ಬಳೆಯ ಮಿಂಚು ಮೂಗು ನತ್ತು
ತಟ್ಟಿದರೆ ಟಣ್ಣೆನ್ನುವ ಸುಟ್ಟ ಮಡಕೆ
ಮೊದಲ ಚುಂಬನದ ಸಾಕ್ಷಿ ಗುಲ್ ಮೊಹರ್
ಪೂಜೆಗೆ ಗೋಡೆ ಹತ್ತಿ ಕಿತ್ತ ದಾಸವಾಳ
ಅಬ್ಬರಿಸುತ್ತ ಹಾದು ಹೋದ ಅಗ್ನಿಶಾಮಕದ

ಕೆಂಪಲ್ಲ. ಇದು ಬಲಿ ಕೇಳದ ನೆಲದ
ಹೊರ ಚಿಮ್ಮದ ಗಾಯ. ಮರೆತ ಕನಸುಗಳ
ಭಟ್ಟಿಯಲ್ಲಿ ಇಳಿಸಿದ ಬಣ್ಣವಿಲ್ಲದ ನೀರು
ಶಾಸ್ತ್ರೋಕ್ತ ತಪ್ಪುಗಳಿಗೂ ಮಾಡಿದ ಸೀಮಂತದ
ಹಸಿರು ಸೀರೆ ಬಳೆ ಉಡಿ ತುಂಬಿದ ವೀಳ್ಯ ಮರೆಸಿಟ್ಟ

ಉಗ್ರ ಕೋಪದ ಕಣ್ಣ ನೆರಳು. ಸುತ್ತಾಟಕ್ಕೆಂದು
ಕರೆದೊಯ್ದು ಸರಪಳಿ ಬಿಚ್ಚಿಬಿಟ್ಟ ನಾಯಿ ಮರಿಯ
ಜಾಡು ತಿಳಿಯದ ಕಂಗಾಲು.

ಲೋಕಾರೂಢಿಯ ಸುಣ್ಣ ಬಳಿದ ಕೋಣೆಯ
ಒಳಪದರದ ಹಂಬಲದ ಕೆಂಪು.

ಆದರೆ ಅವರು ಕಗ್ಗತ್ತಲ ಕಾಡಿಗೆ ಹೋದರು.

ಕವಡೆಯಾಟ

ಒಬ್ಬಳೇ ಅಂಗಳದಲ್ಲಿ ಕೂತು ಆ ಹುಡುಗಿ
ಕವಡೆಯಾಡುವ ಚಂದವೇನು ಎಸೆದು ಹಿಡಿಯುವ
ಚಿಗುರು ಬೆರಳುಗಳ ಚಾಕಚಕ್ಯವೇನು
ಏರಿಳಿಯುವುದನ್ನೇ ಹಿಂಬಾಲಿಸುವ ಮಿಂಚು ಕಣ್ಣುಗಳೇನು
ಆ ತೊಡೆ ಆ ನಿತಂಬ ಆ ಬೆನ್ನಿನ ಬಾಗು
ಆ ಗಿಚ್ಚ ದೋಚುವ ಸಂಭ್ರಮ

ಯಾರ ಜೊತೆ ಪಂದ್ಯಕ್ಕೆ ಇಷ್ಟೆಲ್ಲ ತಯಾರಿ
ಸೋಲುವಳೇ ಈ ನಿಪುಣೆ ವೈಯಾರಿ

ಕೂತಲ್ಲಿ ಇಷ್ಟಗಲ ಎಡೆಯಲ್ಲಿ
ಸಾಮ್ರಾಜ್ಯಗಳು ಎದ್ದು ಬಿದ್ದು ಮನೆ ಮುರಿದು
ತನ್ನನ್ನೇ ಪಣವಾಗಿಟ್ಟು ಸೋತು ಶರಣಾಗಿ
ಹುಚ್ಚಾಗಿ ಬೆತ್ತಲೆ ಗಲ್ಲಿ ಗಲ್ಲಿ ತಿರುಗುವಂತೆ ಮಾಡಲು

ಕವಡೆ ಮತ್ತು ಕೌಶಲವಿದ್ದರೆ ಸಾಕು.

ಎಕ್ಕ ಹುಟ್ಟಿದ ಮನೆ

ನಾನೇನೂ ಮದನ ಮಸ್ತಿಯಲ್ಲ
ಅವರೂ ತೂ ಮಸ್ತ್ ಮಸ್ತ್ ಹಾಡಲಿಲ್ಲ
ಆ ಹಳೇ ಕಟ್ಟಡದ ಸವಕಲು ಲಿಫ್ಟಿನಲ್ಲಿ
ಕೆಳಗಿಳಿಯುವಾಗ ಪುರಾತನ ವಾಸನೆಯ
ಮಬ್ಬುಗತ್ತಲಲ್ಲಿ ಆವಾಹನೆಯಾದ ರೀತಿಗೆ
ಈ ಹೂವರಳಿತು ಅಷ್ಟೇ.

ಶಾಸ್ತ್ರೋಕ್ತ ತಪ್ಪುಗಳನ್ನು ಸಾಯುವವರೆಗೂ
ಸರಿಪಡಿಸುವುದರಲ್ಲಿಯೇ ಕಳೆಯುತ್ತದೆ.
ಕಾಸು, ಕಮಿಷನ್ ಕೊಟ್ಟು ಕೊಂಡ
ಭ್ರಮೆಗಳ ಹೊಲದಲ್ಲಿ ಕನವರಿಕೆಯ ಕಳೆ.
ದಲ್ಲಾಳಿಗಳು ಅದನ್ನು ನಂದನವನ ಎಂದು ವರ್ಣಿಸುತ್ತಾರೆ.

ಆ ಮನೆಗೇನೂ ಆಗಿರಲಿಲ್ಲ
ಶಿಥಿಲ, ಪಾಳಂತೂ ಅಲ್ಲವೇ ಅಲ್ಲ.
ಅದರ ಕಂಬ, ಗೋಡೆ ಕಪಾಟು ಎಲ್ಲ
ಭದ್ರವಾಗಿ ಸುಸ್ಥಿತಿಯಲ್ಲಿ ಹೊಳೆಯುತ್ತಿದ್ದವು
ಅವರು ಮಾತ್ರ ತುಳಿಸಿಕಟ್ಟೆಯಲ್ಲಿ
ಒಂದು ಎಕ್ಕದ ಗಿಡ ಬೆಳೆಸಿದ್ದರು.
ಗೊಬ್ಬರ ನೀರಿನ ಆರೈಕೆ ಬೇರೆ ಅದಕ್ಕೆ
ಯಾರೂ ಅದನ್ನು ಎಕ್ಕ ಹುಟ್ಟಿದ ಮನೆ
ಅನ್ನುತ್ತಿರಲಿಲ್ಲ.

ಆದರೂ ಕೆಲವು ಮನೆಗಳು
ರಾತ್ರಿ ಕಳೆದು ಬೆಳಗಾಗುವುದರಲ್ಲಿ
ನಾಶವಾಗಿ ಹೋಗುತ್ತವೆ.

ಸಾವು

ಜ್ವಾಲೆಯ ನಡುವೆ ನಿರ್ವಾಣವಾಗಿ ಕೂತ ಯೋಗಿನಿ
ಕೆಂದುಟಿ ಹೃದಯಗಳನ್ನು ಮುಷ್ಟಿಯಲ್ಲಿ ಹಿಡಿದು
ನಾಯಿಮರಿಯ ಅರ್ತತೆಯಲ್ಲಿ ಸದಾ ಎನ್ನ ಹೃದಯದಲ್ಲಿ
ವಾಸ ಮಾಡೆಂದರೆ ಸಾವಿಲ್ಲದ ರೂಹಿಲ್ಲದ ಕೇಡಿಲ್ಲದ
ಚೆನ್ನಮಲ್ಲಿಕಾರ್ಜುನನೂ ಮರೆಯಾಗಿ ವರ್ಷಗಳುರುಳಿಬಿಡುತ್ತವೆ.

ಪಂಚಾಗ್ನಿಯಲ್ಲಿ ಬೆಂದರೂ ಪಶ್ಚಿಮವಾಹಿನಿಯಲ್ಲಿ
ಬೂದಿಯಾಗಿ ತೇಲುವುದಿಲ್ಲ. ಸಾವು ಉತ್ತರವಲ್ಲ.
ವಾಸ್ತವ ಲೋಕದ ಇತಿ ಮಿತಿ ಕಟ್ಟು ಮನೆ ಮಕ್ಕಳು
ಬ್ಯಾಂಕು ಬ್ಯಾಲೆನ್ಸು ಗಡಿಯಾರ ಕ್ಯಾಲೆಂಡರುಗಳ
ಸುಳಿಯಲ್ಲಿ ಒಳದಾರಿ ಕಂಡುಕೊಂಡ ನಾಯಿ ಮರಿಗೆ
ಸಾವು ಒಂದು ಪ್ರಶ್ನೆ.

ಕೊನೆಯ ಸಲ ಬೀಳ್ಕೊಡುವಾಗ ಅವಸರದ ಮುತ್ತು
ಕೆನ್ನೆ ದಾಟಿ ಕಿವಿಗೆ ಬಿತ್ತು. ಕಾಲರಿನ ಮೇಲಿನ
ಲಿಪ್‌ಸ್ಟಿಕ್ ಹುಟ್ಟು ಹಾಕಿದ ಕದನ
ಸಧ್ಯಕ್ಕೆ ವಿರಾಮ. ಏನೇನೋ ಸಂಧಾನ.
ಮೊಲೆ ಕೊಡಲು ಬಂದವಳು ಶವವಾದಂತೆ
ಕವಡೆಯಾಟದಲ್ಲಿ ಗಿಚ್ಚ ದೋಚುವ ಸಂಭ್ರಮದಲ್ಲಿರುವಾಗ
ತಟಕ್ಕನೆ ದೀಪ ಹೋಗುವುದೆಂದು ಯಾರಿಗೆ ಗೊತ್ತಿತ್ತು ?

ಕತೆ.

ನಿನ್ನೆ ಹೇಳಿದ ಕತೆಯಲ್ಲಿ
ಅವನು ಮೊದಲು ರಾಜಕುಮಾರನಾಗಿದ್ದು
ಅವಳು ಮುತ್ತಿಟ್ಟಾಗ ಕಪ್ಪೆಯಾಗಿಬಿಟ್ಟ
ನನಗೆ ಕತೆ ಹೇಳಲು ಬರುವುದಿಲ್ಲ
ಅಂತ ಮಕ್ಕಳ ಗಲಾಟೆ.

ಪುನರಪಿ

ಕ್ಷಮಿಸಿ. ನಿನ್ನೆಗೇ ಮುಗಿಯಿತು ಮಾರಾಟ
ಬಾಕಿ ಏನೂ ಉಳಿದಿಲ್ಲ ಎಲ್ಲವೂ ಖಾಲಿಯಾಯಿತು
ಬೋರ್ಡು ಕೆಳಗಿಳಿಸಿ ಲೆಕ್ಕ ಚುಕ್ತಾ ಮಾಡಿ
ಟ್ರಕ್ಕು ಹೊರಟು ನಿಂತಿದೆ.

ಮುಗಿದಿಲ್ಲ. ಒಳಗೆ ಬಚ್ಚಿಟ್ಟ ಕಳ್ಳ ಮಾಲು ಒಮ್ಮೊಮ್ಮೆ
ಕದ್ದು ಹೊರಬಂದು ಬಿಕರಿಗೆ ನಿಂತುಬಿಡುತ್ತವೆ.
ಅಂಗಡಿಯಿರುವುದೇ ಗೊತ್ತಿಲ್ಲದೆ ಗಿರಾಕಿಗಳಿಲ್ಲ
ಮೊಮ್ಮಕ್ಕಳು ಆಡುವಾಗ ಒಂದು ಕಣ್ಣಿಡಲು
ಜಗಲಿಯಲ್ಲಿ ಕೂತಾಗ ಯಾರೋ ಬಂದು ವಿಚಾರಿಸುತ್ತಾರೆ
ವ್ಯಾಪಾರ ಕುದುರುತ್ತದೆ. ಕೊಳು ಕೊಡುಗೆ ಕೊನೆತನಕ

ಎನ್ನುತ್ತಾ ತಂಬಾಕು ತುಟಿಗಳು
ಮತ್ತೆ ಮುದ್ದಿಸುವುದನ್ನು ಕಲಿಸುತ್ತವೆ.

ಎಸ್. ಮಂಜುನಾಥ್

ಸ್ಪರ್ಶದ ಬಲೆ

ಕೈ ಮೇಲೆ ಕೈಯಿಟ್ಟರು ಅವರು
ವಾಸ್ತವವಾಗಿ, ಒಂದು ಹೋಟೆಲಲ್ಲಿ, ತಿಂಡಿ ಹೇಳಿ
ಮಾಣಿ ತೆರಳಿದ್ದ ಅಂತರದಲ್ಲಿ
ಆ ಕ್ಷಣ ಎಲ್ಲವೂ ನಿಶ್ಚಯವಾಯಿತು
ಕೈಯಿಟ್ಟ ಮೇಲೇನೆಂದು ನಿನಗೆ ಗೊತ್ತು
ಬೀಸಿ ಸ್ಪರ್ಶದ ಭ್ರಮೆ ಹಿಂದು ಮುಂದಣ
ಜನ್ಮಾಂತರಗಳ ವಾಸನೆಯ ನಂಟು
ಹಿಡಿಯಿತು, ಕಟ್ಟಿ ಕೆಡಹಿತು ಬಲೆಯಲ್ಲಿ

ಅಲ್ಲೇ ಕೂಡಿದರು ಹಡೆದರು ಕಾಳು
ಭೂಮಿ ಮೇಲೊಂದು ಕೆಸರು ಗದ್ದೆಯಾಯಿತು ಬಾಳು
ಕೊಳ ಚಂದ್ರನನ್ನೂ ಬಿಂಬಿಸಿತು
ಕೊಳುಗುಳ ಇಜ್ಜೋಡಿ ತೊಡೆ ನಡುವೆ
ಕ್ರೀಡೆಯೋ ಕದನವೋ ತ್ರಾಣವೆಲ್ಲಾ ಹರಿದು
ನೆತ್ತರು ಕಂಡು ಬಂದು ಬಿದ್ದರು ಅಖಾಡದಂಚಿಗೆ
ದಣಿದು ಕೈ ಹಿಡಿದು ಮೈಗೆ ಮೈಯಾಗಿ
ರೆಕ್ಕೆ ಬಡಿಯುತಿಹವು ಹಕ್ಕಿಗಳು ಚಪ್ಪಾಳೆ
ಕುಟ್ಟುತ್ತಿಹರು ಅವರದೇ ಮಕ್ಕಳು ಹಲ್ಲು ಕಿಸಿದು
ಈಗ ಏದುಸಿರು ಕಣ್ಣು ಮಬ್ಬು ಗಗನ
ಕೆಸರೊಳಗೇ ಕಲಸಿ ಹೋಗುವ ಬಯಕೆ
-ತಟ್ಟೆಗಳು ಬರುವ ಅಂತರದಲ್ಲಿ
ನಿಶ್ಚಯವಾಯಿತು ಈ ಎಲ್ಲಾ
ಹಾಗಾಗಿ ಕೈ ಮೇಲೆ ಕೈ ಇಡುವ ಮುನ್ನ
ಬಹಳ ಎಚ್ಚರಬೇಕು ಕೈಯಿಡದಿರುವ ಮುನ್ನ

280 ಕೋಟಿ ರೂ. ನಿಧಿ ತಳಹದಿ, 181 ಕೋಟಿ ರೂ.ಠೇವಣಿಗಳ ಗುರಿಸಾಧನೆ

ಕರ್ನಾಟಕ ರಾಜ್ಯದ ಅಪ್ರತಿಮ ಹಾಗೂ ರಾಷ್ಟ್ರದ ಖಾಸಗಿ ಹಣಕಾಸು ರಂಗದಲ್ಲಿ ಉನ್ನತ ಸ್ಥಾನಮಾನವನ್ನು ಪಡೆದಿರುವ ಐಸಿಡಿಎಸ್ ಲಿಮಿಟೆಡ್ 280 ಕೋಟಿ ರೂ. ನಿಧಿ ತಳಹದಿ ಹೊಂದಿದ್ದು 181 ಕೋಟಿ ರೂಪಾಯಿಗಳ ಠೇವಣಿ ಗುರಿದಾಟಿದ್ದು ಮುಂದಿನ ದಿನಗಳಲ್ಲಿ ಹೊಸ ಸಾಧನೆಗಳೊಂದಿಗೆ ನೂತನ ಗುರಿಗಳನ್ನು ಮುಟ್ಟಲು ಸಜ್ಜಾಗಿ ನಿಂತಿದೆ.

10 ಮಿಲಿಯನ್ ಡಾಲರ್ ಎಡಿಬಿ ಧನ ಸಹಾಯ

ಜನತೆಯ ಅಪಾರ ವಿಶ್ವಾಸಗಳಿಸಿರುವ ಐಸಿಡಿಎಸ್ ಲಿಮಿಟೆಡ್, ದೇಶ ಹಾಗೂ ವಿದೇಶಗಳ ಸಾರ್ವಜನಿಕ ಹಣಕಾಸು ಸಂಸ್ಥೆಗಳ ಅಪಾರ ಧನಸಹಾಯ ಪಡೆಯುತ್ತಿದ್ದು ಇದೀಗ ಏಶಿಯನ್ ಡೆವಲಪ್‌ಮೆಂಟ್ ಬ್ಯಾಂಕ್‌ನಿಂದ 10 ಮಿಲಿಯನ್ ಡಾಲರ್‌ಗಳಷ್ಟು ಸಾಲವನ್ನು ಪಡೆದಿದೆ. ಇದು ಸಂಸ್ಥೆಯ ವ್ಯವಹಾರಗಳಿಗೆ ಸಹಕಾರಿಯಾಗಿ ಹೆಚ್ಚು ಲಾಭಾಂಶವನ್ನು ಗಳಿಸಲು ಅನುಕೂಲವಾಗಿದೆ.

ಐಸಿಡಿಎಸ್ ಲಿಮಿಟೆಡ್ ಈಗಾಗಲೇ ಐಸಿಐಸಿಐ, ಐಡಿಬಿಐ, ಐಎಫ್‌ಸಿಐ, ಎಸ್‌ಐಡಿಬಿಐ ಮುಂತಾದ ಸಂಸ್ಥೆಗಳಿಂದ ಹಣ ಸಹಾಯ ಪಡೆಯುತ್ತಿರುವುದು ಗಮನಾರ್ಹ ವಿಷಯವಾಗಿದೆ. ಇದು ಮೇಲೆ ಹೇಳಿರುವ ಸಂಸ್ಥೆಗಳು ಐಸಿಡಿಎಸ್ ಲಿಮಿಟೆಡ್‌ನಲ್ಲಿ ಇಟ್ಟಿರುವ ನಂಬಿಕೆಯನ್ನು ದೃಢೀಕರಿಸುತ್ತದೆ.

ಈಗಾಗಲೇ ಸಂಸ್ಥೆಯು ತನ್ನ ಠೇವಣಿ ಯೋಜನೆಗಳಿಗೆ ಕ್ರಿಸಿಲ್‌ರವರಿಂದ ಎಫ್‌ಎಎ+ಚಿಹ್ನೆಯನ್ನು ಗಳಿಸಿದ್ದು ಈ ಯೋಜನೆಗಳು ಹೆಚ್ಚು ಜನಪ್ರಿಯವಾಗಿದೆ.

ಹೆಚ್ಚಿನ ಮಾಹಿತಿಗಾಗಿ ನಿಮ್ಮ ಅತಿ ಸಮೀಪದ ಕಚೇರಿಯನ್ನು ಸಂಪರ್ಕಿಸಿ.

ಐಸಿಡಿಎಸ್ ಲಿಮಿಟೆಡ್

ಠೇವಣಿ • ಹೈಯರ್ ಪರ್ಚೇಸ್ • ಲೀಸ್ • ಮರ್ಚೆಂಟ್ ಬ್ಯಾಂಕಿಂಗ್

ರಿಜಿಸ್ಟರ್ಡ್ ಕಚೇರಿ: ಸಿಂಡಿಕೇಟ್ ಹೌಸ್, ಮಣಿಪಾಲ–576 119

ಐಸಿಡಿಎಸ್ ಲಿ.–ಮುಂದುವರಿಯುತ್ತಿರುವ ವಿಶ್ವಾಸಾರ್ಹ ಸಂಪ್ರದಾಯ

ADSYNDICATE – MANIPAL

ನಿಮ್ಮ ಅತಿ ಸಮೀಪದ ಕಚೇರಿಗಳು: • ಸಿಂಡಿಕೇಟ್ ಹೌಸ್, ಮಣಿಪಾಲ – 576 119 ☎ 71121 (15 lines) • ಮಣಿಪಾಲ್ ಇಂಡಸ್ಟ್ರೀ ಬಿಲ್ಡಿಂಗ್, ಮಾರುಥಿ ವೀಥಿಕಾ ರೋಡ್, ಉಡುಪಿ – 576 101 ☎ 24937 • ಸಿಟಿ ಪಾಯಿಂಟ್, ಕೊಡಿಯಾಲ್‌ಬೈಲ್, ಮಂಗಳೂರು – 575 003 ☎ 441076 • 450/23, ಒಂದನೇ ಮಹಡಿ, ಗೋಪಾಲ್ ಟವರ್ಸ್, ಮುಖ್ಯ ರಸ್ತೆ, ಕಾರ್ಕಳ – 574 104 ☎ 32270 • ಕ್ಷಿತಿ ಕಾಂಪ್ಲೆಕ್ಸ್, ಜೆ.ಪಿ.ಎನ್. ರಸ್ತೆ, ಶಿವಮೊಗ್ಗ – 577 201 ☎ 44280 • 1 ಮತ್ತು 2 ಸಲಾರ್ ಚೇಂಬರ್ಸ್, ವುಡ್‌ಲ್ಯಾಂಡ್ ಥಿಯೇಟರ್ ಎದುರುಗಡೆ, ಮೈಸೂರು–ಊಟಿ ರಸ್ತೆ, ಮೈಸೂರು–570 001 ☎ 25068 • ಸೌತ್ ಬ್ಲಾಕ್, ಡಿಕ್ಕನ್‌ಸನ್ ರೋಡ್, ಮಣಿಪಾಲ ಸೆಂಟರ್, ಬೆಂಗಳೂರು – 560 042 ☎ 5584166, 5584167.

ಪುಸ್ತಕ
ಪುಸ್ತಕ
ಪುಸ್ತಕ ವಿಭಾಗ

ಆರೋಗ್ಯಕರ ದೃಷ್ಟಿಯ ಹೊಸ ಹೊಳವುಗಳು.

ನಾ. ಡಿಸೋಜ

ಕೃತಿ ಸಂಸ್ಕೃತಿ. ಎಂ. ಜಿ. ಕೃಷ್ಣಮೂರ್ತಿ. ರುಜುವಾತು ಪ್ರಕಾಶನ. ಹೆಗ್ಗೋಡು, ಬೆಲೆ ೧೨೦-ರೂ. ಪುಟ : ೩೪೫ + ೧೯.

೧೯೭೦ ರಲ್ಲಿ ಅಕ್ಷರ ಪ್ರಕಾಶನ ಪ್ರಕಟಿಸಿದ **ಆಧುನಿಕ ಭಾರತೀಯ ಸಾಹಿತ್ಯ ಮತ್ತು ಇತರ ಲೇಖನಗಳು**, ಮೂರು ಹೊಸ ಲೇಖನಗಳನ್ನು ಸೇರಿಸಿಕೊಂಡು ಇಪ್ಪತ್ನಾಲ್ಕು ವರ್ಷಗಳ ನಂತರ **ಕೃತಿಸಂಸ್ಕೃತಿ** ಯಾಗಿ ಹೊರ ಬಂದಿದೆ. ಹಾಗೆ ನೋಡಲು ಹೋದರೆ ಇಲ್ಲಿಯ ಬಹುತೇಕ ಲೇಖನಗಳು ಪ್ರಕಟವಾದದ್ದು ಅರವತ್ತರ ದಶಕದಲ್ಲಿ. ಅವು ನವ್ಯ ಸಾಹಿತ್ಯದ ಪ್ರಾರಂಭದ ದಿನಗಳು. ಕನ್ನಡದ ಓದುಗರು ರೂಢಿಗತವಾದ ಒಂದು ಸಾಹಿತ್ಯ ಪಂಥಕ್ಕೆ ಸಂಪೂರ್ಣವಾಗಿ ಹೊಂದಿಕೊಂಡ ಸಂದರ್ಭದಲ್ಲಿ, ನವ್ಯ ಸಾಹಿತ್ಯ ಒಂದು ಗೊಂದಲವನ್ನು, ಓದುಗ ಬರಹಗಾರರ ನಡುವೆ ತಂದು ಹಾಕಿತು ಎಂಬುದು ಸುಳ್ಳಲ್ಲ. ಆಗ, ಅನಂತಮೂರ್ತಿಯವರು ಹೇಳಿರುವ ಹಾಗೆ "......ಸಹಸ್ರಾರು ಓದುಗರು ಕೊಡಲಾರದ ಪೋಷಣೆಯನ್ನು ನಮ್ಮ ಬರವಣಿಗೆಯ ಪ್ರಾರಂಭದಲ್ಲಿ ಕೊಟ್ಟವರು ಎಂ. ಜಿ. ಕೆ. ". ಅಂದು ಹೊರಬಂದ ನವ್ಯ ಸಾಹಿತ್ಯದ ಮಹತ್ವದ ಕೃತಿಗಳಾದ ಅಡಿಗರ **ಭೂಮಿ ಗೀತ** ಅನಂತಮೂರ್ತಿಯವರ **ಸಂಸ್ಕಾರ** ಲಂಕೇಶರ **ಬಿರುಕು** ಮೊದಲಾದವುಗಳ ಬಗ್ಗೆ ಎಂ. ಜಿ. ಕೆ. ಬರೆದರು.

ಎಂ. ಜಿ. ಕೆ. ಯವರ ವಿಮರ್ಶೆ ಎಂದರೆ, ಗೋಪಾಲಕೃಷ್ಣ ಅಡಿಗರು ಒಪ್ಪಿಕೊಂಡಿರುವಂತೆ "ಒಂದು ಕೃತಿಯನ್ನು ವಸ್ತು ನಿಷ್ಠವಾಗಿ, ಆಳವಾಗಿ ಓದಿ, ತಿಳಿದು, ಆನಂದಿಸಿ, ಅದರ ಪ್ರಬಂಧ ಧ್ವನಿಯನ್ನು ಗ್ರಹಿಸಿ, ಅನಂತರ ಅದನ್ನು ವಿಮರ್ಶೆಗಾಗಿ, ಸ್ವಾನುಭವ ಸ್ಪಷ್ಟೀಕರಣಕ್ಕಾಗಿ ವಿಶ್ಲೇಷಿಸುವ ಬುದ್ಧಿ ಶಕ್ತಿ, ಸಹನೆ, ಪರಿಶ್ರಮ......" ಈ ಎಲ್ಲ ಗುಣಗಳೂ ಎಂ. ಜಿ. ಕೆ. ಯವರಲ್ಲಿ ಇವೆ ಎಂದೇ ಅಡಿಗರು "ಉತ್ತಮ ವಿಮರ್ಶಕನ ಎಲ್ಲ ಗುಣಗಳನ್ನು ಇವರು ಪಡೆದಿದ್ದಾರೆ" ಎಂಬ ಮಾತನ್ನು ಹೇಳುತ್ತಾರೆ.

ಎಂ. ಜಿ. ಕೆ. ಯವರು ಅಡಿಗರ **ಭೂಮಿ ಗೀತ**ದ ವಿಮರ್ಶೆ ಆರಂಭಿಸುವ ಮುನ್ನ, ನವ್ಯ ಕಾವ್ಯವನ್ನು ವಿಮರ್ಶಿಸುವಾಗ ಏಳುವ ಸಮಸ್ಯೆಗಳ ಬಗ್ಗೆ ಚರ್ಚಿಸುತ್ತಾರೆ. ನವೋದಯ ಕಾವ್ಯದ ಸೋಲಿಗೆ ಕಾರಣ ಏನಿರಬಹುದು ಎಂಬುದನ್ನು ಶೋಧಿಸಿ, ಇಂದಿನ ಅನುಭವದಿಂದ ದೂರವಾದ ಕಾವ್ಯಾನುಭವವನ್ನು ಮತ್ತೆ ಮತ್ತೆ ಮೆಲುಕು ಹಾಕಲಿಷ್ಟಪಡದ ಕವಿಗಳು ಹೊಸದಾರಿ ಹುಡುಕಿಕೊಳ್ಳಲೇ ಬೇಕಾದುದ್ದನ್ನು ಸಮರ್ಥಿಸಿ, ಈ ಹೊಸ ದಾರಿ **ಭೂಮಿ ಗೀತ** ದಲ್ಲಿ ಹೇಗೆ ಸಾರ್ಥಕತೆಯನ್ನು ಪಡೆದಿದೆ ಎಂಬುದನ್ನು ಗುರುತಿಸುತ್ತಾರೆ. "ಜೀವನದ ಬೇರು ಹುಡುಕುವ" ಭೂಮಿಗೀತ ಕವನದ ಪ್ರತಿ ಸಾಲು, ಪ್ರತಿ ಶಬ್ದವನ್ನು ಹಿಂಜಿ ಹಿಂಜಿ, ಅದರ ಮೂಲಕ ಇಡೀ ಪದ್ಯದ ಆಶಯವನ್ನು ಓದುಗರಿಗೆ ಮನವರಿಕೆ ಮಾಡಿಕೊಡುವ

ಎಂ. ಜಿ. ಕೆ. "ಇದು ಉಳಿಯುವ ಕವನ. ಅನುಭವವನ್ನು ಸಡಿಲಮಾಡುವ ವರ್ಗದ ರೊಮ್ಯಾಂಟಿಕ್ ಕವನವಲ್ಲ" ಎಂದು ಅಭಿಪ್ರಾಯ ಪಡುತ್ತಾರೆ.

ಅನಂತಮೂರ್ತಿಯವರ **ಸಂಸ್ಕಾರ** ಕಾದಂಬರಿಯನ್ನು ಕುರಿತು ಬರೆಯುತ್ತ "ಅತ್ಯಂತ ಪ್ರಬಲವಾದ ಪ್ರವೃತ್ತಿಗೆ ಜೀವನದಲ್ಲಿ ಸಾಕಷ್ಟು ಸ್ಥಾನ ಕೊಡದಿರುವುದರಿಂದಲೇ" ಅಗ್ರಹಾರದಲ್ಲಿ ಒಂದು ಪ್ರಸಂಗ ನಡೆಯಿತೆಂಬುದನ್ನು ಸವಿಸ್ತಾರವಾಗಿ ವಿಶ್ಲೇಷಿಸುತ್ತಾರೆ. **ಬಿರುಕು** ಕಾದಂಬರಿಯ ಬಸವರಾಜನ ವ್ಯಕ್ತಿತ್ವ, ಅನುಭವವನ್ನು ಓದುಗನದನ್ನಾಗಿ ಮಾಡಿಕೊಡಲು ಲೇಖಕರು ಉಪಯೋಗಿಸಿಕೊಂಡಿರುವ ತಂತ್ರ ವಿಧಾನವಾಗಿರಬಹುದು ಎಂಬುದನ್ನು ಒಪ್ಪಿಕೊಂಡು, ಅಲ್ಲಿಯ ಪಾತ್ರ, ಘಟನೆಗಳ ಮೂಲಕ ವಿಮರ್ಶಿಸುತ್ತಾರೆ.

ಈ ಕೃತಿಗಳನ್ನೇ ಅಲ್ಲದೆ ಕತೆಯ ದೃಷ್ಟಿಯಿಂದ ಬೆಳವಣಿಗೆ ಇದ್ದರೂ, ವಸ್ತು (theme) ವಿನ ದೃಷ್ಟಿಯಿಂದ ಬೆಳವಣಿಗೆ ಇಲ್ಲದೆ ಸೋತಿರುವ **ಕಾನೂರು ಹೆಗ್ಗಡತಿ**, ಕಾದಂಬರಿಗೆ ಬಂಧವನ್ನೊದಗಿಸುವ ದೃಷ್ಟಿಕೋನದಲ್ಲೇ ಬಿರುಕು ಇರುವುದರಿಂದ ಅಯಶಸ್ವಿಯಾದ **ಮಲೆಗಳಲ್ಲಿ ಮದುಮಗಳು**, ವಿಷಯ ಏನೇ ಆದರೂ ಉದ್ರೇಕಗೊಳ್ಳದೆ ಕತೆ ಹೇಳುವ, ನಮ್ಮ ಪ್ರಾಚೀನ ಸಾಹಿತ್ಯದ ಪ್ರಭಾವವನ್ನೇ ಮುಂದುವರಿಸಿರುವ ಮಾಸ್ತಿಯವರ ಕಥನ ಕಲೆ, ಜೀವನವನ್ನು ನೋಡುವ ದೃಷ್ಟಿಯಿಂದಾಗಿ ಯಶಸ್ವಿಯಾಗಿರುವ ಗ್ರಾಮಾಯಣ, ಕಾರಂತರ ಐದು ಕಾದಂಬರಿಗಳ ಚಿಂತನ, ಮಂಥನ, ಲೇಖಕನ ಅನುಭವಕ್ಕೂ ಮೌಲ್ಯಗಳಿಗೂ ಅರ್ಥಪೂರ್ಣ ಸೆಣಸಾಟ ನಡೆಯದ್ದರಿಂದ ಅಸಫಲವಾದ **ದಾಟು**, ಹೀಗೆ ಹಲವು ಕಥೆ ಕಾದಂಬರಿಗಳು ಅವರ ವಿಮರ್ಶೆಯ ಪರಿಧಿಯಲ್ಲಿ ಹಾದು ಬಂದಿವೆ. ವಿಶೇಷವೆಂದರೆ ಹೇಳುವ ಪ್ರತಿ ಮಾತು, ವಾಕ್ಯಗಳನ್ನು ಎಂ. ಜಿ. ಕೆ. ಆಧಾರ ಸಹಿತ ಹೇಳುತ್ತಾರಲ್ಲದೆ ಎಲ್ಲಿಯೂ ತೇಲಿಸಿ ಬರೆಯುವುದಿಲ್ಲ.

ಇಂಗ್ಲಿಷ್ ಭಾಷೆಯನ್ನು ಭಾರತೀಯರ ಮೇಲೆ ಹೇರಲಾಯಿತು, ಪಾಶ್ಚಾತ್ಯರ ಪ್ರಭಾವದಿಂದಾಗಿ ನಮ್ಮಲ್ಲಿ ಗದ್ಯವು ಪರಿಣಾಮಕಾರಿ ಸಂಪರ್ಕಸಾಧನವಾಗಿ ಬೆಳೆಯಿತು ಎಂಬಂತಹಾ ಹೇಳಿಕೆಗಳನ್ನು ಎಂ. ಜಿ. ಕೆ. ಯವರು ಸಮರ್ಥವಾಗಿ ನಿರಾಕರಿಸುತ್ತಾ, **ಆಧುನಿಕ ಭಾರತೀಯ ಸಾಹಿತ್ಯ** ಬೆಳೆದು ಬಂದ ದಾರಿಯನ್ನು ಗುರುತಿಸುತ್ತಾರೆ. ಗ್ರಹಣ ಶೀಲವೂ, ಕ್ರಿಯಾ ಶೀಲವೂ ಆಗಿದ್ದ ಭಾರತೀಯ ಮನಸ್ಸು ಬಾಲಿಶವಾದ ಭಾವಾತಿರೇಕದ ಕೀಳು ಮಟ್ಟಕ್ಕೆ ಇಳಿಯಲು ಕಾರಣವೇನು ಎಂಬುದನ್ನು ವಿಶ್ಲೇಷಿಸುತ್ತಾ, ನಮ್ಮ ಭಾಷೆಯ ಸಾಹಿತ್ಯದ ಪೂರ್ಣ ಅರಿವಿಲ್ಲದ ನಾವು, ಮತ್ತೊಂದು ಭಾಷೆಯ ಎರಡನೇ ದರ್ಜೆಯ ಬರಹಗಾರರಿಗೆ ಮರುಳಾದುದನ್ನು, ಕ್ರಮೇಣ ವಿಕ್ಟೋರಿಯಾ ರಾಣಿಯ ಕಾಲದ ಇಂಗ್ಲೆಂಡಿನಲ್ಲಿ ರೂಢವಾದ ಜಡ ನೀತಿ ಭಾರತವನ್ನು ಆಕ್ರಮಿಸಿಕೊಂಡು ಅದರ ಪ್ರಭಾವ ನಮ್ಮ ಕಥೆ, ಕಾದಂಬರಿ, ನಾಟಕ, ವಿಮರ್ಶೆಗಳ ಮೇಲೆ ಆದುದನ್ನು ಸವಿವರವಾಗಿ ಚರ್ಚಿಸುತ್ತಾರೆ. **ಪರಕೀಯ ಸಾಹಿತ್ಯಗಳಿಗೆ ನಮ್ಮ ಪ್ರತಿಕ್ರಿಯೆಗಳು: ಕೆಲವು ಸಮಸ್ಯೆ** ಎಂಬ ಲೇಖನದಲ್ಲಿ, ನಮ್ಮ ತಾಯಿನುಡಿಯಲ್ಲದ ಭಾಷೆಯೊಂದಿಗೆ ಆಂತರಿಕ ಸಂಬಂಧ ಹೊಂದಲು ಸಾಧ್ಯವಿಲ್ಲದಿರುವುದರಿಂದ, ಆ ಭಾಷೆಯ ಸಾಹಿತ್ಯಕ್ಕೆ ನಾವು ಪ್ರತಿಕ್ರಿಯಿಸುವುದು ಒಂದು ಸಮಸ್ಯೆಯಾದೀತೆ ಎಂಬ ಬಗ್ಗೆಯೂ ತಮ್ಮ ವಿಚಾರಗಳನ್ನು ಉದಾಹರಣೆಗಳ ಸಹಿತ ಮಂಡಿಸುತ್ತಾರೆ.

ಐದು ವಚನಗಳು : ಒಂದು ವಿಶ್ಲೇಷಣೆ, ಆಧುನಿಕ ಕನ್ನಡ ಕಥಾಸಾಹಿತ್ಯ : ಒಂದು ಮುನ್ನುಡಿ, ಕನ್ನಡದಲ್ಲಿ ಸಾಹಿತ್ಯ ವಿಮರ್ಶೆಯ ಬೆಳವಣಿಗೆ, ಕಲಾವಿದ ಮತ್ತು ಸಮಾಜಗಳ ನಡುವಿನ ಬದಲಾಗುತ್ತಿರುವ ಸಂಬಂಧ ಈ ಲೇಖನಗಳು ಹಲವು ಹೊಸ ಹೊಳವುಗಳನ್ನು ವಿಚಾರಗಳನ್ನು, ಆರೋಗ್ಯಕರವಾದ ಚಿಂತನಗಳನ್ನು ಓದುಗರ ಮುಂದೆ ಇಡುತ್ತವೆ.

"ಅವರ ನಿರ್ಣಯಗಳನ್ನು ನಾವು ಒಪ್ಪುವುದು ಬಿಡುವುದು ಮುಖ್ಯವಲ್ಲ. ಅವರ ವಿಮರ್ಶೆ ಓದುವಾಗ, ಒಂದು ಕೃತಿಯನ್ನು ಅವರ ಜೊತೆ ಕೂತು ಓದಿದಂತೆ ನಮಗೆ ಅನ್ನಿಸಿದರೆ, ಈ ಓದಿನಿಂದ ಒಂದು ಕೃತಿ ನಮಗೆ ಹೆಚ್ಚು ತೆರೆದುಕೊಂಡಂತೆ ಆಯಿತು ಎಂದು ನಮಗೆ ಅನ್ನಿಸಿದರೆ - ಸಾಕು'' ಎಂಬ ಅನಂತಮೂರ್ತಿಯವರ ಮಾತಿಗೆ ಇಲ್ಲಿಯ ಎಲ್ಲ ಲೇಖನಗಳೂ ನಿದರ್ಶನಗಳಾಗಿವೆ.

ಏಪ್ರಿಲ್ ೧೯೭೫ರಲ್ಲಿ ಎಂ. ಜಿ. ಕೆ. ಯವರು ತಿರಿಕೊಂಡಾಗ ಅವರಿಗೆ ಕೇವಲ ನಲವತ್ನಾಲ್ಕು ವರ್ಷ. ಕನ್ನಡ ಸಾಹಿತ್ಯ ಲೋಕ ಒಬ್ಬ ಸಮರ್ಥ ವಿಮರ್ಶಕನನ್ನು ಅವನ ಹರೆಯದಲ್ಲೇ ಕಳೆದುಕೊಂಡಿತು ಎಂಬುದು ಕ್ಲೀಶೆಯ ಮಾತಾದರೂ, ರುಜುವಾತು ಪ್ರಕಾಶನ **ಕೃತಿ ಸಂಸ್ಕೃತಿ** ಯನ್ನು ಪ್ರಕಟಿಸಿ ಸಾಹಿತ್ಯ ಕ್ಷೇತ್ರಕ್ಕೆ ಉಪಕಾರವನ್ನೇ ಮಾಡಿದೆ ಎಂಬುದನ್ನು ಹೇಳಲೇ ಬೇಕಾಗಿದೆ.

ಹಿತ್ತಿಲ ಗಿಡಗಳು ಮದ್ದಲ್ಲವೆ ?

ಪ್ರಸನ್ನ.

ಹಿತ್ತಿಲ ಅಕ್ಕ. ಲೇಖಕಿ :**ಚೇನಂಡ ಗಂಗಮ್ಮ** ಪ್ರಕಾಶಕರು : ಮಹಿಳಾ ಸಮಖ್ಯಾ. ೨೭೬, ೨ನೇ ಅಡ್ಡ ರಸ್ತೆ. ಕೇಂಬ್ರಿಜ್ ಲೇಔಟ್ ಬೆಂಗಳೂರು-೫೬೦ ೦೦೮ ಬೆಲೆ :ರೂ. ೫೦ /-

ಹಿತ್ತಿಲ ಅಕ್ಕ ಒಂದು ಸರಳವಾದ ಪುಸ್ತಕ. ಹಿತ್ತಿಲಲ್ಲಿ ದೊರಕುವ ಔಷಧೀಯ ಸಸ್ಯಗಳ ಉಪಯುಕ್ತ ಮಾಹಿತಿ ಕೊಡುವ, ಎಲ್ಲರೂ ಓದಬೇಕಾದ ಪುಸ್ತಕವಿದು. ಈ ಪುಸ್ತಕ ಓದುವಾಗ ಇಂತಹ ಹಲವು ಪುಸ್ತಕಗಳತ್ತ, ಹಲವು ಸಂಗತಿಗಳತ್ತ ನನ್ನ ಮನಸ್ಸು ಹರಿಯಿತು. ಆ ಬಗ್ಗೆ ಬರೆಯುತ್ತೇನೆ. **ಅಪ್ಪಟ ಸಾಹಿತ್ಯ** ಕೃತಿಯನ್ನು ಮಾತ್ರ ಗಮನಿಸಿ ಮಿಕ್ಕ ಪುಸ್ತಕಗಳನ್ನು ಅಸಡ್ಡೆ ಮಾಡುವ ಪ್ರವೃತ್ತಿ ಕನ್ನಡಿಗರಿಗೆ ಬೆಳೆದು ಬಂದಿರುವುದರಿಂದ ಕೊಂಚ ವಿವರವಾಗಿಯೇ ಬರೆಯುತ್ತೇನೆ.

ಬಿ. ಜಿ. ಎಲ್. ಸ್ವಾಮಿ ಈ ಹಿಂದೆ ಇಂತಹುದೇ ಒಂದು ಸುಂದರವಾದ ಪುಸ್ತಕ ಬರೆದಿದ್ದರು. ನನ್ನ **ಹೊಟ್ಟೆಯಲ್ಲಿ ದಕ್ಷಿಣ ಅಮೇರಿಕ** ದಕ್ಷಿಣ ಅಮೇರಿಕೆಯಿಂದ ಬಂದು ಕನ್ನಡಿಗರ ಅಡಿಗೆ ಮನೆ ಸೇರಿರುವ ತರಕಾರಿಗಳು, ಮತ್ತು ಸಸ್ಯಗಳ ಕತೆ ಹೇಳುವ ಪುಸ್ತಕ. ವಿಜ್ಞಾನ ಲೇಖನವನ್ನ ಸಾಮಾನ್ಯವಾಗಿ ಬಡಿಯುವ ಬರಡುತನ ನಿವಾರಿಸಿ ಪತ್ತೇದಾರಿ ಕಾದಂಬರಿಯಷ್ಟು ರೋಚಕವಾಗಿ ಮರಗಿಡಬಳ್ಳಿಗಳ ಬಗ್ಗೆ ಬಿ. ಜಿ. ಎಲ್. ಸ್ವಾಮಿ ಬರೆಯಬಲ್ಲರು. ಸ್ವಾಮಿಯವರ ಪುಸ್ತಕ ಓದಿದ ನಾನು, ನನ್ನ ಮನೆಯ ಮಡಿಹೆಂಗಸರ ಆಹಾರ ಪದ್ದತಿಯ ಬಗ್ಗೆ ಯೋಚಿಸಿದ್ದೆ. ಬ್ರಾಹ್ಮಣ ಮಡಿಹೆಂಗಸರಿಗೆ ಸಮುದ್ರದಾಚೆನಿಂದ ಬಂದ ಈರುಳ್ಳಿ, ಬದನೇಕಾಯಿ ಮೊದಲಾದವು ವರ್ಜ್ಯ. ಆದರೆ ಹಸಿಮೆಣಸಿನಕಾಯಿ, ದಕ್ಷಿಣ ಅಮೇರಿಕೆಯಿಂದ ಸಮುದ್ರದಾಟಿ ಬಂದದ್ದು, ವರ್ಜ್ಯವಲ್ಲ. ಯಾಕೆ ? ಹೇಗೆ ? ಎಂದು ಚಿಂತಿಸಿದ್ದೆ.

ಸಂಸ್ಕೃತಿಗಳ ಅಧ್ಯಯನಕ್ಕೆ, ಆಹಾರ ಪದ್ದತಿಗಳು ಅದ್ಭುತ ಮಾಧ್ಯಮಗಳಾಗಬಲ್ಲವು. ಉದಾಹರಣೆಗೆ **ಪತ್ರಡೆ**ಯನ್ನೇ ತೆಗೆದುಕೊಳ್ಳಿ. ಮಲೆನಾಡು, ಹಾಗೂ ಕನ್ನಡ ಜಿಲ್ಲೆಯ ಕೊಂಕಣಿಗರಲ್ಲಿ ಅಪಾರ ಜನಪ್ರಿಯತೆ ಪಡೆದ ತಿನಿಸದು. ಕೆಸುವಿನ ಎಲೆಯಲ್ಲಿ ಖಾರದ ಹಿಟ್ಟು ಸುತ್ತಿ, ಬೇಯಿಸಿ, ತುಂಡು ಮಾಡಿ, ಮತ್ತೆ ಹುರಿದು, ತಯಾರುಮಾಡುವ **ಪತ್ರಡೆ** ಮಲೆನಾಡಿನ ಕಾಡಿಗಷ್ಟೇ ಸೀಮಿತವಾದ ತಿನಿಸು ಅಂದುಕೊಂಡಿದ್ದೆ. ಆದರೆ **ಪತ್ರಡೆ** ಕನ್ಯಾಕುಮಾರಿಯಿಂದ ಕಾಶ್ಮೀರದ ವರೆಗೆ, ಅರಬ್ಬೀ ಸಮುದ್ರಗುಂಟ ಎಲ್ಲ ಕಡೆಗೂ ಲಭ್ಯವಂತೆ. ಗುಜರಾತಿನಲ್ಲಿ ಪತ್ರಡೆ ಮಾಡುವ ಕೆಸುವಿನ ಎಲೆಗೆ ಬೇಡಿಕೆಯಂತೆ.

ತಮಿಳು ನಾಡಿನ ತಿಳಿಸಾರು **ಮುಳಗತಣ್ಣಿ** - ಒಬ್ಬ ಬಡ ಅಡಿಗೆ ಭಟ್ಟನಿಂದಾಗಿ ಮುಳಗತಣ್ಣಿ ಲಂಡನ್ ತಲುಪಿತು. ಅಲ್ಲಿ ಆತನ ಕ್ಯಾಂಟೀನಿನಲ್ಲಿ ನಿಧಾನ ಜನಪ್ರಿಯತೆ ಪಡೆದು, ಕಡೆಗೊಮ್ಮೆ ಪ್ರಪಂಚದ ಎಲ್ಲ Five Star ಹೋಟೆಲುಗಳಲ್ಲೂ **ಮುಲಾಗಟ್ಟಾನಿ ಸೂಪ್** ಎನ್ನುವ ನಾಮಾಂತರದೊಂದಿಗೆ ಸ್ಥಾಪಿತವಾಯಿತು.

ದಕ್ಷಿಣ ಭಾರತದ ಸಾಂಬಾರಿಗೆ ಮಾರು ಹೋದ ಬ್ರಿಟೀಷ್ ದೊರೆಗಳು ಕರಿ ಬೇವಿನ ಗಿಡವನ್ನು ಲಂಡನ್ನಿಗೆ ಒಯ್ದರಂತೆ. ಅಲ್ಲಿ ಅರಮನೆ ಹಿತ್ತಲಲ್ಲಿ ಅದು ನಳನಳಿಸುತ್ತ ನಿಂತಿದೆಯಂತೆ. ಅದನ್ನ ನೋಡಿ ಬಂದು ಮೂಗುಮುರಿದ ಕನ್ನಡಿಗ ಮಿತ್ರನೊಬ್ಬನ ರಾಷ್ಟ್ರಪ್ರೇಮವನ್ನು ಇಲ್ಲಿ ದಾಖಲಿಸದೆ ಇರಲಾರೆ. 'ಲಂಡನ್ನಿನ ಕರಿಬೇವಿಗೆ ಕಹಿಯೇ ಉಳಿದಿಲ್ಲ ಗುರುವೆ ! ಅದು ಲಂಡನ್ನಿನಲ್ಲಿ ಬದುಕಿರುವ ಎಲ್ಲರಂತೆ, ಬರಿದೆ ಹಸಿ ಸೊಪ್ಪು ಆಗಿ ಬಿಟ್ಟಿದೆ.

ಅಪ್ಪಟ ಕನ್ನಡದ ತಿನಿಸು ಯಾವುದಿರಬಹುದೆಂದು ನಾನು ಬಹಳ ಸಲ ಯೋಚಿಸಿದ್ದೇನೆ. ಪ್ರಾಯಶಃ ರಾಗಿ ಮುದ್ದೆ ಹಾಗೂ ಹೂರಣದ ಹೋಳಿಗೆ ನಮ್ಮವುಗಳಿರಬಹುದು. ಹೂರಣದ ಹೋಳಿಗೆಯನ್ನು ಮರಾಠಿಗರೂ ಮಾಡುತ್ತಾರೆ. **ಪೂರಣ ಪೋಳಿ** ಎಂದು ಕರೆಯುತ್ತಾರೆ. ಆದರೆ ಪೂರಣ ಪೋಳಿಯ ಮೂಲ ಕನ್ನಡದಲ್ಲಿದೆ ಎಂದೇ ನನ್ನ ನಂಬಿಕೆ. **ಮೈಸೂರ ಪಾಕು** ಎಂದೇ ಖ್ಯಾತವಾಗಿರುವ, ಕಡಲೆ ಹಿಟ್ಟಿನ ಸಿಹಿ ತಿಂಡಿ ನಮ್ಮದಲ್ಲ. ರುಚಿಗಳ ಬಗ್ಗೆ ಪುಟಗಟ್ಟಲೆ ಬರೆಯಬಹುದು. ನಾವು ಬರೆಯುತ್ತಿಲ್ಲ. ಇರಲಿ, ಹಿತ್ತಲ ಗಿಡಕ್ಕೆ ಮರಳುತ್ತೇನೆ.

ಹಿತ್ತಿಲ ಅಕ್ಕ ಪುಸ್ತಕದ ಮೊದಲಲ್ಲಿರುವ ಮುನ್ನುಡಿ, ಪುಸ್ತಕದ ಉದ್ದೇಶವನ್ನ ಸ್ಪಷ್ಟವಾಗಿಸುತ್ತದೆ.

'ನೂರಾರು ವರ್ಷಗಳಿಂದ ನಮ್ಮವರು, ಮುಖ್ಯವಾಗಿ ನಮ್ಮ ಮಹಿಳೆಯರು ತಮ್ಮ ಮನೆಗಳಲ್ಲಿ ಗಿಡಮೂಲಿಕೆಗಳ ಔಷಧಿಗಳನ್ನು ಬಳಸುತ್ತಲೇ ಬಂದಿದ್ದಾರೆ. ನಮ್ಮಲ್ಲಿ ಕಂಡುಬರುವ ಕಾಯಿಲೆಗಳಿಗೆ ಮನೆಯ ಹೆಂಗಸರಲ್ಲಿ ಒಂದಿಲ್ಲಾ ಒಂದು ಬಗೆಯ ಮದ್ದು ಇದ್ದೇ ಇರುತ್ತದೆ.

ಒಂದು ಕಾಲಕ್ಕೆ ನಮ್ಮ ನೆಲ ಹಸಿರಿನ ತವರಾಗಿತ್ತು. ಆದರೆ ಕಾಲಾಂತರದಲ್ಲಿ ಹಸಿರು ಮಾಯವಾಗುತ್ತಾ ಬಂದಿತು. ಜೊತೆಗೆ ಸಮೃದ್ಧವಾಗಿದ್ದ ಗಿಡಮೂಲಿಕೆಗಳೂ ನಶಿಸಿ ಹೋಗುತ್ತಾ ಬಂದವು. ಹಾಗೆಯೇ ಪಾಶ್ಚಿಮಾತ್ಯ ಆಧುನಿಕ ವೈದ್ಯಕೀಯ, ದೇಶೀಯ ವಿಧಾನಗಳ ಮೇಲೆಲ್ಲಾ ಹಿಡಿತ ಸ್ಥಾಪಿಸುತ್ತಾ ಬಂದಿತು. ಇಂತಹ ಪರಿಸ್ಥಿತಿಯಲ್ಲಿ ಗಿಡಮೂಲಿಕೆ ಔಷಧಿಗಳ ಬಳಕೆಯೂ ಕಡಿಮೆಯಾಗುತ್ತಾ ಬಂದಿತು.'

ನನ್ನ ಸ್ನೇಹಿತರೊಬ್ಬರು, ಹಾಂಕಾಂಗಿನಲ್ಲಿ ಕೆಲ ವರ್ಷ ಇದ್ದವರು ಹೇಳುತ್ತಿದ್ದರು. ಹಾಂಕಾಂಗಿನಲ್ಲಿ ಮನೆಗೆಲಸಕ್ಕೆ ಹೆಚ್ಚಾಗಿ ಫಿಲಿಫೀನ್ಸ್‌ನ ಹೆಂಗಸರು ಬರುತ್ತಾರಂತೆ. ಅನೇಕ ವರ್ಷ ದುಡಿದು, ಇಷ್ಟಿಷ್ಟೇ ಕುಡಿಕೆ ಹಣ ಕೂಡಿಸಿಟ್ಟು, ಮೂರೋ ನಾಲ್ಕೋ ವರ್ಷಕ್ಕೊಮ್ಮೆ ಊರಿಗೆ ಹೋಗುವಾಗ, ಅವರು ಕ್ಯಾನ್ ಮಾಡಿದ ಮಾವಿನ ತುಂಡು, ಹಲಸಿನ ತೊಳೆಗಳು, ಪೈನಾಪಲ್ಲುಗಳು, ಪ್ಲಾಸ್ಟಿಕ್ಕಿನ ಸಾಮಾನುಗಳನ್ನು ಕೊಂಡೊಯ್ಯುತ್ತಾರಂತೆ. ಫಿಲಿಫೀನ್ಸ್ ಅಪ್ಪಟ ಮಲೆನಾಡು ಪ್ರದೇಶ. ಅಲ್ಲಿ ಉಷ್ಣವಲಯದ ಹಣ್ಣುಗಳು ರಾಶಿ ರಾಶಿ ಬೆಳೆಯುತ್ತವೆ. ಆದರೆ ಮರಗಳ ಮೇಲೆ ನಿಜವಾದ ಹಣ್ಣು ಬೆಳೆಯುತ್ತದೆ. ಜಾಹೀರಾತಿನಲ್ಲಿ ಕಾಣಿಸುವ ಕ್ಯಾನ್ ಮಾಡಿದ ಹಣ್ಣುಗಳು ಬೆಳೆಯುವುದಿಲ್ಲವಲ್ಲ! ಭಾರತೀಯರಿಗೂ ಈ ರೋಗ ನಿಧಾನ ಹರಡುತ್ತಿದೆ. ನನ್ನ ಮಗನಿಗೆ ಮ್ಯಾಗಿ ನೂಡಲ್ ಎಂದರೆ ಪರಮಪ್ರೀತಿ. ಅಜ್ಜಿ ಮಾಡಿಕೊಡುವ ಶಾವಿಗೆ ಉಪ್ಪಿಟ್ಟೆಂದರೆ ಅಸಡ್ಡೆ. ಹಿತ್ತಿಲ ಅಕ್ಕ ಈ ರೀತಿಯ ಆಧುನಿಕ ಭ್ರಮೆಗಳನ್ನ ಪ್ರಶ್ನಿಸುತ್ತದೆ.

ಆಧುನಿಕ ವೈದ್ಯಕೀಯದ ಪ್ರಭಾವ ಎಷ್ಟಿದೆಯೆಂದರೆ, ಇಂದು ಮಾತ್ರೆ, ಚುಚ್ಚುಮದ್ದುಗಳನ್ನು ತೆಗೆದು ಕೊಂಡರೇನೇ ನಮಗೆ ಸಮಾಧಾನ. ಸುಲಭವಾಗಿ ಸೇವಿಸಬಹುದಾದ, ತಕ್ಷಣದ ಪರಿಣಾಮಗಳನ್ನು ಹೊಂದಿರುವ ಮಾತ್ರೆ ಇಂಜಕ್ಷನ್‌ಗಳ ಮುಂದೆ, ಕಹಿ - ಒಗರಿನ ನಿಧಾನ ಪರಿಣಾಮದ ಗಿಡಮೂಲಿಕೆ ಔಷಧಿಗಳು ಕಡೆಗಣಿಸಲ್ಪಟ್ಟಿವೆ.

ನಾವು ತೋರುತ್ತಿರುವ 'ಹಿತ್ತಲಗಿಡ ಮದ್ದಲ್ಲ' ಎನ್ನುವಂತಹ ಅಲಕ್ಷ್ಯವೇ ನಮ್ಮನ್ನು ಶಕ್ತಿಹೀನರನ್ನಾಗಿ ಮಾಡುತ್ತದೆ. ಇಂದು ನಾವು ನಮ್ಮಲ್ಲಿ ಲಭ್ಯವಿರುವ, ನಮಗೆ ತಿಳಿದಿರುವ ಗಿಡಮೂಲಿಕೆ ಔಷಧಿಗಳನ್ನು ಬಳಸಲೂ ಹಿಂಜರಿಯುತ್ತಾ ಮಾತ್ರೆ, ಇಂಜಕ್ಷನ್‌ಗಳ ಮೇಲೆ ಕೆಟ್ಟ ಅವಲಂಭನೆಯನ್ನು ಬೆಳೆಸಿಕೊಳ್ಳುತ್ತಿದ್ದೇವೆ.

ಸ್ವಾವಲಂಬನೆ ಸಾಧಿಸುವ ಹಾದಿಯಲ್ಲಿ ನಾವೀಗ ಒಂದಷ್ಟು ಹಿಂದೆ ತಿರುಗಿ ನೋಡಬೇಕಾಗಿದೆ. ಗಿಡಮೂಲಿಕೆಗಳ ಚಿಕಿತ್ಸೆಯನ್ನು 'ಅಳಲೆಕಾಯಿ ಪಂಡಿತ' ನವು ಎಂದು ತಿರಸ್ಕರಿಸುವ ಮುನ್ನ ಸ್ವಲ್ಪ ಮರುಚಿಂತೆ ಮಾಡಬೇಕಾಗಿರುವುದು ತುಂಬಾ ಅವಶ್ಯಕ. ನಮ್ಮ ಹಿತ್ತಲ ಗಿಡಗಳು ಮತ್ತು ಅವುಗಳ ಔಷಧೀಯ ಗುಣಗಳಿಗೆ ಪುನರ್ ಮನ್ನಣೆ ಕೊಡುವುದು ಅಗತ್ಯವಾಗಿದೆ.

ಗಿಡಮೂಲಿಕೆ ಔಷಧಿಗಳ ಚಿಕಿತ್ಸೆ ನಿಧಾನವಾದರೂ ತುಂಬಾ ಪರಿಣಾಮಕಾರಿ. ಇದರಿಂದ ಅಪಾಯಕಾರಿಯಾದ ಇತರೇ ಪರಿಣಾಮಗಳು ಇರುವುದಿಲ್ಲ. ದುಡ್ಡು ಸುರಿದು 'ವಿಸ್ಮಯಕಾರೀ' ಮಾತ್ರೆ ಇಂಜಕ್ಷನ್‌ಗಳಂತೆ ಇವನ್ನು ಕೊಳ್ಳಬೇಕಾಗಿಲ್ಲ. ನಮ್ಮ ಸುತ್ತಲ ಪರಿಸರದಲ್ಲಿ ನಮಗೆ ತುಂಬಾ ಪರಿಚಯವಿರುವ ಗಿಡಮೂಲಿಕೆಗಳೇ ಇವು. ನಮ್ಮ ಹಿತ್ತಲಲ್ಲೂ, ಅಂಗಳದಲ್ಲೂ ಸುಲಭವಾಗಿ ಬೆಳೆದುಕೊಳ್ಳಬಹುದು. ಈ ಗಿಡಮೂಲಿಕೆಗಳ ಪಂಚಾಂಗಗಳಿಗೂ (ಬೇರು, ತೊಗಟೆ, ಎಲೆ, ಕಾಂಡ, ಹೂವು) ಔಷಧೀಯ ಗುಣಗಳಿರುತ್ತವೆ.

ನಮ್ಮಲ್ಲಿ ಈಗಾಗಲೇ ಇರುವ ಗಿಡಮೂಲಿಕೆ ಚಿಕಿತ್ಸೆಗಳ ಜ್ಞಾನವನ್ನು ಮತ್ತಷ್ಟು ಜಾಗೃತಗೊಳಿಸಲು, ಅಲ್ಲದೆ ಅವುಗಳನ್ನು ವಿಸ್ತಾರಗೊಳಿಸಲು ಸಹಾಯವಾಗುವಂತಹ ಒಂದು ಪ್ರಯತ್ನವೇ ಈ ಪುಸ್ತಿಕೆ. ನಮ್ಮ ಸುತ್ತಲಲ್ಲಿ ತಕ್ಷಣಕ್ಕೆ ಲಭ್ಯವಿರುವಂತಹ ಸುಮಾರು ೩೬ ಗಿಡಮೂಲಿಕೆಗಳ ಔಷಧೀಯ ಬಳಕೆಯನ್ನು ಸಚಿತ್ರವಾಗಿ ಇಲ್ಲಿ ವಿವರಿಸಲಾಗಿದೆ.

ಮಹಿಳಾ ಸಮಖ್ಯಾದವರು ಇಂತಹದೇ ಮತ್ತೆರಡು ಉಪಯುಕ್ತ ಪುಸ್ತಕಗಳನ್ನ ಹೊರತಂದಿದ್ದಾರೆ. ನನ್ನ ಮಗಳು ದೊಡ್ಡವಳಾದಳು ಎನ್ನುವ ಕಿರು ಪುಸ್ತಿಕೆ, ಮೈ ನೆರೆಯುವ ಹುಡುಗಿಯರ ಗಾಬರಿಯನ್ನ ನಿವಾರಿಸಿ ತಿಳುವಳಿಕೆ ನೀಡುತ್ತದೆ. ಈ ಪುಸ್ತಕಗಳು ಅಂಗಡಿಗಳಲ್ಲಿ ದೊರಕುವಂತಾಗಲಿ ಎಂದು ಹಾರೈಸುತ್ತೇನೆ.

ಪುಸ್ತಕ ಪರಿಚಯ

ವಿಲಿಯಂ

ಅಲೆಮಾರಿಯ ಕಥೆ - ಗ. ಸು. ಭಟ್ಟ,

ಬೆತ್ತಗೇರಿ - ಬಕುಲ ಪ್ರಕಾಶನ ಬಕ್ಕಳ, ಶಿರಸಿ, ಉ.ಕ. ಪುಟ ೧೯೨ ೩೫ / - ರೂ.

ಇದೊಂದು ಕಥನ ಕಾವ್ಯ. ಹಣ್ಣು ಹಣ್ಣಾದ ಕಲಾವಿದನೊಬ್ಬನ ಬದುಕಿನ ಸುತ್ತ ಹರಿದಾಡುವ ನೀಳ್ಗತೆಯೊಂದು ಭಾಮಿನಿ ಷಟ್ಪದಿಯಲ್ಲಿ ಕಾವ್ಯ ಸ್ವರೂಪವನ್ನು ಹೊಂದಿದೆ. ಈ ಕತೆಯ ಕ್ಷೇತ್ರ ಬೆಳ್ಳಕ್ಕಿಯ ಹಿಂಡು, ವನ ಮತ್ತು ಜಲ ರಾಶಿಯ ಉತ್ತರ ಕನ್ನಡ ಜಿಲ್ಲೆ. ಅನಿವಾರ್ಯವಾಗಿ ಅಲೆಮಾರಿಯಾದ ಕಲಾವಿದನೊಬ್ಬನು ತನ್ನ ಹಲವು ಹತ್ತು ಕನಸುಗಳನ್ನು ತನ್ನ ಕುಂಚದ ಮೂಲಕ ಅರಳಿಸುತ್ತಾ ಹೋಗುತ್ತಾನೆ. ಪ್ರಕೃತಿಯ ಅಂಗಳದಲ್ಲಿದ್ದುಕೊಂಡೇ ಬದುಕನ್ನು ನೋಡುವ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತಾನೆ. ಸುದೀರ್ಘವಾದ ಹದಿನಾಲ್ಕು ಅಧ್ಯಾಯಗಳಲ್ಲಿ ಈ ಕಾವ್ಯ ಹರಿದು ಹೋಗಿದೆ. ಕಾವ್ಯದಲ್ಲಿ ಕತೆ ಹೇಳುವ ಒಂದು ತಾಳ್ಮೆಯ ಪ್ರಯತ್ನ ಈ ಯುವ ಕವಿಯದು. ಕತೆಗಿಂತಲೂ ಹೆಚ್ಚು ಕತೆಯ ಕ್ಷೇತ್ರವೇ ಮಾತನಾಡಿವೆ. ಕಥಾನಾಯಕನ ಜೊತೆಯಲ್ಲಿಯೇ ಜೋಗಿಯೊಬ್ಬ ಅಲೆದಾಡುತ್ತಾನೆ. ಆತ ಹಿಮಗಿರಿಯ ಹಟಯೋಗಿ. ಕಲಾವಿದನು ಕಾಣುವ ಕನಸು ಸೌಂದರ್ಯವಾದರೆ, ಜೋಗಿ ಕಾಣುವುದು ಬರೀ ಧ್ಯಾನ. ಹಿಮಗಿರಿಯ ಸೌಂದರ್ಯವನ್ನು ಕವಿ ಚಿತ್ರಿಸುವಾಗ ಕವಿಗೆ ಎಲ್ಲಿಲ್ಲದ ಸಂಭ್ರಮ. **ಶ್ವೇತ ಹಿಮಗಿರಿ ಹೊಳೆವ ಮುಕುಟವು / ಪಸಿರು ಶಾದ್ವಲ ಗಿರಿಯ ತಪ್ಪಲು / ಕೂಡಿ ಹಾರುವ, ಹಾಡಿ ಆಡುವ / ಪಕ್ಷಿಗಳು ತರತರದ ಮೃಗಗಳು / ಹೆಪ್ಪುಗಟ್ಟುವ ಮತ್ತೆ ಕರಗುತ / ಹರಿವ, ಧುಮುಕುವ ಝರಿಯ ನೊರೆ ತೊರೆ / ಪುಷ್ಪ ಸುರಭಿತ ತಂಪು ಗಾಳಿಯು**

ಕಾವ್ಯದ ತುಂಬ ಉತ್ತರ ಕನ್ನಡ ಜಿಲ್ಲೆಯ ರಮಣೀಯತೆ ಎದ್ದು ಕಾಣುತ್ತದೆ.

ಕನ್ಹಯ್ಯಲಾಲ್ ರಂಗ ಭೂಮಿ - ರುಸ್ತುಂ ಭರೂಚಾ -

ಕನ್ನಡಕ್ಕೆ : ಬಿ. ಆರ್. ವೆಂಕಟರಮಣ ಐತಾಳ - ಅಕ್ಷರ ಪ್ರಕಾಶನ ಹೆಗ್ಗೋಡು, ಸಾಗರ
- ಪುಟ ೬೦ - ರೂ. ೨೫ / -

ಸಮಕಾಲೀನ ಭಾರತೀಯ ರಂಗಭೂಮಿಯಲ್ಲಿ ಮಣಿಪುರದ ಕನ್ಹಯ್ಯಲಾಲ್‌ರವರದು ಒಂದು ದೊಡ್ಡ ಹೆಸರು. ಹೊಸ ಹೊಸ ರಂಗ ಪ್ರಯೋಗಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡವರು ಇವರು. ಹೈಸ್ನಾಮ್ ಕನ್ಹಯ್ಯಲಾಲ್‌ರವರ ನೇತೃತ್ವದಲ್ಲಿ ಕಲಾ ಕ್ಷೇತ್ರ ಮಣಿಪುರ ರಂಗ ತಂಡವು ಪ್ರಸ್ತುತ ಭಾರತೀಯ ರಂಗ ಭೂಮಿಯ ಸಂದರ್ಭದಲ್ಲಿ ಅಪರೂಪ ಪ್ರಯೋಗಗಳನ್ನು ಕೊಟ್ಟಿದೆ. ಕನ್ಹಯ್ಯಲಾಲ್ ಭಾಷಾತೀತ ರಂಗ ಭಾಷೆಯ ದೃಷ್ಟಾರ. ಇವರ ರಂಗ ಸಂದರ್ಭ ಮತ್ತು ಸಿದ್ಧಾಂತವನ್ನು

ಪರಿಚಯಿಸುವ ಒಳ್ಳೆಯ ಅಧ್ಯಯನ ಕೃತಿಯಿದು. ಇವರ ಪ್ರಪಂಚವನ್ನು ಹಣಕಿ ನೋಡುವುದೇ ಒಂದು ಅನುಭವ. ಕನ್ಹಯ್ಯಲಾಲ್‌ರ ರಂಗಭೂಮಿಯು ಅವರ ಇತಿಹಾಸ ಮತ್ತು ಬದುಕಿನ ದಿನನಿತ್ಯದ ಹೋರಾಟಗಳಲ್ಲಿ ಹೇಗೆ ರೂಪಗೊಂಡು ಬೆಳೆಯಿತು ಎನ್ನುವುದನ್ನು ಭರೂಚ ಇಲ್ಲಿ ಗಟ್ಟಿಯಾಗಿ ಹಿಡಿದಿಟ್ಟಿದ್ದಾರೆ.

ಮಣಿಪುರದ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆಯಲ್ಲಿ ಮಾಡಿರುವ ಸಾಂಸ್ಕೃತಿಕ ಬದುಕಿನ ಒಂದು ಅಧ್ಯಯನ ಇಲ್ಲಿದೆ. ಮಣಿಪುರದ ನೋವು ಮತ್ತು ರೋಗಗ್ರಸ್ಥ ಆರ್ಥಿಕ ಸ್ಥಿತಿಗತಿ ಕನ್ಹಯ್ಯಲಾಲ್‌ರನ್ನು ತಟ್ಟಿರುವ ತೀವ್ರತೆ ಇಲ್ಲಿ ತಿಳಿಯುತ್ತದೆ. ಮಣಿಪುರದ ಸಾಂಸ್ಕೃತಿಕ ಬದುಕೇ ಒಂದು ರೀತಿಯಲ್ಲಿ ಸಂಕೀರ್ಣ. ಅರೆ ಪಟ್ಟಣಿಗರು ಅರೆ ಬಡಕಟ್ಟಿನವರು ಆದ ಈ ಜನಾಂಗದವರು ಆಧುನಿಕ ಬಯಕೆಯ ಬೆನ್ನುಹತ್ತಿದ್ದಾರೆ. ಈ ಹೋರಾಟ, ಕನ್ಹಯ್ಯಲಾಲ್ ಚಿಂತನೆಯ ವಸ್ತು.

ಈ ಕೃತಿಯಲ್ಲಿ ಕನ್ಹಯ್ಯಲಾಲ್‌ರ ಪ್ರಾತಿನಿಧಿಕವೆನ್ನಬಹುದಾದ ಪೆಬೀತ್ ನ ಪ್ರದರ್ಶನ ಪಠ್ಯ ಸೇರಿದೆ. ಪೆಬೀತ್ ಅಲ್ಲಿಯ ಜಾನಪದ ಕತೆಯೊಂದರ ಭಾಗ. ಪೆಬೀತ್ ಗುಬ್ಬಚ್ಚಿಗಿಂತಲೂ ಚಿಕ್ಕದಾದ ಒಂದು ಪಕ್ಷಿಜಾತಿ. ಇದರ ವಂಶವೇ ಈಗ ನಿರ್ನಾಮವಾಗಿದೆ. ಆ ನಾಶವಾದ ಬದುಕಿನ ಚಿಕ್ಕ ಕೊಂಡಿಯೇ ಈ ನಾಟಕದ ಮುಖ್ಯ ಪಾತ್ರ. ಅಂದಿನ ರಾಜಕೀಯ ಮತ್ತು ಸಾಂಸ್ಕೃತಿಕ ದುರಂತದ ವಿರುದ್ಧ ದನಿಯೆತ್ತಲು ಕನ್ಹಯ್ಯಲಾಲ್ ಈ ಕತೆಯನ್ನು ಉಪಯೋಗಿಸಿದ್ದಾರೆ.

ಮೂಲ ಗ್ರಂಥವನ್ನು ಸಂಗ್ರಹ ರೂಪದಲ್ಲಿ ಕನ್ನಡಕ್ಕೆ ತರುವಲ್ಲಿ ವೆಂಕಟರಮಣ ಐತಾಳರದು ತುಂಬಾ ಒಳ್ಳೆಯ ಪರಿಶ್ರಮವಿದೆ.

ನಾಲ್ಕು ಶ್ರೇಷ್ಠ ಸತ್ಯಗಳು - ಇಂಗ್ಲಿಷ್ ಮೂಲ, ಪೂಜ್ಯ ಗುರು ಅಜಾನ್ ಸುಮೇಧೋ -

ಅನು: ಕೆ. ಬಿ. ಸಿದ್ಧಯ್ಯ ಮತ್ತು ವೀಚಿ - ಚಲನ ಪ್ರಕಾಶನ ಸಹಕಾರಿ, ತುಮಕೂರು - ೨೪/-ರೂ.

ಬುದ್ಧನು ತಾನು ಕಂಡುಂಡು ಬೋಧಿಸಿದ ನಾಲ್ಕು ವಿಶಿಷ್ಟ ಸತ್ಯಗಳನ್ನು ಪೂಜ್ಯ ಗುರು ಅಜಾನ್ ಸುಮೇಧೋ ಧ್ಯಾನ ಕ್ರಮದಲ್ಲಿ ಪರಿಭಾವಿಸಿ ಬರೆದಿರುವ the four noble truths ನ ಭಾಷಾಂತರವಿದು. ಬೌದ್ಧ ಧರ್ಮದ ಸಮರ್ಥನೆಯಾಗಲೀ, ವಿಶ್ಲೇಷಣೆಯಾಗಲೀ ಈ ಪುಸ್ತಕದ ಉದ್ದೇಶವಲ್ಲ. ಕೇವಲ ಬೌದ್ಧದರ್ಮದ ಸಾರವನ್ನು ಕನ್ನಡಕ್ಕೆ ತರುವುದಷ್ಟೇ ಈ ಪುಸ್ತಕದ ಪ್ರಯತ್ನ.

ಇಂಡಿಯಾದ ಸಾಮಾಜಿಕ, ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಸಂದರ್ಭದಲ್ಲಿ ಆರ್ಯ ಪದ ಬಳಕೆಯಾಗಿರುವ ಕ್ರಮ ಆರ್ಯ ಶಬ್ದವನ್ನು ಮಲಿನಗೊಳಿಸಿದೆ. ಹ್ಯೂಯೇನ್ ತ್ಸಾಂಗ್‌ನ ಪ್ರವಾಸಿ ಬರವಣಿಗೆಯಲ್ಲಿ ಆರ್ಯರು ನೆಲೆಸಿದ್ದ ಭೂಭಾಗವನ್ನು **ಆರ್ಯವೃತ್ತ** ಎಂದು ಕರೆದರೆ ಮ್ಯಾಕ್ಸ್‌ಮುಲ್ಲರ್ **ಆರ್ಯ ಮತ್ತು ದ್ರಾವಿಡ** ಎಂಬ ಶಬ್ದ ಬಳಸಿ ಈ ಶಬ್ದಗಳನ್ನು ಜನಾಂಗ ಸೂಚಕಗಳಾಗಿ ಬಳಕೆಗೆ ತಂದನು. ನಂತರದ ಕಾಲದಲ್ಲಿ ಆರ್ಯ ಪದವು ಮೂಲಾರ್ಥದ ವಿಶಾಲತೆ ಮತ್ತು ವ್ಯಾಪ್ತಿಯನ್ನು ಕಳೆದುಕೊಂಡು ಸೀಮಿತಾರ್ಥದಲ್ಲಿ ಬಳಕೆಯಲ್ಲಿ ಬಂತು. ಇದನ್ನು ಮನಗಂಡೇ the four noble truths ಬೌದ್ಧ ಧರ್ಮದ ಪರಿಭಾಷೆಯಲ್ಲಿ ರೂಢಿಯಲ್ಲಿರುವಂತೆ **ಚಾತುರಾರ್ಯ** ಎಂದು ಭಾಷಾಂತರಿಸಿದೆ.

ನಾಲ್ಕು ಶ್ರೇಷ್ಠ ಸತ್ಯಗಳು ಎಂದು ಭಾಷಾಂತರಿಸಿರುವುದು ಈ ಅನುವಾದದ ಹಿಂದಿರುವ ಮನಸ್ಸನ್ನು ತಿಳಿಸುತ್ತದೆ. ಬೌದ್ಧ ಧರ್ಮದ ತಿಳಿವನ್ನು ಹೇಳುವಾಗ ವೈದಿಕ ಅರ್ಥವನ್ನು

ತುಂಬಿಸಿಕೊಂಡಿರುವ ಬಹುತೇಕ ಶಬ್ದಗಳ ಮೂಲಕ ಬೌದ್ಧ ಧರ್ಮದ ಅವೈದಿಕ ಅಂಶಗಳನ್ನು ಹೇಳದೆ ಪಾಳಿ ಮತ್ತು ಕನ್ನಡ ಸಂಸ್ಕೃತಿಯಲ್ಲಿ ಹಾಸು ಹೊಕ್ಕಿರುವ ತತ್ವ ಪದ ಮತ್ತು ವಚನ ಪರಂಪರೆಯ ಅನುಭಾವಿ ಪರಿಭಾಷೆಯಿಂದ ಪರ್ಯಾಯ ಶಬ್ದಗಳ ಬಳಕೆಯನ್ನು ಈ ಅನುವಾದದಲ್ಲಿ ಮಾಡಲಾಗಿದೆ.

ಮೊದಲನೆ ಸತ್ಯ - ಲೋಕದಲ್ಲಿ ದುಃಖ ಇದೆ. ದುಃಖದ ಅರಿವಾಗಿದೆ ಮತ್ತು ಇದು ಅನುಭವದ ಮೂಲ ಗ್ರಹಿಕೆ. ಎರಡನೇ ಸತ್ಯ - ದುಃಖದ ಹುಟ್ಟನ್ನು ತಿಳಿಸುತ್ತದೆ. ಕಾಮತೃಷ್ಣೆ ಭವತೃಷ್ಣೆ ಮತ್ತು ವಿಭವ ತೃಷ್ಣೆಗಳಿಂದಾಗಿ ದುಃಖವು ಉಂಟಾಗುತ್ತದೆ. ಮೂರನೆಯದು - ದುಃಖದ ನಿರೋಧವಿದೆ, ದುಃಖ ನಿರೋಧವನ್ನು ಅರಿಯಬೇಕು ಮತ್ತು ದುಃಖನಿರೋಧವನ್ನು ಅರಿಯಲಾಗಿದೆ. ನಾಲ್ಕನೇ ಶ್ರೇಷ್ಠ ಸತ್ಯ ಅಷ್ಟಾಂಗ ಮಾರ್ಗ. ದುಃಖ ನಿರೋಧಕ್ಕೆ ಒಯ್ಯುವ ಮಾರ್ಗ.

ಕನ್ನಡ ಸಂಸ್ಕೃತಿಯ ಜಾಡಿನಲ್ಲಿಯೇ ಈ ಧರ್ಮ ವಿಚಾರಗಳು ಅನುವಾದಗೊಂಡಿರುವುದು ಈ ಪ್ರಯತ್ನದ ಯಶಸ್ಸು.

ಬಾ ಚೇತನವೇ ಬಾ - ಹೊರೆಯಾಲ ದೊರೆಸ್ವಾಮಿ -

ಏಕಲವ್ಯ ಪ್ರಕಾಶನ, ಮೈಸೂರು - ಪುಟ ೭೩ ರೂ. ೧೨

ಈ ಸಂಕಲನದ ಮೂರು ಎಸಳುಗಳಲ್ಲಿ ಒಟ್ಟು ೪೧ ಕವನಗಳಿವೆ. ೧೯೮೭ರ **ಕವಿ ಮುದ್ದಣ ಸ್ಮಾರಕ ಕಾವ್ಯ ಪ್ರಶಸ್ತಿ** ಪಡೆದ ಅರ್ಥಪೂರ್ಣ ಕೃತಿಯಿದು. ಇಲ್ಲಿಯ ಬಹುತೇಕ ಕವನಗಳಲ್ಲಿ ಅಡಗಿಸಿಕೊಂಡಿರುವ ಚಿತ್ರಕ ಶಕ್ತಿ ಮತ್ತು ನೋವು ನಲಿವುಗಳ ಮನಸ್ಸು ನಮ್ಮನ್ನು ತಟ್ಟುತ್ತವೆ. ನನ್ನ **ಕವನ / ಅಮೇರಿಕದ ಕಾಂಕ್ರೀಟ್ ಬಿರುಕಿನಲ್ಲಿ ಬೆಳೆವ / ಸಿಮೆಂಟ್** ಹಸಿರಿನ **ಕೊತ್ತುಂಬರಿ ಸೊಪ್ಪಲ್ಲ/ ಮನೆಯ ನಾಜೂಕಿನ / ಕುಂಡ ಕಮುಂಡಲಗಳಲ್ಲಿ ಬೆಳೆವ ಚಾಲೂಕಿನ** ಹಸಿರು **ಕೊತ್ತಂಬರಿ ಸೊಪ್ಪು ಅಲ್ಲ / ಹೊಲ ಗದ್ದೆಗಳಲ್ಲಿ ಬೇಲಿ ಬೆಟ್ಟಗಳಲ್ಲಿ / ಕಾಡು ಮೇಡುಗಳಲ್ಲಿ** ನಾಡು **ಬೀಡುಗಳಲ್ಲಿ / ಬುದ ಬುದನೆ ಬೆಳೆವ / ಮುರಿದಷ್ಟು ಮೆರೆವ / ತರಿದಷ್ಟು ಬರುವ /** ಹಸಿರು ಹಸಿರನೆ **ಹೊತ್ತ ಅಚ್ಚ ಹಸಿರಿನ ಕೊತ್ತಂಬರಿ** /..... ಇದು ಈ ಕವಿಯ ಆಶಯ ಮತ್ತು ಈ ದಿಸೆಯಲ್ಲಿ ಪ್ರಯತ್ನವೂ ಹೌದು. ಕವಿ- ಕಾವ್ಯ, ನನ್ನ ಕವನ, ಹೊಸರಾಗ, ಈ ಚರಿತ್ರೆ ನಮ್ಮದಲ್ಲ, ಹೊಸಹುಟ್ಟು, ಸ್ವಾತಿ ಮುತ್ತುಗಳ ತಾರೆ, ಬಿಟ್ಟು ಹೇಗೆ ಹೋಗಲಿ ಗೆಳತಿ, ಬಂಧನದ ನಾರುಗಳು, ಬೆತ್ತಲೆ ಹುಡುಗಿ ಇವು ಈ ಸಂಕಲನದ ಪ್ರಮುಖ ಕವನಗಳು. ಜೀವನ ಪ್ರೀತಿ ಮತ್ತು ಸಾಮಾಜಿಕ ಕಾಳಜಿಗಳನ್ನು ತುಂಬಿಸಿಕೊಂಡಿರುವ ಕವನಗಳೂ ಇಲ್ಲಿವೆ.

ಮಹಾಯಾತ್ರೆ - ಜಯಪ್ರಕಾಶ್ ಮಾವಿನಕುಳಿ -

ಸ್ಫಟಿಕ ಪ್ರಕಾಶನ, ಕೋಡಂಗಲ್ಲು ಮೂಡುಬಿದಿರೆ, ೫೭೪ ೧೯೭ - ಪುಟ ೫೩ - ರೂ. ೨೦/-

---

ಇದು ಜಯಪ್ರಕಾಶ್ ಮಾವಿನಕುಳಿಯವರ ನಾಲ್ಕನೇ ನಾಟಕ. ದಿನ ನಿತ್ಯ ಘಟಿಸುತ್ತಿರುವ ಧರ್ಮ ಮತ್ತು ರಾಜಕಾರಣದ ವಿಕಾರತೆಗಳಿಗೆ ಅತ್ಯಾಚಾರವೂ ಸೇರಿಕೊಂಡಾಗ ಸಮಷ್ಟಿಯ ಬದುಕಿನಲ್ಲಿ ಆಗಬಹುದಾದ ಪರಿಸ್ಥಿತಿಯನ್ನು ರಂಗದ ಮೇಲೆ ತರುವ ಒಳ್ಳೆಯ ಪ್ರಯತ್ನ ಈ **ಮಹಾಯಾತ್ರೆ**. ಮೇಲೆ ಹೇಳಿದ ಮೂರು ವಸ್ತುಗಳು ಒಂದಕ್ಕೊಂದು ಸೇರಿಕೊಂಡೇ ಬರುತ್ತದೆ ಎಂಬುವುದು ಸಾರ್ವಜನಿಕ

ಸತ್ಯ. ರಾಜಕೀಯ ಬಲವಿರುವ ಮಠವೊಂದರ ಸ್ವಾಮಿ ಅತ್ಯಾಚಾರವನ್ನು ಎಸಗಿದಾಗ ಅದನ್ನು ರಾಜಕೀಯ ಹೇಗೆ ಮುಚ್ಚಿಡಲು ದೀಕ್ಷೆ ತೊಡುತ್ತದೆ ಎಂಬ ಸತ್ಯವನ್ನು ಹೇಳುವಾಗ ಈ ನಾಟಕ ಅನಾವರಣಗೊಳ್ಳುತ್ತಾ ಹೋಗುತ್ತದೆ.

ಈಗಾಗಲೇ ಈ ವಸ್ತುಗಳು ಕತೆ ಕಾದಂಬರಿಗಳಲ್ಲಿ ಮೂಡಿದ್ದರೂ ರಂಗ ಸಾಧ್ಯತೆಯ ಬಗ್ಗೆ ಯೋಚಿಸಿ ಬರೆದದ್ದು ಕನ್ನಡದ ಸಂದರ್ಭದಲ್ಲಿ ವಿರಳ. ಈ ನಾಟಕದಲ್ಲಿ ಬರುವ ರಾಜಕೀಯದ ಪ್ರಚಂಡ ಶಕ್ತಿಗಿಂತಲೂ ಕುದುರೆಮೋತಿ ಸ್ವಾಮಿಯ ಖಾಸಗೀ ಬದುಕಿನ ಅನಿವಾರ್ಯ ಬಯಕೆಯ ಹಾಗೂ ಕಮಲಮ್ಮನ ಅನಿವಾರ್ಯ ಪ್ರತಿಭಟನೆಯೇ ಮುಖ್ಯವಾಗುತ್ತದೆ. ನಾಟಕದ ಪೂರ್ತಿ ವ್ಯಂಗ್ಯ ವಿಡಂಬನೆಗಳೇ ಮಾತನಾಡಿವೆ. ಯಾವುದೋ ಒಂದು ಬಲಹೀನ ಗಳಿಗೆಯಲ್ಲಿ ನಡೆದ ಘಟನೆ ಬಗ್ಗೆ ಸ್ವಾಮಿ ವಿಷಾದವನ್ನಾಗಲಿ, ಅಲ್ಲಗಳೆಯುವುದಾಗಲೀ ಮಾಡದೇ " ತಪ್ಪುಮಾಡಿಲ್ಲ, ಘಟಿಸಿದೆ " ಎಂದು ಹೇಳುವಾಗ ಈ ವ್ಯವಸ್ಥೆಯಲ್ಲಿ ಬಂದಿರುವ ಅನಿವಾರ್ಯತೆಯನ್ನು ತೋರಿಸುತ್ತದೆ.

ಕಂಬಾರರ ಕಾವ್ಯ - ಕೆಲವು ಅಧ್ಯಯನಗಳು -

ಸಂ. ಟಿ. ಪಿ. ಅಶೋಕ್ - ಕರ್ನಾಟಕ ಸಂಘ, ಪುತ್ತೂರು. ದ.ಕ., ಪುಟ ೧೬೨, ರೂ. ೬೦/-

---

ಕಂಬಾರರ ಕಾವ್ಯ ಶಕ್ತಿಯ ಬಗ್ಗೆ ಈವರೆಗೆ ಯಾರೂ ಎರಡು ಮಾತಾಡಿಲ್ಲ. ಇವರ ಜನಪದ ಭಾಷೆ ಮತ್ತು ಕಲ್ಪನಾ ಶಕ್ತಿಯಲ್ಲಿ ಎಲ್ಲರಲ್ಲೂ ಆಸಕ್ತಿ, ಗೌರವ ಇದ್ದರೂ ಗಂಭೀರ ವಿಮರ್ಶೆಗಳು ಬರಬೇಕಾದಷ್ಟು ಬಂದಿಲ್ಲ. ಹಲವು ಹತ್ತು ಕಡೆ ಬಂದಿರುವ ಬಿಡಿ ಲೇಖನಗಳನ್ನು ಒಂದೆಡೆ ತಂದು ಒಟ್ಟಾರೆ ಕಂಬಾರರ ಕಾವ್ಯ ಅಧ್ಯಯನಕ್ಕೆ ಅನುಕೂಲವಾಗುವ ಕೆಲಸವನ್ನು ಟಿ.ಪಿ. ಅಶೋಕ್ ಈ ಸಂಪಾದನೆಯಲ್ಲಿ ಮಾಡಿದ್ದಾರೆ. ಕನ್ನಡದ ಎಲ್ಲಾ ವಿಮರ್ಶಕರ ಲೇಖನಗಳಿವೆ. ಮುನ್ನುಡಿಗಳು ಸಹಾ ಅಧ್ಯಯನ ರೂಪದ ಟಿಪ್ಪಣಿಗಳಾಗಿವೆ. ಅಡಿಗರು, ಕುರ್ತುಕೋಟಿ, ಲಂಕೇಶ್‌ರವರು ಬರೆದಿರುವ ಮುನ್ನುಡಿಗಳು ಇದಕ್ಕೆ ಸಾಕ್ಷಿ. ಕಂಬಾರರ ಕಾವ್ಯ ಕೃತಿ ಕುರಿತು ಬಂದಿರುವ ಮುನ್ನುಡಿಗಳು, ಅವಲೋಕನಗಳು, ಟಿಪ್ಪಣಿಗಳು, ಅನಿಸಿಕೆಗಳು, ಅಭ್ಯಾಸಗಳು, ಪುಸ್ತಕ ವಿಮರ್ಶೆಗಳು - ಇವೆಲ್ಲಾ ಇಲ್ಲಿ ಇದೆ.

ಕಳೆದ ಸಮಾರು ೩೬ ವರ್ಷಗಳಲ್ಲಿ ಇವರ ಕಾವ್ಯ ಕುರಿತು ಬಂದಿರುವ ಧ್ವನಿಗಳನ್ನು ಈ ಫ್ರೇಮಿನಲ್ಲಿಟ್ಟಾಗ ಅಧ್ಯಯನಕ್ಕೆ ಒಂದು ನಡೆ ಸಿಗುತ್ತದೆ. ಗೋಪಾಲಕೃಷ್ಣ ಅಡಿಗ, ಅನಂತ ಮೂರ್ತಿ, ಲಂಕೇಶ್, ಬಿ. ಟಿ. ದೇಸಾಯಿ, ಡಿ. ಆರ್. ನಾಗರಾಜ, ಶಿವ ಪ್ರಕಾಶ್, ಜಿ. ಎಚ್. ನಾಯಕ್, ಟಿ.ಪಿ. ಅಶೋಕ್, ಓ. ಎಲ್. ನಾಗಭೂಷಣ ಸ್ವಾಮಿ - ಸೇರಿದಂತೆ ಹಲವು ಚಿಂತಕರ ಅನಿಸಿಕೆಗಳು ಒಂದೆಡೆ ದಾಖಲಾಗಿವೆ. ಇಲ್ಲಿಯ ಬಹುತೇಕ ಎಲ್ಲ ವಿಮರ್ಶಕರು ಕಂಬಾರರನ್ನು ಅಡಿಯಿಂದ ಮುಡಿಯ ತನಕ ನೋಡಿರುವುದು ಅವರ ಹೇಳುತೇನ ಕೇಳ ದಿಂದಲೇ. ನನ್ನ ಬದುಕು ಬರಹ ಲೇಖನ ಮಾತ್ರ ಕಂಬಾರರ ಕಾವ್ಯಧರ್ಮದಲ್ಲಿ ಹುದುಗಿರುವ ಮೂಲದ್ರವ್ಯಗಳನ್ನು ತೋರಿಸುತ್ತದೆ. ಇದು ಅಶೋಕರ ಒಂದು ಒಳ್ಳೆಯ ಪ್ರಯತ್ನ.

ಜಾತ್ರೆಯ ಮರುದಿನ - ಸಾ. ದಯ- ಸಾಹಿತ್ಯ ಪ್ರಕಾಶನ, ಮುಂಬಯಿ - ಪುಟ ೫೯ ರೂ.೨೦/-

ಅರ್ಥೈಸಲಾರದ ಈ ಬದುಕಿನಲ್ಲಿ / ಹುಡುಕುತ್ತಿದ್ದೇನೆ ನನ್ನನ್ನೇ / ನಾನು ನನ್ನಲ್ಲೇ ! **ಹುಡುಕಾಟದ ಈ ಕವಿ ಆರಿಸಿಕೊಂಡಿರುವ ದಾರಿ** ಸೂರ್ಯ ಬೆಳಗದ / ಚಂದ್ರ ಇಣುಕದ / ಕತ್ತಲೆಯ ಈ ಕಾಡಿನಲ್ಲಿ/ ನನ್ನದೊಂದು ಕಾಲು ದಾರಿ ! " ಮುಂಬಯಿಗೆ ತನ್ನದೆ ಆದ ಮನಸಿದೆ, ಕನಸಿದೆ, ಲೇಖನವಿದೆ. " ಇಲ್ಲಿ / " ಈ ಶಹರಿನಲ್ಲಿ / ನನ್ನ / ನಿನ್ನ / ಭಾವಗಳು / ಬೇಲಿ / ಯಲ್ಲಂಟಿಸಿದ / ನಿರ್ಜೀವ ಚಿತ್ರಗಳು./" ಇಲ್ಲಿ "ನೂರು ಕೊಂಪೆಗಳಲ್ಲಿ ನೂರಾರು ಕೈಗಳು ಏನನ್ನೋ ಹುಡುಕುತವೆ " " ಹರಿವ ಕೆಂಪು ನದಿಯ ನೀರು " " ಇಲಿಗಳ ನುಂಗಿ ನೀರ್ಕುಡಿಯುವ ಬೆಕ್ಕುಗಳ ಸಾಲು " " ಅಪಾತ್ರರ ಸಹವಾಸಗಳು" "ರೈಲು ಡಬ್ಬಿಯೊಳಗೆ ಫೈಲುಗಳೊಂದಿಗೆ ನೇತು ಬಿದ್ದ ತ್ರಿಶಂಕುಗಳು " "ಒಳಗಲ್ಲಿಗಳ ಸಂಶೋಧಕರು" " ಎಣ್ಣೆಯಿಲ್ಲದೆ ಪಂಜುಹೊತ್ತಿಸಿದವರು " ಇಲ್ಲಿ / ಈ ಶಹರಿನಲ್ಲಿ / ನನ್ನ / ನಿನ್ನ/ ಭಾವಗಳು / ಬೇಲಿ / ಯಲ್ಲಂಟಿಸಿದ / ನಿರ್ಜೀವ ಚಿತ್ರಗಳು. / ಇಂತಹ ಕಾಂಕ್ರಿಟು ಕಾಡಿನಲ್ಲಿ " ಮೊಗ್ಗು ಅರಳುತ್ತದೆ" "ಜೋಗುಳ ಕೇಳುತ್ತದೆ. " " ಸಾಗರ ಉಕ್ಕಿ ಹರಿಯುತ್ತದೆ " ದಿಶೆ ದಿಶೆಗಳಲ್ಲೂ ಚಲಿಸುತ ಹೂ ಅರಸುತ್ತದೆ ಕವಿ ಮನಸಿನ ಭ್ರಮರ.

ನಲವತ್ತು ಕವನಗಳ ಸಂಕಲನವಿದು. ' ಪುಟ್‌ಪಾತಿನ ಮೇಲೆ,' 'ಮಗು ಮಲಗಿದೆ ಎಬ್ಬಿಸಬೇಡಿ', 'ಶಹರಿನ ಚಿತ್ರಗಳು ', 'ಹೃದಯಗಳು ನರಳುತ್ತವೆ', 'ಕಿಟಕಿ ಪರದೆಯ ಮೇಲೆ', ' ಜಾತ್ರೆಯ ಮರುದಿನ', ' ಕತೆಯಾದಳು ಚಿನ್ನಿ ', 'ಕುದುರೆ ' - ಇವೆಲ್ಲಾ ಈ ಸಂಕಲನದ ಒಳ್ಳೆಯ ಪದ್ಯಗಳು. ನೀರಿಕ್ಷೆಯುಂಟುಮಾಡುವ ಈ ಕವಿಯ ಪ್ರಥಮ ಕವನ ಸಂಕಲನ.

ಎಂ ಎಸ್ ಐ ಎಲ್ ವಿತರಿಸುತ್ತದೆ

ವಿದ್ಯಾ ನೋಟು ಪುಸ್ತಕಗಳು

ಹಾಗೂ

ಲೇಖಕ್ ಲೇಖನ ಸಾಮಗ್ರಿಗಳು

ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್ ಲಿಮಿಟೆಟ್

ಎಂ. ಎಸ್. ಐ. ಎಲ್ ಹೌಸ್

೩೬ ಕನ್ನಿಂಗ್‌ಹ್ಯಾಮ್ ರಸ್ತೆ

ಬೆಂಗಳೂರು - 560 052

With Best Compliments From :

Kavika

Product Range:

1. Power & Distribution Transformers upto 3000KVA, 33KV;
2. Completely Self Protected Transformers upto 315 kVA, 11kV ;
3. C.S.P Oil Immersed Circuit breaker for use in completely self protected transformers ;
4. L.V. Distribution Boxes ;
5. H.V. Metering Cubicle ;

Karnataka Vidyuth Karakhane Limited.

(A Karnataka Government Undertaking)
P.B.No. 2610 Mysore Road
Bangalore 560 026. India

Phone : Telex : 0845-2704.

6612331, 6612337, 601274

ಹಾರ್ದಿಕ ಶುಭಾಶಯಗಳು

ಬಿ. ಎಸ್. ವಿಶ್ವನಾಥನ್ ಅಧ್ಯಕ್ಷರು	ಪಿ. ಪಿ. ಭರಮಗೌಡರ್ ಕಾರ್ಯದರ್ಶಿ	ಸಿದ್ಧಯ್ಯ ಐ.ಎ.ಎಸ್ ಕಾರ್ಯನಿರ್ವಾಹಕ ನಿರ್ದೇಶಕರು

ಕರ್ನಾಟಕ ರಾಜ್ಯ ಸಹಕಾರ ಕೃಷಿ ಮತ್ತು ಗ್ರಾಮೀಣ
ಅಭಿವೃದ್ಧಿ ಬ್ಯಾಂಕು ನಿಯಮಿತ ಬೆಂಗಳೂರು - 560 018

ಕಲ್ಲು ಮಾತನಾಡದೆಂದು ಆದಾರು ಹೇಳುವರು ಹೇಳಿ ?

ಕರ್ನಾಟಕದಲ್ಲಿ ಅವು ಮಾತನಾಡುತ್ತವೆ. ತಮಗೆ ಜೀವ ಇತ್ತ ಮಹಾನ್ ಶಿಲ್ಪಿಗಳ ಕತೆಹೇಳುತ್ತವೆ ಕೇಳಿ.

ಬೇಲೂರು, ಹಳೇಬೀಡಿನ ಹೊಯ್ಸಳ ದೇವಾಲಯಗಳಲ್ಲಿ ...... ಬಾದಾಮಿ, ಐಹೊಳೆ, ಪಟ್ಟದ ಕಲ್ಲಿನ ನೆರೆಹೊರೆ ಹರಡಿರುವ ಅಸಂಖ್ಯ ಕೊರೆದ "ಗವಿ" ದೇವಾಲಯಗಳಲ್ಲಿ ..... ಹಂಪೆಯ ಹಾಳುಗಳ ನಡುವಿನಲ್ಲಿ .... ಬಿಜಾಪುರದ ಲೋಕವಿಖ್ಯಾತ ಗುಂಬಜದಲ್ಲಿ ......

ಅಳಿದು ಹೋದ ಮಹಾನ್ ಚಕ್ರಾಧಿಪತ್ಯಗಳ ಬಗ್ಗೆ ಹೇಳುತ್ತೇವೆ .... ವೀರಾವೇಶದಿಂದ ಕಾದಿದ ಯುದ್ಧಗಳ ಬಗ್ಗೆ ಹೇಳುತ್ತವೆ ....

ಅಳಿದು ಹೋದ ಸಂಭ್ರಮ ಸಡಗರದ ಸುದ್ದಿ ಹೇಳುತ್ತವೆ .... ಈ ಮಣ್ಣಿನ ವಿಶೇಷಣವನ್ನು ಕುರಿತು ಒಂದೇ ಸಮ ಹರಟುತ್ತವೆ. ಬೆಳ್ಳಿ ಹೊಳೆಯ ಕಡಲುಗಳು ..... ಸಮೃದ್ಧ ಕಾಡು ಮೃಗಗಳು ....ನೀರ ಝುರಿಗಳ .... ನಿಶ್ಯಬ್ಧ ಕಾನನ ಗೃಹಗಳು .... ಸುಂದರ ಕರಕುಶಲ ವಸ್ತುಗಳು ......ಶ್ರೀಮಂತ ರೇಶಿಮೆ ವಸ್ತ್ರಗಳು ......

ನಿಮ್ಮನ್ನು ಮಂತ್ರ ಮುಗ್ಧವಾಗಿಸಿಬಿಡುತ್ತವೆ, ನೀವು ಅರಿಯುವ ಮೊದಲೇ ......
ಕರ್ನಾಟಕ - ಒಂದು ಸುಮಧುರ ಸಂಬಂಧಕ್ಕೆ ಇದು ನಾಂದಿ

ಕರ್ನಾಟಕ ಪ್ರವಾಸೋದ್ಯಮ

ಹೆಚ್ಚಿನ ಮಾಹಿತಿಗೆ ಸಂಕೋಚವಿಲ್ಲದೆ ಸಂಪರ್ಕಿಸಿರಿ.
ನಿರ್ದೇಶಕ
ಕರ್ನಾಟಕ ಪ್ರವಾಸೋದ್ಯಮ ನಿಗಮ
ಕರ್ನಾಟಕ ಸರ್ಕಾರ

ಮೈಸೂರು ಲ್ಯಾಂಪುಗಳು

ಇದೊಂದು ಪರಿಪೂರ್ಣ ದೀಪದ ಕಂಪನಿ

..... ಒಳಾಂಗಣ ಬೆಳಕಿನ ವ್ಯವಸ್ಥೆ

..... ಅಲಂಕಾರಿಕ ದೀಪಗಳು

...... ಬಯಲು ಬೆಳಕಿನ ವ್ಯವಸ್ಥೆ

...... ಕೈಗಾರಿಕೆಗಳಿಗೆ ಬಳಸುವ ದೀಪಗಳು

......ಫ್ಲಡ್ ದೀಪಗಳು

ಈ ದೇಶದ ದೀವಿಗೆಗಳು : ಮೈಸೂರು ಲ್ಯಾಂಪುಗಳು

ದಿ ಮೈಸೂರು ಲ್ಯಾಂಪ್ ವರ್ಕ್ಸ್ ಲಿಮಿಟೆಡ್

ಪೋಸ್ಟ್ ಬಾಕ್ಸ್ ೫೫೫೧, ಮಲ್ಲೇಶ್ವರಂ ಪಶ್ಚಿಮ, ಬೆಂಗಳೂರು - ೫೬೦ ೦೫೫

ಈ ಸಂಚಿಕೆಯ ಬೆರಳಚ್ಚು ವಿನ್ಯಾಸ, ನಿಮಗಿಷ್ಟವಾಯಿತೆ ? ಹಾಗಿದ್ದರೆ ಸಂಪರ್ಕಿಸಿ,

ಮುದ್ರಾ ಸಿಸ್ಟಮ್ಸ್

ಹೆಗ್ಗೋಡು ೫೭೭ ೪೧೭ ಫೋ: ೦೮೧೮೩ ೨೨೧೩

ಕನ್ನಡ, ಹಿಂದಿ, ಇಂಗ್ಲಿಷ್ ಡಿ. ಟಿ. ಪಿ. ಕೆಲಸ, ಪುಸ್ತಕ, ಪತ್ರಿಕೆಗಳ ವಿನ್ಯಾಸ ಮತ್ತು ಮುದ್ರಣಕ್ಕಾಗಿ

ಆಡಳಿತ ವಿಕೇಂದ್ರೀಕರಣದತ್ತ ದಿಟ್ಟಹೆಜ್ಜೆ

ಕರ್ನಾಟಕ ಪಂಚಾಯತ್ ರಾಜ್ ವ್ಯವಸ್ಥೆ

ಇತ್ತೀಚಿನ ಸಂವಿಧಾನದ 73ನೇ ತಿದ್ದುಪಡಿಗೆ ಅನುಗುಣವಾಗಿ ಕರ್ನಾಟಕ ರಾಜ್ಯ ರೂಪಿಸಿರುವ 'ಪಂಚಾಯತ್ ರಾಜ್' ವ್ಯವಸ್ಥೆ ದೇಶದಲ್ಲಿಯೇ ಪ್ರಗತಿಶೀಲವಾಗಿದ್ದು, ಜನರಿಗೆ ಅಧಿಕಾರ ನೀಡುವ ನಿಟ್ಟಿನಲ್ಲಿ ಒಂದು ನಿರ್ಣಾಯಕ ಹೆಜ್ಜೆಯಾಗಿದೆ. ಮೂರು ಹಂತಗಳ ಈ ವ್ಯವಸ್ಥೆ ಜನಹಿತಕ್ಕೆ ಅಗತ್ಯವಿರುವ ನಿರ್ಣಯಗಳನ್ನು ತೆಗೆದುಕೊಳ್ಳುವ ಅಧಿಕಾರವನ್ನೂ ಜನರಿಗೆ ನೀಡಿದ್ದು, ರಾಜ್ಯದ ಸರ್ವತೋಮುಖ ಪ್ರಗತಿಗೆ ನಾಂದಿಯಾಗಲಿದೆ.

ಈ ವ್ಯವಸ್ಥೆಯಂತೆ, ಮೂರು ಹಂತಗಳ ಗ್ರಾಮ ಪಂಚಾಯತ್, ತಾಲ್ಲೂಕು ಪಂಚಾಯತ್ ಹಾಗೂ ಜಿಲ್ಲಾ ಪಂಚಾಯಿತ್‌ಗಳಿದ್ದು ಇವುಗಳಲ್ಲಿ ಚುನಾಯಿತ ಸದಸ್ಯರಿರುತ್ತಾರೆ. ಇದರಂತೆ 5000 - 7000 ಜನಸಂಖ್ಯೆಗೆ ಓರ್ವ ಗ್ರಾಮಪಂಚಾಯತ್ ಸದಸ್ಯ, 8000 - 10000 ಜನಸಂಖ್ಯೆಗೆ ಓರ್ವ ತಾಲ್ಲೂಕು ಪಂಚಾಯತ್ ಸದಸ್ಯ ಮತ್ತು 50,000 ಜನಸಂಖ್ಯೆಗೆ ಓರ್ವ ಜಿಲ್ಲಾ ಪಂಚಾಯತ್ ಸದಸ್ಯರಿರುತ್ತಾರೆ. ಈ ಎಲ್ಲಾ ಪಂಚಾಯತ್‌ಗಳಲ್ಲೂ ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ 18 ಪ್ರತಿಶತ ಹಾಗೂ ಮಹಿಳೆಯರಿಗೆ ಶೇಕಡಾ 30 ಸ್ಥಾನಗಳನ್ನು ಮೀಸಲಿಡಲಾಗಿದೆ. ಆಡಳಿತದ ಎಲ್ಲಾ ಹಂತಗಳಲ್ಲೂ ಸುಧಾರಣೆ ತರುವ ನಿಟ್ಟಿನಲ್ಲಿ ಅಧಿಕಾರ ವಿಕೇಂದ್ರೀಕರಣ ನೂತನ ಪಂಚಾಯತ್ ವ್ಯವಸ್ಥೆಯ ವೈಶಿಷ್ಟ್ಯವಾಗಿದೆ. ಪಂಚಾಯತ್ ರಾಜ್ ವ್ಯವಸ್ಥೆಯ ಸಮರ್ಪಕ ನಿರ್ವಹಣೆಗೆ ರಾಜ್ಯ ಹಣಕಾಸು ಆಯೋಗ ಹಾಗೂ ಜಿಲ್ಲಾ ಯೋಜನಾ ಸಮಿತಿಗಳನ್ನು ರಚಿಸಲಾಗುವುದು. ವಿಧಾನಸಭೆ ಮತ್ತು ವಿಧಾನಪರಿಷತ್ತಿನ ಸದಸ್ಯರು ಹಾಗೂ ಪಾರ್ಲಿಮೆಂಟಿನ ಸದಸ್ಯರು ತಾಲ್ಲೂಕು ಪಂಚಾಯತ್ ಹಾಗೂ ಜಿಲ್ಲಾ ಪಂಚಾಯತ್‌ನ ಪದನಿಮಿತ್ತ ಸದಸ್ಯರಾಗಿರುವ ಇವರಿಗೆ ಮತಚಲಾಯಿಸುವ ಅಧಿಕಾರ ನೀಡಲಾಗಿದೆ. ಎಲ್ಲಾ ಹಂತಗಳಲ್ಲೂ ಆಡಳಿತ ವಿಕೇಂದ್ರೀಕರಣಕ್ಕೆ ಒತ್ತು ನೀಡುವ ಪಂಚಾಯತ್‌ರಾಜ್ಯ ವ್ಯವಸ್ಥೆಯನ್ನು ಶೀಘ್ರವಾಗಿ ಪ್ರಾರಂಭಿಸಲು ಈ ವರ್ಷದಲ್ಲೇ ಪಂಚಾಯತ್ ರಾಜ್ ಚುನಾವಣೆ ನಡೆಸಲು ಸರ್ಕಾರ ನಿರ್ಧರಿಸಿದೆ.

ರುಜುವಾತು ಗಾಗಿ ಇಲ್ಲಿ ಸಂಪರ್ಕಿಸಿ

ಚಿತ್ರದುರ್ಗ	ವಿ. ಕೃಷ್ಣನ್, ದೀಪಕ್ ಬುಕ್‌ಹೌಸ್.
ಉಡುಪಿ	ರಥಬೀದಿ ಗೆಳೆಯರು, ರಥಬೀದಿ, ಉಡುಪಿ. ದ. ಕ.
ಬಳ್ಳಾರಿ	ಕೆ. ಮಹಾಬಲೇಶ್ವರ, ಕನ್ನಡ ಉಪನ್ಯಾಸಕರು, ವೀರಶೈವ ಕಾಲೇಜು ಬಳ್ಳಾರಿ
ಧಾರವಾಡ	ಅರವಿಂದ ಕುಲಕರ್ಣಿ, ಅಭಿನಯ ಭಾರತಿ, ೧೬/ ೧ ನಂದಿಕೋಲಗುಡಿ ಓಣಿ - ೫೮೦ ೦೦೧
ಶಿವಮೊಗ್ಗ	ಹರಗೋಪಾಲ ಭಟ್, ಶ್ರೀಧರಾಶ್ರಮ, ಸೋಮಯ್ಯ ಲೇಔಟ್, ಬಿ. ಎಚ್. ರಸ್ತೆ ಶಿವಮೊಗ್ಗ
ಸೋಮವಾರ ಪೇಟೆ	ಎಚ್. ಎಮ್. ಶಿವಾನಂದ, ಉಪನ್ಯಾಸಕ, ಬಿ.ಟಿ.ಸಿ.ಜಿ. ಕಾಲೇಜು, ಸೋಮವಾರಪೇಟೆ ೫೭೧ ೨೩೬

ಕರ್ನಾಟಕದ ಭಾವೀ ಕೈಗಾರಿಕೋದ್ಯಮಿಗಳಿಗೆ

ಕೆ. ಎಸ್. ಎಫ್. ಸಿ

ಸ್ವಾಗತ

ಹಣವಿಲ್ಲದೆ ನಿಮ್ಮ ಯೋಜನೆಗಳು ಮೂಲೆ ಸೇರಬೇಕಿಲ್ಲ. ಕರ್ನಾಟಕದಲ್ಲಿ ಸ್ಥಾಪಿಸಲ್ಪಡುವ ನಿಮ್ಮ ಕೈಗಾರಿಕಾ ಯೋಜನೆಗೆ ಕೆ. ಎಸ್. ಎಫ್. ಸಿ ಯಿಂದ ಹಣ ಸಹಾಯ ದೊರೆಯುತ್ತದೆ.

ನಿಮ್ಮ ಅವಶ್ಯಕತೆಗಳಿಗೆ ಸರಿಹೊಂದುವಂತೆ ರೂಪಿಸಿದ ಹಣ ಸಹಾಯದ ಹಲವಾರು ವಿಧಾನಗಳು ನಮ್ಮಲ್ಲಿವೆ. ಈ ನೆರವಿನ ಯೋಜನೆಗಳಲ್ಲಿ ನಿಮ್ಮ ಅಗತ್ಯಕ್ಕೆ ಒಂದಾದರೂ ಸರಿಹೊಂದಬಹುದು.

ನಿಮ್ಮ ಹಣದ ಅವಶ್ಯಕತೆ ೧೫ ಲಕ್ಷ ರೂ. ಗಳಿಗಿಂತ ಕಡಿಮೆ ಇದ್ದಲ್ಲಿ ಜಿಲ್ಲಾ ಕೇಂದ್ರಗಳಲ್ಲಿ ಸ್ಥಾಪಿಸಲಾಗಿರುವ ನಮ್ಮ ಯಾವುದೇ ಶಾಖಾ ಕಛೇರಿಯನ್ನು ಸಂಪರ್ಕಿಸಿ ಹಾಗೂ ೧೫ ಲಕ್ಷ ರೂ. ಗಳಿಗೆ ಮೇಲ್ಪಟ್ಟು ೬೦ ಲಕ್ಷ ರೂ. ಗಳವರೆಗಿನ ಸಾಲಗಳಿಗಾಗಿ ನಮ್ಮ ಕೇಂದ್ರ ಕಛೇರಿಯ ಸಹಾಯ ಪಡೆಯಬಹುದು. ನಿಮ್ಮ ಯೋಜನೆಗಳೊಂದಿಗೆ ನಮ್ಮಲ್ಲಿಗೆ ಬನ್ನಿ, ನಿಮಗೆ ಸದಾ ಸ್ವಾಗತ.

ಹೆಚ್ಚಿನ ವಿವರಗಳನ್ನು ಇವರಿಂದ ಪಡೆಯಿರಿ.

ವ್ಯವಸ್ಥಾಪಕರು,

ಉದ್ಯಮಿಗಳ ಮಾರ್ಗದರ್ಶನ ವಿಭಾಗ, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ,

೨೫, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು ೫೬೦ ೦೦೧.

ಎಲ್ಲಾ ಜಿಲ್ಲೆಗಳಲ್ಲಿ ಶಾಖಾ ಕಛೇರಿಗಳಿವೆ.

ವಿದ್ಯುತ್ ಅನ್ವೇಷಣೆಯಲ್ಲಿ ನಿಮಗಾಗಿ

ಕರ್ನಾಟಕ ವಿದ್ಯುತ್ ನಿಗಮ ನಿಯಮಿತ

(ಕರ್ನಾಟಕ ರಾಜ್ಯ ಸರ್ಕಾರ ಸ್ವಾಮ್ಯದ ಸಂಸ್ಥೆ)

ಶಕ್ತಿ ಭವನ, ೮೨, ರೇಸ್ ಕೋರ್ಸ್ ರಸ್ತೆ

ಬೆಂಗಳೂರು - ೫೬೦ ೦೦೧

✷

ಕರ್ನಾಟಕ ವಿದ್ಯುತ್ ನಿಗಮವು ಆಕರ್ಷಕ ಬಡ್ಡಿ ದರದಲ್ಲಿ ಸಂಚಿತ / ಸಾವಧಿ ಠೇವಣಿಗಳನ್ನು ಸ್ವೀಕರಿಸುತ್ತದೆ.

✷

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ :

ದೂರವಾಣಿ: ೨೨೬೭೦೫೮, ೨೨೬೧೯೪೦, ೨೨೬೬೫೬೮

ರುಜುವಾತು ಪ್ರತಿಗಳಿಗೆ ಹಾಗೂ ಕನ್ನಡ ಪುಸ್ತಕಗಳಿಗೆ ಸಂದರ್ಶಿಸಿ

ಅತ್ರಿ ಬುಕ್ ಸೆಂಟರ್

೪, ಶರಾವತಿ ಕಟ್ಟಡ, ಬಲ್ಮಠ

ಮಂಗಳೂರು - ೫೭೫ ೦೦೧

ಶುಭಾಶಯಗಳೊಂದಿಗೆ

ಅಕ್ಷರ ಪ್ರಿಂಟರ್ಸ್

ಆಫ್‌ಸೆಟ್ ಮತ್ತು ಲೆಟರ್‌ಪ್ರೆಸ್ ಮುದ್ರಕರು

54/4, ಪೋಲಿಸ್‌ಸ್ಟೇಶನ್ ರಸ್ತೆ, ಬಸವನಗುಡಿ
ಬೆಂಗಳೂರು - 560 004.
ದೂರವಾಣಿ - 624082

ಶುಭಾಶಯಗಳೊಂದಿಗೆ

✷

ದಿ ಪ್ರಿಂಟರ್ಸ್ (ಮೈಸೂರು) ಲಿಮಿಟೆಡ್

೭೫, ಮಹಾತ್ಮ ಗಾಂಧಿ ರಸ್ತೆ
ಬೆಂಗಳೂರು - ೫೬೦ ೦೦೧

❄

ಡೆಕ್ಕನ್ ಹೆರಾಲ್ಡ್, ಪ್ರಜಾವಾಣಿ, ಸುಧಾ, ಮಯೂರ
ಪತ್ರಿಕೆಗಳ ಮಾಲೀಕರು.

RUJUVATHU Registered with the Registrar of Newspapers of India R.No. 36592/81. Printed and Published by **KAVI KAVYA** Heggodu 577 417, Editor U.R. Ananthamurthy.